ಗುರುವಾರ, ಜುಲೈ 8, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಜಾಗೃತಿ ಅಭಿಯಾನ**

ಚೆನ್ನೈನಲ್ಲಿ ಬುಧವಾರ ರಸ್ತೆ ಸುರಕ್ಷತೆ ಜಾಗೃತಿ ಅಭಿಯಾನದಲ್ಲಿ ಪಾಲ್ಗೊಂಡ ಸ್ವಯಂಸೇವಕರೊಬ್ಬರು ಹೆಲ್ಮೆಟ್ ಧರಿಸುವ ಮಹತ್ವ ಕುರಿತು ಅಣಕು ಪ್ರದರ್ಶನ ನಡೆಸಿದರು



110 ಹಳ್ಳಿ ಯೋಜನೆ ಕಾಮಗಾರಿ ವಿಳಂಬ: ಸಂಚಾರವೇ ದುಸ್ತರ

# ಚೆನ್ನಾಗಿದ್ದ ರಸ್ತೆ ಅಗೆದರು, ಬಿಟ್ಟು ಹೋದರು!

• ವಿಜಯಕುಮಾರ್ ಎಸ್.ಕೆ.



ಥಣಿಸಂದ್ರ 5ನೇ ಕ್ರಾಸ್ ರಸ್ತೆಯಲ್ಲಿ ಅರ್ಧಕ್ಕೆ ನಿಂತಿರುವ ಒಳಚರಂಡಿ ಕಾಮಗಾರಿ

**ಬೆಂಗಳೂರು:** ಜಲ್ಲಿ ತುಂಬಿದ ರಸ್ತೆಗಳು, ಅದರ ಮೇಲೆ ಮೊಳಕಾಲುದ್ದಕ್ಕೆ ಎದ್ದು ನಿಂತಿರುವ ಮ್ಯಾನ್‌ಹೋಲ್‌ಗಳು, ಅದನ್ನು ತಪ್ಪಿಸಿ ರಸ್ತೆಗಳಲ್ಲಿ ಸಂಚಲಿಸಲು ಪರದಾಡುವ ವಾಹನ ಸವಾರರು...

ಇದು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ 10 ಹಳ್ಳಿಗಳ ಸ್ಥಿತಿ. ಹೆಸರಿಗಷ್ಟೆ ಹಳ್ಳಿಯ ರೂಪದಲ್ಲಿದ್ದು, ಸುತ್ತಮುತ್ತ ಜಮೀನುಗಳಲ್ಲವೂ ಅಪಾರ್ಟ್‌ಮೆಂಟ್ ಸಮುಚ್ಚಯಗಳಾಗಿ ಮಾರ್ಪಟ್ಟಿವೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಥಣಿಸಂದ್ರ ಮುಖ್ಯ ರಸ್ತೆ ಈ ಭಾಗದಲ್ಲಿ ಹಾದುಹೋಗುವ ಕಾರಣ ನಗರ ವೇಗವಾಗಿ ಬೆಳೆಯುತ್ತಿದೆ. ಆದರೆ, ಮೂಲಸೌಕರ್ಯ ಮಾತ್ರ ಮರೀಚಿಕೆಯಾಗಿದೆ.

2007ರಲ್ಲಿ ಬಿಬಿಎಂಪಿ ಸೇರ್ಪಡೆಗೊಂಡ 110 ಹಳ್ಳಿಗಳಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲೂ 10ಕ್ಕೂ ಹೆಚ್ಚು ಹಳ್ಳಿಗಳಿವೆ. ಪಾಲಿಕೆ 5ನೇ ವಾರ್ಡ್(ಜಕ್ಕೂರು) ಮತ್ತು 6ನೇ ವಾರ್ಡ್‌ಗಳ (ಥಣಿಸಂದ್ರ) ಬಹುತೇಕ ಹಳ್ಳಿಗಳು ಬಿಬಿಎಂಪಿ ಸೇರ್ಪಡೆಯಾದವು. ಒಳಚರಂಡಿ ಮತ್ತು ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿ ಆರಂಭವಾಗುವ ಮುನ್ನ ಚೆನ್ನಾಗಿಯೇ ಇದ್ದ ಡಾಂಬರು ರಸ್ತೆಗಳಲ್ಲವೂ ಈಗ ಸಂಪೂರ್ಣ ಹಾಳಾಗಿವೆ.

ರಸ್ತೆಯನ್ನು ಅಗೆದು ಮುಚ್ಚಿರುವ ಗುರುತು ಮತ್ತು ಅಲ್ಲಲ್ಲಿ ಮೊಳಕಾಲುದ್ದ ತಲೆ ಎತ್ತಿ ನಿಂತಿರುವ ಮ್ಯಾನ್‌ಹೋಲ್‌ಗಳನ್ನು ನೋಡಿದರೆ 110 ಹಳ್ಳಿ ಯೋಜನೆಯ ಕಾಮಗಾರಿ ಎಂಬುದನ್ನು ಯಾರಾದರೂ ಹೇಳಬಹುದು. ಕೆಲವು ರಸ್ತೆಗಳಲ್ಲಿ ಜಲ್ಲಿ ಸುರಿದು ಅರ್ಧಕ್ಕೆ ಕಾಮಗಾರಿ ನಿಲ್ಲಿಸಲಾಗಿದೆ. ರಾಚೇನಹಳ್ಳಿಯ ಮುಖ್ಯ ರಸ್ತೆಗೆ ಮಾತ್ರ ಡಾಂಬರು ಕಾಣಿಸಲಾಗಿದ್ದು, ಅಡ್ಡರಸ್ತೆಗಳೆಲ್ಲವೂ ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿವೆ. ಅದರ ಮೇಲೆ ಕಸದ ರಾಶಿಯೂ ಅಲ್ಲಲ್ಲೇ ಬೆಳೆಯುತ್ತಿದ್ದು, ಜನರಿಗೆ ನರಕದರ್ಶನವಾಗುತ್ತಿದೆ.

ಆರ್.ಕೆ.ಹೆಗಡೆ ನಗರದ ಮುಖ್ಯ ವೃತ್ತದ ಮಲ್ಲೇಶ್ವರದ ಕೆಳಗೆ ಕುಡಿಯುವ ನೀರಿನ ದೊಡ್ಡ ಪೈಪ್ ಅಳವಡಿಸುವ ಕೆಲಸ ಆರಂಭಿಸಲಾಗಿದೆ. ಅಗೆದು ಪೈಪ್‌ಲೈನ್ ಅಳವಡಿಸಿ ಜಲ ಮಂಡಳಿ ಅಧಿಕಾರಿಗಳು ಬಿಟ್ಟು ಹೋಗಿದ್ದು, ಅದನ್ನು ಮುಚ್ಚಿ ಸಂಚಾರ ಯೋಗ್ಯ ಮಾಡುವ ಕೆಲಸ ಬಾಕಿಯೇ ಉಳಿದಿದೆ. ಹೆಗಡೆನಗರದ ಕಡೆಗೆ ಹೋಗುವ ಒಂದು ಭಾಗದ ರಸ್ತೆಯಲ್ಲಿ ಸಂಚಾರವನ್ನೂ ಹಲವು ತಿಂಗಳಿಂದ ಬಂದ್ ಮಾಡಲಾಗಿದೆ. ಆ ರಸ್ತೆ ಬದಿಯಲ್ಲಿರುವ ಅಂಗಡಿ ಮುಂಗಟ್ಟು, ಮನೆಗಳಿಗೆ ಜನ ಹೋಗುವುದೇ ಕಷ್ಟವಾಗಿದೆ.

'ಆಗಾಗ ಬರುವ ಅಧಿಕಾರಿಗಳು ಸಮಸ್ಯೆ ಸರಿಪಡಿಸುವ ಭರವಸೆ ನೀಡಿ ಹೋಗುತ್ತಾರೆ. ಅವರು ಮತ್ತೆ ಬರುವುದಿಲ್ಲ. ಅಂಗಡಿ ತೆರೆದರೂ ಜನ ಬರಲು ದಾರಿ ಇಲ್ಲದಾಗಿದೆ' ಎಂದು ವ್ಯಾಪಾರಿಗಳು ಅಳಲು ತೋಡಿಕೊಂಡರು.



**110 ಹಳ್ಳಿ**

**ಸಿಗದ ಅನುದಾನ ಬಿಬಿಎಂಪಿಗೆ ಅವಮಾನ**

### ಯಾವ್ಯಾವ ಹಳ್ಳಿಗಳಲ್ಲಿ ತೊಂದರೆ


ಥಣಿಸಂದ್ರ, ರಾಚೇನಹಳ್ಳಿ, ದಾಸರಹಳ್ಳಿ, ಆರ್.ಕೆ. ಹೆಗಡೆ ನಗರ, ಮರಿಯಣ್ಣ ಪಾಳ್ಯ, ಚೊಕ್ಕನಹಳ್ಳಿ, ಬೆಳ್ಳಹಳ್ಳಿ, ಸಂಪಿಗೆಹಳ್ಳಿ, ಪಾಲನಹಳ್ಳಿ, ತಿರುಮೇನಹಳ್ಳಿ.



**ಕಾವೇರಿ ನೀರಿನ ಪೈಪ್‌ಲೈನ್ ಅಳವಡಿಸಲು ಅಗೆದು ಬಿಟ್ಟು ಹೋಗಿ 3 ತಿಂಗಳಾಯಿತು. ಕಾಮಗಾರಿ ಮುಗಿದರೂ ಮುಚ್ಚದ ಕಾರಣ ವಾಹನ, ಜನರ ಸಂಚಾರಕ್ಕೆ ತೊಂದರೆಯಾಗಿದೆ**

**ಚಂದ್ರು,** ಬೇಕರಿ ಮಾಲೀಕ

### 'ಕ್ಷೇತ್ರದ ಜನರಿಗೆ ಸರ್ಕಾರದಿಂದ ಅನ್ಯಾಯ'



ಕೃಷ್ಣ ಬೈರೇಗೌಡ

'ಕ್ಷೇತ್ರದಲ್ಲಿ 110 ಹಳ್ಳಿ ಯೋಜನೆ ಕಾಮಗಾರಿ ನಡೆಯುತ್ತಿರುವ ಪ್ರದೇಶದಲ್ಲಿ 2 ಲಕ್ಷಕ್ಕೂ ಹೆಚ್ಚು ಜನರು ವಾಸವಿದ್ದಾರೆ. ಹಿಂದೆ ಅಭಿವೃದ್ಧಿಪಡಿಸಿದ್ದ ರಸ್ತೆಗಳನ್ನೆಲ್ಲಾ ಒಳಚರಂಡಿ ಕಾಮಗಾರಿಗಾಗಿ ಅಗೆಯಲಾಗಿದೆ. ಸರಿಪಡಿಸಲು ಅನುದಾನ ಕೇಳಿದರೆ ಸರ್ಕಾರ ₹25 ಕೋಟಿ ಮಾತ್ರ ಕೊಟ್ಟಿದೆ' ಎಂದು ಬ್ಯಾಟರಾಯನಪುರ ಕ್ಷೇತ್ರದ ಶಾಸಕ ಕೃಷ್ಣ ಬೈರೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

'ಕಾಂಗ್ರೆಸ್–ಜೆಡಿಎಸ್ ಸರ್ಕಾರದ ಅವಧಿಯಲ್ಲಿ ಹಂಚಿಕೆಯಾಗಿದ್ದ ₹400 ಕೋಟಿಯನ್ನು ಬಿಜೆಪಿ ಸರ್ಕಾರ ವಾಪಸ್ ಪಡೆಯಿತು. ಪ್ರತಿಭಟನೆ ನಡೆಸಿ ಮನವಿ ಮಾಡಿದಾಗ ಕೇವಲ ₹50 ಕೋಟಿ ನೀಡಲಾಯಿತು. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೇ ನನ್ನ ಕೈ ಹಿಡಿದು ಲೋಪ ಸರಿಪಡಿಸುವ ಭರವಸೆ ನೀಡಿದ್ದರು. ಆದರೆ, ಏನು ಪ್ರಯೋಜನ ಆಗಲಿಲ್ಲ' ಎಂದರು.

'ಈಗ ರಸ್ತೆ ಮರು ನಿರ್ಮಾಣಕ್ಕೆ ಬಿಜೆಪಿ ಶಾಸಕರಿರುವ ಕ್ಷೇತ್ರಗಳಿಗೆ ₹210 ಕೋಟಿ ತನಕ ಅನುದಾನ ನೀಡಲಾಗಿದೆ. ನಮ್ಮ ಕ್ಷೇತ್ರಕ್ಕೆ ₹110 ಕೋಟಿ ಕೇಳಲಾಗಿತ್ತು, ₹25 ಕೋಟಿಯಷ್ಟೇ ನೀಡಲಾಗಿದೆ. ಆಡಳಿತ ಪಕ್ಷದ ಶಾಸಕರ ಕ್ಷೇತ್ರಕ್ಕೆ ಅಲ್ಪ–ಸ್ವಲ್ಪ ಜಾಸ್ತಿ ನೀಡುವುದು ಸಾಮಾನ್ಯ. ಆದರೆ, ಈ ಸರ್ಕಾರ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ಎಂಟು ಪಟ್ಟು ಹೆಚ್ಚು ಅನುದಾನ ನೀಡಿ ನಮಗೆ ಬರಿಗೈ ಮಾಡಿದೆ. ಇದು ನನಗೆ ಮಾಡಿದ ಅನ್ಯಾಯ ಅಲ್ಲ, ಕ್ಷೇತ್ರದ ಜನರಿಗೆ ಮಾಡುತ್ತಿರುವ ಅನ್ಯಾಯ' ಎಂದು ಬೇಸರ ವ್ಯಕ್ತಪಡಿಸಿದರು.

'ಬೆಂಗಳೂರಿನ ಬೆಳವಣಿಗೆ ಎಲ್ಲ ಭಾಗದಲ್ಲೂ ಸಮಾನಾಂತರವಾಗಿ ಆಗಬೇಕು. ಒಂದೇ ಕಡೆ ಬೆಳವಣಿಗೆಯಾದರೆ ಅದು ಮುಂದಿನ ದಿನಗಳಲ್ಲಿ ಸಮಸ್ಯೆಗಳನ್ನು ತಂದೊಡ್ಡುತ್ತದೆ' ಎಂದು ಹೇಳಿದರು.

## ಸುದ್ದಿ 2 ನಿಮಿಷ

### ಖಾಸಗೀಕರಣಗೊಳಿಸಿ ಮೈಷುಗರ್ ಆರಂಭ: ಅಶ್ವತ್ಥ ನಾರಾಯಣ



**ಮದ್ದೂರು (ಮಂಡ್ಯ):** 'ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಖಾಸಗೀಕರಣಗೊಳಿಸಿ ಆರಂಭಿಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೈಷುಗರ್ ಕಾರ್ಖಾನೆ ನಡೆಯದೆ ಕಬ್ಬು ಬೆಳೆಗಾರರಿಗೆ ತೊಂದರೆಯಾಗುತ್ತಿದೆ. ಸರ್ಕಾರಿ ಸ್ವಾಮ್ಯದಲ್ಲಿದ್ದಾಗ ಅವ್ಯವಹಾರಗಳು ನಡೆದಿದ್ದರಿಂದಲೇ ಖಾಸಗೀಕರಣಗೊಳಿಸುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದರು.

ಕಾಲೇಜು ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆಯನ್ನು ತುರ್ತಾಗಿ ನೀಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ 1 ರಿಂದ 18 ವರ್ಷದೊಳಗಿನ ಮಕ್ಕಳಿಗೆ ನೀಡಲಾಗುತ್ತದೆ, ಆನಂತರ ಶಾಲೆಗಳನ್ನು ಆರಂಭಿಸಲಾಗುವುದು' ಎಂದರು.

**ಖಂಡನೆ:** 'ಖಾಸಗೀಕರಣಗೊಳಿಸದೆ ಸರ್ಕಾರಿ ಸ್ವಾಮ್ಯದಲ್ಲೇ ಕಾರ್ಖಾನೆ ಆರಂಭಿಸಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ' ಎಂದು ರೈತ ನಾಯಕಿ ಸುನಂದಾ ಜಯರಾಂ ಎಚ್ಚರಿಕೆ ನೀಡಿದ್ದಾರೆ.

### ಸವಿತಾ ಸಮಾಜಕ್ಕೆ ಹ್ಯಾರಿಸ್ ಅಪಮಾನ: ನರೇಂದ್ರ ಬಾಬು

**ಬೆಂಗಳೂರು:** ಶಾಂತಿನಗರದ ಕ್ಷೇತ್ರದ ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್ ಅವರು ರಸ್ತೆ ಪರಿಶೀಲನೆ ಮಾಡುವಾಗ ಸವಿತಾ ಸಮಾಜದವರ ವೃತ್ತಿಯನ್ನು ಅವಹೇಳನ ಮಾಡಿದ್ದು, ಅದಕ್ಕಾಗಿ ಕ್ಷಮೆ ಕೇಳಬೇಕು ಎಂದು ಬಿಜೆಪಿ ಒಬಿಸಿ ಮೋರ್ಚಾದ ರಾಜ್ಯ ಅಧ್ಯಕ್ಷ ನೆ.ಲ.ನರೇಂದ್ರ ಬಾಬು ಆಗ್ರಹಿಸಿದ್ದಾರೆ.

ಹ್ಯಾರಿಸ್ ಅವರ '.... ಮಾಡಿದಂಗೆ ರಸ್ತೆ ಮಾಡ್ತೀರಲ್ಲೇ' ಎಂದು ಹೇಳುವ ಮೂಲಕ ಸವಿತಾ ಸಮಾಜದ ವೃತ್ತಿಯನ್ನೇ ಅವಹೇಳನ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಎಲ್ಲ ಸಮುದಾಯ ಮತ್ತು ಜಾತಿಗಳಿಗೆ ಅವರವರ ವೃತ್ತಿ ಮಹತ್ವದ್ದು, ಅನ್ನ ಕೊಡುವ ವೃತ್ತಿಯ ಕುರಿತು ಕೀಳಾಗಿ ಮಾತನಾಡಿರುವುದು ಖಂಡನಾರ್ಹ. ವೃತ್ತಿ ಮತ್ತು ಸಮುದಾಯಕ್ಕೆ ಅವಮಾನ ಮಾಡುವುದು ಕಾಂಗ್ರೆಸ್ ಮುಖಂಡರ ಜಾಯಮಾನವಾಗಿದೆ. ಈ ಬಗ್ಗೆ ಸವಿತಾ ಸಮಾಜದ ಮುಖಂಡರು ನನ್ನ ಬಳಿ ಬಂದು ನೋವು ತೋಡಿಕೊಂಡಿದ್ದಾರೆ' ಎಂದು ನರೇಂದ್ರ ಬಾಬು ತಿಳಿಸಿದ್ದಾರೆ.


## ಕೋವಿಡ್ ಸಕ್ರಿಯ ಪ್ರಕರಣ ಸಾವಿರದೊಳಗೆ 20 ಜಿಲ್ಲೆ

**ಬೆಂಗಳೂರು:** ರಾಜ್ಯದಲ್ಲಿ 2,743 ಮಂದಿ ಕೋವಿಡ್ ಪೀಡಿತರಾಗಿರುವುದು ಬುಧವಾರ ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 28.62 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.66 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.64ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ಬೆಂಗಳೂರಿನಲ್ಲಿ 611 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗೆ ವರದಿಯಾಗಿವೆ. 14 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿ ಹಾಗೂ 6 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

3,081ಮಂದಿಗೆಕಾಯಿಲೆವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 27.87 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, 39,603 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. 20 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಸಾವಿರದ ಗಡಿಯೊಳಗಿದೆ. ಈ ಸಂಖ್ಯೆ ಯಾದಗಿರಿ, ಬೀದರ್ ಹಾಗೂ ರಾಯಚೂರು ಜಿಲ್ಲೆಯಲ್ಲಿ ನೂರರ ಗಡಿಯೊಳಗೆ ಇದೆ.

ಸೋಂಕಿತರಲ್ಲಿ 75 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 2.73 ರಷ್ಟು ವರದಿಯಾಗಿದೆ. ರಾಜ್ಯದ 21 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ಖಚಿತಪಟ್ಟಿವೆ. ದಕ್ಷಿಣ ಕನ್ನಡದಲ್ಲಿ 14 ಹಾಗೂ ಬೆಂಗಳೂರಿನಲ್ಲಿ 12 ಮಂದಿ ಸಾವಿಗೀಡಾಗಿದ್ದಾರೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 35,601ಕ್ಕೆ ತಲುಪಿದೆ.




ಜಯದೇವ ಹೃದ್ರೋಗ ಸಂಸ್ಥೆ ಅಧ್ಯಯನದಿಂದ ದೃಢ

## ಗುಣಮುಖರಿಗೆ ಹೃದಯಾಘಾತ ಸಮಸ್ಯೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಕಾಯಿಲೆಯಿಂದ ಚೇತರಿಸಿಕೊಂಡ ಬಳಿಕ ಮೂರರಿಂದ ನಾಲ್ಕು ವಾರಗಳ ಅವಧಿಯಲ್ಲಿ ಹೃದಯಾಘಾತ ಸಮಸ್ಯೆ ಕಾಣಿಸಿಕೊಳ್ಳುತ್ತಿರುವುದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

ಜೂನ್ ತಿಂಗಳ ದಾಖಲಾತಿ ಅನುಸಾರ ಸಂಸ್ಥೆಯು ಈ ಅಧ್ಯಯನ ನಡೆಸಿದೆ. ಇದರಿಂದಾಗಿ ಕೋವಿಡ್ ಕಾಯಿಲೆ ಕೂಡ ಹೃದಯಾಘಾತಕ್ಕೆ ಕಾರಣವಾಗಬಹುದು ಎನ್ನುವುದು ಅಧ್ಯಯನದಿಂದ ಗೊತ್ತಾಗಿದೆ.

ಸೋಂಕಿನಿಂದ ಚೇತರಿಸಿಕೊಂಡವರಲ್ಲಿ 26 ಮಂದಿ ಹೃದಯಾಘಾತಕ್ಕೆ ಒಳಗಾಗಿದ್ದು, ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆ ಪಡೆದುಕೊಂಡಿದ್ದಾರೆ. ಅವರಲ್ಲಿ 16 ಮಂದಿ ಮನೆ ಆರೈಕೆಗೆ ಒಳಗಾದವರಾಗಿದ್ದಾರೆ. ಉಳಿದವರು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು. ಮೂರರಿಂದ ನಾಲ್ಕು ವಾರಗಳ ಬಳಿಕ ಹೃದಯಾಘಾತ ಸಮಸ್ಯೆ ಅವರಲ್ಲಿ ಕಾಣಿಸಿಕೊಂಡಿದೆ. ಅಧ್ಯಯನಕ್ಕೆ ಒಳಪಟ್ಟವರಲ್ಲಿ ಶೇ 60ರಷ್ಟು ಮಂದಿ 50 ವರ್ಷದೊಳಗಿನವರಾಗಿದ್ದಾರೆ. ನಾಲ್ಕು ಮಂದಿಗೆ ಮಾತ್ರ ಈ ಮೊದಲೇ ಹೃದಯ ಸಂಬಂಧಿ ಸಮಸ್ಯೆಗಳು ಇದ್ದವು.



**ಕೋವಿಡ್‌ನಿಂದ ಚೇತರಿಸಿಕೊಂಡ 2–3 ವಾರಗಳ ಬಳಿಕ ಹೃದಯ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. ಇದರಿಂದ ಮುಂದಾಗುವ ಅಪಾಯ ತಡೆಯಬಹುದು**

**ಡಾ.ಸಿ.ಎನ್. ಮಂಜುನಾಥ್,**
ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ


'ಕೊರೊನಾ ಸೋಂಕು ದೇಹದ ವಿವಿಧ ಅಂಗಗಳಿಗೆ ಹಾನಿ ಮಾಡಲಿದೆ. ಕೋವಿಡ್‌ನಿಂದ ಚೇತರಿಸಿಕೊಂಡವರಿಗೆ ಹೃದಯಾಘಾತ ಸಾಧ್ಯತೆಯ ಬಗ್ಗೆ ಅಧ್ಯಯನವನ್ನು ನಡೆಸಲಾಗಿದೆ. 26 ಮಂದಿಯಲ್ಲಿ 10 ಜನರಿಗೆ ಮಧುಮೇಹ, ಅಧಿಕ ರಕ್ತದೊತ್ತಡ ಸೇರಿದಂತೆ ಯಾವುದೇ ಕೋವಿಡೇತರ ಸಮಸ್ಯೆ ಇರಲಿಲ್ಲ. ಆದರೂ ಹೃದಯಾಘಾತ ಸಂಭವಿಸಿದೆ. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆತ ಕಾರಣ ಎಲ್ಲರೂ ಚೇತರಿಸಿಕೊಂಡಿದ್ದಾರೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

**ರಕ್ತ ಹೆಪ್ಪುಗಟ್ಟುವಿಕೆ:** 'ಅಧ್ಯಯನಕ್ಕೆ ಒಳಪಟ್ಟವರಲ್ಲಿ ಶೇ 65 ಮಂದಿ ಪುರುಷರು ಹಾಗೂ ಶೇ 35 ರಷ್ಟು ಮಂದಿ ಮಹಿಳೆಯರಾಗಿದ್ದಾರೆ. ಕೊರೊನಾ ಸೋಂಕಿನ ತೀವ್ರತೆಗೆ ರಕ್ತ ಹೆಪ್ಪುಗಟ್ಟುವ ಸಾಧ್ಯತೆ ಇರುತ್ತದೆ. ಹೃದಯ ನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿದರೆ ಹೃದಯ ಸಮಸ್ಯೆ, ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿದರೆ ಪಾರ್ಶ್ವವಾಯು ಹಾಗೂ ಕಾಲಿನಲ್ಲಿ ರಕ್ತ ಹೆಪ್ಪುಗಟ್ಟಿದರೆ ಗ್ಯಾಂಗ್ರೀನ್‌ನಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ ಎನ್ನುವುದು ಅಧ್ಯಯನದಿಂದ ತಿಳಿದುಬಂದಿದೆ' ಎಂದು ವಿವರಿಸಿದರು.

'ಕೊರೊನಾ ಸೋಂಕಿತರು ಚೇತರಿಸಿಕೊಂಡು ಆಸ್ಪತ್ರೆಯಿಂದ ತೆರಳುವಾಗ 6ರಿಂದ 8 ವಾರಗಳ ಕಾಲ ರಕ್ತ ತಿಳಿಗೊಳಿಸುವ ಔಷಧ ಸೇವಿಸಲು ಸೂಚನೆ ನೀಡಲಾಗುತ್ತದೆ. ಯಾರು ಇದನ್ನು ಸರಿಯಾಗಿ ಪಾಲಿಸುವುದಿಲ್ಲವೋ ಅಂತಹವರಲ್ಲಿ ರಕ್ತ ಹೆಪ್ಪುಗಟ್ಟಿ, ಈ ರೀತಿಯ ಸಮಸ್ಯೆಗಳು ಕಾಣಿಸಿಕೊಳ್ಳಲಿವೆ' ಎಂದು ತಿಳಿಸಿದರು.

### ಸೌಮ್ಯ ಲಕ್ಷಣ: ಹೃದಯಾಘಾತ

'ಕೋವಿಡ್ ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣದಿಂದ ಚೇತರಿಸಿಕೊಂಡವರಿಗೆ ಕೂಡ ಹೃದಯಾಘಾತ ಸಮಸ್ಯೆ ಕಾಣಸಿಕೊಂಡಿದೆ. ಕೋವಿಡ್ ಮೊದಲ ಅಲೆಯಲ್ಲಿ ಸೋಂಕಿನಿಂದ ಗುಣಮುಖರಾದವಲ್ಲಿ ಶೇ 5ರಷ್ಟು ಮಂದಿ ಹೃದಯಾಘಾತಕ್ಕೆ ಒಳಗಾಗುತ್ತಿದ್ದರು. ಎರಡನೇ ಅಲೆಯಲ್ಲಿ ಸೋಂಕಿನ ತೀವ್ರತೆಗೆ ಹಲವರು ಗಂಭೀರವಾಗಿ ಅಸ್ವಸ್ಥರಾಗಿದ್ದರು. ಇದರಿಂದಾಗಿ ಕೆಲವರು ದೀರ್ಘಕಾಲ ಔಷಧ ಪಡೆದುಕೊಂಡಿದ್ದರು. ಇದು ಕೂಡ ಹೃದಯಾಘಾತ ಸಮಸ್ಯೆಗೆ ಒಳಗಾಗುವರ ಸಂಖ್ಯೆ ಹೆಚ್ಚಳಕ್ಕೆ ಕಾರಣವಾಗಿದೆ. ಹಾಗಾಗಿ, ಹೃದಯಾಘಾತ ಸಮಸ್ಯೆ ತಪ್ಪಿಸಲು ಇಸಿಜಿ, ಎಕೊ, ಥ್ರೆಡ್‌ಮಿಲ್ ಪರೀಕ್ಷೆಗಳನ್ನು ಒಮ್ಮೆ ಮಾಡಿಸಿಕೊಳ್ಳಬೇಕು' ಎಂದು ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.




## ಲ್ಯಾಂಬ್ಡಾ: ಕೊರೊನಾ ವೈರಸ್‌ನ ಹೊಸ ತಳಿ

**ವಿಶ್ವಸಂಸ್ಥೆ:** ಕೊರೊನಾ ವೈರಸ್‌ನ ಹೊಸ ರೂಪಾಂತರ ತಳಿ 'ಲ್ಯಾಂಬ್ಡಾ' ಕಾಣಿಸಿಕೊಂಡಿದೆ. ಈ ತಳಿಯ ಸೋಂಕಿನ ಪ್ರಸರಣ ಜಗತ್ತಿಗೆ ಹೊಸ ಅಪಾಯ ತಂದೊಡ್ಡಬಹುದಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಭಿಪ್ರಾಯಪಟ್ಟಿದೆ.

ಅಮೆರಿಕ, ಬ್ರಿಟನ್, ಫ್ರಾನ್ಸ್, ಇಟಲಿ, ಜರ್ಮನಿ ಸೇರಿದಂತೆ 31 ರಾಷ್ಟ್ರಗಳಲ್ಲಿ ಈ ತಳಿಯ ಸೋಂಕಿನ ಪ್ರಕರಣಗಳು ವರದಿಯಾಗಿವೆ. ಭಾರತದಲ್ಲಿ ಈ ವರೆಗೆ ಈ ತಳಿಯ ಸೋಂಕಿನ ಪ್ರಕರಣಗಳು ವರದಿಯಾಗಿಲ್ಲ ಎಂದು ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.



'ವೈರಸ್‌ನ ಲ್ಯಾಂಬ್ಡಾ ತಳಿಯ ಸೋಂಕು ತೀವ್ರವಾಗಿ ಪ್ರಸರಣವಾಗಬಲ್ಲದು. ಕೋವಿಡ್ ಲಸಿಕೆಗಳಿಗೆ ಈ ತಳಿಯ ವೈರಸ್ ಪ್ರತಿರೋಧ ಒಡ್ಡುವ ಸಾಧ್ಯತೆಗಳಿವೆ. ಆದರೆ, ಈ ವಾದವನ್ನು ಪುಷ್ಟೀಕರಿಸುವ ವೈಜ್ಞಾನಿಕ ಆಧಾರಗಳು ಲಭ್ಯವಿಲ್ಲ' ಎಂದು ಬ್ರಿಟನ್‌ನ ಆರೋಗ್ಯ ಸಂಸ್ಥೆ 'ಪಬ್ಲಿಕ್ ಹೆಲ್ತ್ ಇಂಗ್ಲೆಂಡ್'ನ (ಪಿಎಚ್‌ಇ) ವಿಜ್ಞಾನಿಗಳು ಹೇಳಿದ್ದಾರೆ.

## ಸ್ಟ್ಯಾನ್ ಸ್ವಾಮಿ ಸಾವು: ಲಾಕಪ್‌ಡೆತ್ ಪ್ರಕರಣ ದಾಖಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಫಾದರ್ ಸ್ಟ್ಯಾನ್ ಸ್ವಾಮಿ ಅವರ ಸಾವಿನ ಪ್ರಕರಣವನ್ನು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮದನ್ ಬಿ. ಲೋಕೂರ್ ಅವರ ಅಭಿಪ್ರಾಯದಂತೆಯೇ 'ಲಾಕಪ್ ಡೆತ್' ಎಂದು ಪರಿಗಣಿಸಿ, ವಿಚಾರಣೆ ನಡೆಸಬೇಕು' ಎಂದು ಕಡಿದಾಳು ಶಾಮಣ್ಣ, ದೇವನೂರ ಮಹಾದೇವ, ರಾಜೇಶ್ವರಿ ತೇಜಸ್ವಿ, ಸಾರಾ ಅಬೂಬಕ್ಕರ್, ವೈದೇಹಿ, ಡಿ.ಎಸ್. ನಾಗಭೂಷಣ ಸೇರಿದಂತೆ ಚಿಂತಕರು, ಬರಹಗಾರರು, ಹೋರಾಟಗಾರರು ಆಗ್ರಹಿಸಿದ್ದಾರೆ.

ಈ ಕುರಿತು ಬುಧವಾರ ಜಂಟಿ ಹೇಳಿಕೆ ನೀಡಿರುವ ಅವರು, 'ಸ್ಟ್ಯಾನ್ ಸ್ವಾಮಿಯವರ ಸಾವಿನ ಪ್ರಕರಣ ಮಾನವೀತೆಯ ಪಸೆಯುಳ್ಳ ಯಾರನ್ನಾದರೂ ತಲ್ಲಣಗೊಳಿಸುವಂಥ ಘಟನೆ. ಈ ಪ್ರಕರಣವು, ಸೆರೆಮನೆಗಳಲ್ಲಿ ಕೊಳೆಯುತ್ತಿರುವ ಲಕ್ಷಾಂತರ ಜನ 'ನಿರಪರಾಧಿ'ಗಳ ದುಸ್ಥಿತಿಯ ಬಗ್ಗೆ ನಮ್ಮ ಗಮನ ಸೆಳೆಯುವಂತೆ ಮಾಡಿದೆ. ಸ್ಟ್ಯಾನ್ ಸ್ವಾಮಿಯವರ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಸೂಕ್ತ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ನಾಗೇಶ್ ಹೆಗಡೆ, ಬಿ.ಎನ್. ಶ್ರೀರಾಮ, ರಾಜೇಂದ್ರ ಚೆನ್ನಿ, ಎಚ್.ಎಸ್. ರಾಘವೇಂದ್ರ ರಾವ್, ಸವಿತಾ ನಾಗಭೂಷಣ, ಓ.ಎಲ್. ನಾಗಭೂಷಣಸ್ವಾಮಿ, ಸಿ.ಚೆನ್ನಬಸವಣ್ಣ, ಸಂತೋಷ್ ಕೌಲಗಿ, ಕೆ.ಟಿ.ಗಂಗಾಧರ, ಚುಕ್ಕಿ ನಂಜುಂಡಸ್ವಾಮಿ, ಆರ್.ಪಿ. ವೆಂಕಟೇಶಮೂರ್ತಿ, ಇಂದೂಧರ ಹೊನ್ನಾಪುರ, ಜಿ.ಬಿ. ಶಿವರಾಜು, ವೆಂಕಟೇಶ ಮಾಚಕನೂರ, ಎಂ.ಜಿ. ಈಶ್ವರಪ್ಪ ಮತ್ತು ಶೇಖರ್ ಗೌಳೇರ್ ಜಂಟಿ ಹೇಳಿಕೆಗೆ ಸಹಿ ಮಾಡಿದ್ದಾರೆ.

'ಖಾಸಗಿ ಕಂಪನಿಗಳು ನಡೆಸುತ್ತಿದ್ದ ಪರಿಸರ ನಾಶ ಮತ್ತು ಅಕ್ರಮ ಗಣಿಗಾರಿಕೆ ವಿರುದ್ಧ ಹೋರಾಟ ನಡೆಸು ಜೈಲು ಸೇರಿದ್ದ ಜಾರ್ಖಂಡ್‌ನ ಆದಿವಾಸಿಗಳ ಪರವಾಗಿ ಸ್ಟ್ಯಾನ್ ಸ್ವಾಮಿ ಹೋರಾಡುತ್ತಿದ್ದರು. ಇದೇ ಕಾರಣಕ್ಕಾಗಿ ಪ್ರಭುತ್ವವು, ಪ್ರಧಾನಿ ನರೇಂದ್ರ ಮೋದಿ ಅವರ ಕೊಲೆಗೆ ಸಂಚು ರೂಪಿಸಿದ ಆರೋಪವನ್ನು ಅವರ ಮೇಲೆ ಹೊರಿಸಿತ್ತು. ಸರ್ಕಾರ ಮತ್ತು ತನಿಖಾ ಸಂಸ್ಥೆಗಳು ಸ್ವಾಮಿಯವರ ವಿಚಾರದಲ್ಲಿ ಅತ್ಯಂತ ನಿರ್ದಯವಾಗಿ ನಡೆದುಕೊಂಡಿವೆ' ಎಂದು ದೂರಿದ್ದಾರೆ.

ವಯಸ್ಸು ಮತ್ತು ಅನಾರೋಗ್ಯದ ಕಾರಣ ನೀಡಿ ಜಾಮೀನು ಕೋರಿದ್ದ ಅರ್ಜಿಯನ್ನು ವಿಚಾರಣಾ ನ್ಯಾಯಾಲಯ ತಿರಸ್ಕರಿಸಿತ್ತು. ಲೋಟ ಎತ್ತಿ ನೀರು ಕುಡಿಯಲಾಗದ, ಆಹಾರ ಸೇವಿಸಲಾಗದ ಅಸಹಾಯಕ ಸ್ಥಿತಿಯಲ್ಲಿದ್ದ ಸ್ಟ್ಯಾನ್ ಸ್ವಾಮಿ ಅವರಿಗೆ ಹೀರು ಕೊಳವೆ ನೀಡುವುದರ ಕುರಿತು ಅಭಿಪ್ರಾಯ ನೀಡುವುದಕ್ಕೆ ತನಿಖಾ ಸಂಸ್ಥೆ ಇಪ್ಪತ್ತು ದಿನಗಳನ್ನು ತೆಗೆದುಕೊಂಡಿತ್ತು. ಜಾಮೀನು ಅರ್ಜಿಗೆ ಸಂಬಂಧಿಸಿ ಮುಂಬೈ ಹೈಕೋರ್ಟ್ ನೀಡಿದ್ದ ನೋಟಿಸ್‌ಗೆ ಎರಡು ತಿಂಗಳ ಬಳಿಕ ಉತ್ತರ ಸಲ್ಲಿಸಿತು. ಇಷ್ಟೆಲ್ಲ ಮಾಡಿದ ಪ್ರಭುತ್ವ ಈಗ ಸಾವಿನ ಪ್ರಕರಣದ ಹೊಣೆಯಿಂದ ಪಾರಾಗಲು ಯತ್ನಿಸುತ್ತಿದೆ ಎಂದು ಟೀಕಿಸಿದ್ದಾರೆ.

'ನಮ್ಮ ನ್ಯಾಯಾಂಗ ವ್ಯವಸ್ಥೆ ಹೇಗೆ ಅಸಹಾಯಕವಾಗಿದೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿ. ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯ ದೌರ್ಬಲ್ಯದಿಂದ ವಿಚಾರಣೆಯೇ ಇಲ್ಲದೆ ಸೆರೆಮನೆಗಳಲ್ಲಿ ಕೊಳೆಯುತ್ತಿರುವವರ ಬಗ್ಗೆ ಚಿಂತಿಸುವಂತೆ ಮಾಡಿದೆ ಈ ಪ್ರಕರಣ' ಎಂದು ಹೇಳಿದ್ದಾರೆ.

### ಜೈಲಿನಲ್ಲಿ ಉಪವಾಸ ಸತ್ಯಾಗ್ರಹ

**ಮುಂಬೈ (ಪಿಟಿಐ):** ಎಲ್ಗಾರ್ ಪರಿಷತ್ ಸಭೆ, ಭೀಮಾ ಕೋರೆಗಾಂವ್ ಹಿಂಸಾಚಾರ ಪ್ರಕರಣದ ಆರೋಪಿ ಸ್ಟ್ಯಾನ್ ಸ್ವಾಮಿ ಅವರ ನಿಧನವನ್ನು ಸಾಂಸ್ಥಿಕ ಹತ್ಯೆಯೆಂದು ಆರೋಪಿಸಿ, ಪ್ರಕರಣದ ಹತ್ತು ಸಹಆರೋಪಿಗಳು ತಾನೋಜಿ ಜೈಲಿನಲ್ಲಿ ಬುಧವಾರ ಒಂದು ದಿನದ ಉಪವಾಸ ಸತ್ಯಾಗ್ರಹ ನಡೆಸಿದರು.

ಸ್ವಾಮಿ ಅವರ ಸಾವಿನ ನ್ಯಾಯಾಂಗ ತನಿಖೆಯನ್ನು ನಡೆಸಬೇಕು ಎಂದೂ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಒತ್ತಾಯಿಸಿದರು.

**ಅಮೆರಿಕದಲ್ಲಿ ಬೇಸರ (ವಾಷಿಂಗ್ಟನ್ ವರದಿ):** ಸ್ಟ್ಯಾನ್ ಸ್ವಾಮಿ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ಇಂಡೋ–ಅಮೆರಿಕನ್ ಗುಂಪುಗಳು, ಸ್ವಾಮಿ ಅವರು ಭಾರತದಲ್ಲಿ ಬಡ ಬುಡಕಟ್ಟು ಜನಾಂಗದವರ ಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಸಮಾಜ ಸೇವಕ ಎಂದು ಬಣ್ಣಿಸಿವೆ.

ಲಸಿಕೆ ಹಾಕಿಸಿಕೊಳ್ಳಲು ಆರೋಗ್ಯ ಇಲಾಖೆ ಮನವಿ

## 'ಗರ್ಭಿಣಿಯರಿಗೆ ಕೋವಿಡ್ ಲಸಿಕೆ ಸುರಕ್ಷಿತ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗರ್ಭಿಣಿಯರು ಕೋವಿಡ್ ಲಸಿಕೆ ಪಡೆದುಕೊಳ್ಳುವುದು ಸುರಕ್ಷಿತವಾಗಿದ್ದು, ಅಡ್ಡ ಪರಿಣಾಮಗಳು ಕಾಣಿಸಿಕೊಳ್ಳುವುದಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಕೆಲ ದಿನಗಳ ಹಿಂದಷ್ಟೇ ಕೇಂದ್ರ ಆರೋಗ್ಯ ಸಚಿವಾಲಯವು ಗರ್ಭಿಣಿಯರಿಗೆ ಲಸಿಕೆ ಒದಗಿಸುವ ಸಂಬಂಧ ಮಾರ್ಗಸೂಚಿಯನ್ನು ಹೊರಡಿಸಿದೆ. ಮಗು ಮತ್ತು ತಾಯಿಯ ಆರೋಗ್ಯದ ದೃಷ್ಟಿಯಿಂದ ಲಸಿಕೆಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು ಎಂದು ಸೂಚಿಸಿತ್ತು. ಆದರೂ ರಾಜ್ಯದಲ್ಲಿ ಕೆಲ ಗರ್ಭಿಣಿಯರು ಲಸಿಕೆ ಪಡೆಯಲು ಹಿಂದೇಟು ಹಾಕುತ್ತಿರುವ ಕಾರಣ ಆರೋಗ್ಯ ಇಲಾಖೆಯು ಈ ಬಗ್ಗೆ ಸ್ಪಷ್ಟನೆ ನೀಡಿದೆ.

'ಗರ್ಭಿಣಿಯರೂ ಒಳಗೊಂಡಂತೆ 18 ವರ್ಷ ಮೇಲ್ಪಟ್ಟ ಎಲ್ಲರೂ ಕೋವಿಡ್ ಲಸಿಕೆ ಪಡೆಯಲು ಅರ್ಹರಾಗಿರುತ್ತಾರೆ. ಕೊರೊನಾ ಸೋಂಕಿತ ಗರ್ಭಿಣಿಯರು ಗಂಭೀರ ಸ್ವರೂಪದ ಕಾಯಿಲೆಗಳನ್ನು ಎದುರಿಸುವ ಸಂಭವ ಹೆಚ್ಚು. ಭ್ರೂಣದ ಮೇಲೂ ಪರಿಣಾಮ ಬೀರಬಹುದು. ಆದ್ದರಿಂದ ಗರ್ಭಿಣಿಯರು ಕೋವಿಡ್ ಲಸಿಕೆ ಪಡೆದುಕೊಳ್ಳುವಂತೆ ಶಿಫಾರಸು ಮಾಡಲಾಗಿದೆ' ಎಂದು ಇಲಾಖೆ ತಿಳಿಸಿದೆ.

'35 ವರ್ಷ ಮೇಲ್ಪಟ್ಟವರು, ಅಧಿಕ ತೂಕ ಹೊಂದಿರುವವರು, ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಸಮಸ್ಯೆ ಇರುವವರು, ರಕ್ತ ಹೆಪ್ಪುಗಟ್ಟುವ ಅಪಾಯ ಇರುವ ಗರ್ಭಿಣಿಯರಿಗೆ ಕೊರೊನಾ ಸೋಂಕು ಅಪಾಯವನ್ನುಂಟು ಮಾಡುವ ಸಾಧ್ಯತೆ ಇರುತ್ತದೆ. ಕೋವಿಡ್ ಪೀಡಿತ ಗರ್ಭಿಣಿಯರಿಗೆ ಅವಧಿಪೂರ್ವ ಹೆರಿಗೆ, ಶಿಶುವಿನ ತೂಕ 2.5 ಕೆ.ಜಿ.ಗಿಂತ ಕಡಿಮೆ, ಅಪರೂಪದ ಸನ್ನಿವೇಶದಲ್ಲಿ ಜನಿಸಿದ ಶಿಶು ಮರಣ ಹೊಂದುವ ಸಾಧ್ಯತೆ ಇರುತ್ತದೆ. ಕೋವಿಡ್ ಲಸಿಕೆಯನ್ನು ಗರ್ಭಾವಸ್ಥೆಯ ಯಾವುದೇ ಸಮಯದಲ್ಲಾದರೂ ಪಡೆದುಕೊಳ್ಳಬಹುದು. ಆದರೆ, ಸಾಧ್ಯವಾದಷ್ಟು ಬೇಗ ಪಡೆದುಕೊಳ್ಳುವುದು ಒಳಿತು' ಎಂದು ಹೇಳಲಾಗಿದೆ.

**ಸಹಜ ಲಕ್ಷಣ ಗೋಚರ:** 'ಲಸಿಕೆ ಪಡೆದ ಜಾಗದಲ್ಲಿ ನೋವು, ಮೂರು ದಿನಗಳವರೆಗೆ ಅಸ್ವಸ್ಥತೆಯಂತಹ ಲಕ್ಷಣಗಳು ಲಸಿಕೆ ಪಡೆದ ಬಳಿಕ ಸಹಜವಾಗಿ ಕಾಣಿಸಿಕೊಳ್ಳುತ್ತವೆ. ಇವು ಲಸಿಕೆಯ ಅಡ್ಡ ಪರಿಣಾಮಗಳಲ್ಲ. ಲಸಿಕೆಯಿಂದ ಭ್ರೂಣ ಹಾಗೂ ಮಗುವಿನ ಮೇಲೆ ಉಂಟಾಗಬಹುದಾದಂತಹ ದೀರ್ಘಾವಧಿ ಅಡ್ಡ ಪರಿಣಾಮಗಳು ಮತ್ತು ಅಸುರಕ್ಷತೆ ಕುರಿತಂತೆ ಇದುವರೆಗೂ ಯಾವುದೇ ವರದಿಯಾಗಿಲ್ಲ' ಎಂದು ತಿಳಿಸಲಾಗಿದೆ.

'ಒಂದು ವೇಳೆ ಕೋವಿಡ್ ಲಸಿಕೆ ಪಡೆದ ಬಳಿಕ ಉಸಿರಾಟದಲ್ಲಿ ತೊಂದರೆ, ಎದೆನೋವು, ಸಣ್ಣ ಸಣ್ಣ ಕೆಂಪು ಮಚ್ಚೆಗಳು, ಲಸಿಕೆ ಪಡೆದ ಜಾಗದಲ್ಲಿ ಚರ್ಮದ ಮೇಲೆ ತರಚು ಗಾಯಗಳು, ತೀವ್ರ ತಲೆನೋವು, ವಾಂತಿ ಅಥವಾ ಹೊಟ್ಟೆನೋವು, ಕಣ್ಣು ಮಂಜಾಗುವುದು ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಂಡಲ್ಲಿ ಆಸ್ಪತ್ರೆಗೆ ಭೇಟಿ ನೀಡಿ, ತಪಾಸಣೆ ಮಾಡಿಸಿಕೊಳ್ಳಬೇಕು' ಎಂದು ಇಲಾಖೆ ಸೂಚಿಸಿದೆ.

### ಪಾಲಿಟೆಕ್ನಿಕ್‌ಗಳಲ್ಲಿ ಲಸಿಕೆ ಅಭಿಯಾನ

ರಾಜ್ಯದ ಪಾಲಿಟೆಕ್ನಿಕ್‌ಗಳಲ್ಲಿರುವ 18 ವರ್ಷ ತುಂಬಿರುವ ವಿದ್ಯಾರ್ಥಿಗಳಿಗೆ ಮತ್ತು ಬೋಧಕ, ಬೋಧಕೇತರ ಸಿಬ್ಬಂದಿಗೆ ಆದ್ಯತೆಯಲ್ಲಿ ಕೋವಿಡ್ ಲಸಿಕೆ ನೀಡಲು ನೋಡಲ್ ಅಧಿಕಾರಿಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆ ನೇಮಿಸಿದೆ.

ಸರ್ಕಾರಿ ಪಾಲಿಟೆಕ್ನಿಕ್‌ಗಳ ಕೆಲವು ಕಾಲೇಜುಗಳನ್ನು ಪ್ರಮುಖವೆಂದು ಗುರುತಿಸಿ, ಆ ಕಾಲೇಜುಗಳ ಪ್ರಾಂಶುಪಾಲರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ.

ಒಟ್ಟು 30 ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಜಿಲ್ಲಾಡಳಿತ, ಜಿಲ್ಲಾ ಆರೋಗ್ಯಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಲಸಿಕೆ ಅಭಿಯಾನದ ಯಶಸ್ಸಿಗೆ ಅಗತ್ಯವಾದ ಎಲ್ಲ ರೀತಿಯ ಕಾರ್ಯವನ್ನು ನೋಡಲ್ ಅಧಿಕಾರಿಗಳು ಮಾಡಬೇಕು ಎಂದು ಇಲಾಖೆ ತಿಳಿಸಿದೆ.

ನೋಡಲ್ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪಾಲಿಟೆಕ್ನಿಕ್‌ಗಳಲ್ಲಿರುವ 18 ವರ್ಷ ದಾಟಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಬೋಧಕ, ಬೋಧಕೇತರ ಸಿಬ್ಬಂದಿ ವರ್ಗ ಲಸಿಕೆ ಪಡೆಯಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದೂ ಇಲಾಖೆ ಸೂಚಿಸಿದೆ.

## ಸಂಕ್ಷಿಪ್ತ ಸುದ್ದಿ

### ಜು. 12 ರಿಂದ ಕೇರಳಕ್ಕೆ ಬಸ್ ಸಂಚಾರ

**ಬೆಂಗಳೂರು:** ಮೈಸೂರು, ಮಂಗಳೂರು, ಪುತ್ತೂರು, ಬೆಂಗಳೂರಿನಿಂದ ಕೇರಳ ರಾಜ್ಯಕ್ಕೆ ಜು.12ರಿಂದ ಬಸ್ ಸಂಚಾರ ಆರಂಭಿಸಲು ಕೆಎಸ್‌ಆರ್‌ಟಿಸಿ ನಿರ್ಧರಿಸಿದೆ.

ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ ಬಸ್‌ಗಳ ಕಾರ್ಯಾಚರಣೆ ಆರಂಭವಾಗಲಿದೆ. ಕೇರಳದಿಂದ ಬಸ್‌ನಲ್ಲಿ ಬರುವ ಪ್ರಯಾಣಿಕರು 72 ಗಂಟೆಗಳ ಒಳಗೆ ಕೋವಿಡ್ ಪರೀಕ್ಷೆ ಮಾಡಿಸಿದ ನೆಗೆಟಿವ್ ವರದಿ ಅಥವಾ ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು. ಪ್ರತಿನಿತ್ಯ ರಾಜ್ಯಕ್ಕೆ ಬಂದು ಹೋಗುವ ಪ್ರಯಾಣಿಕರು 15 ದಿನಗಳಿಗೊಮ್ಮೆ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಿದ ನೆಗೆಟಿವ್ ವರದಿ ಹೊಂದಿರಬೇಕು' ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

### ಮತಾಂತರ ನಿಷೇಧ ಕಾಯ್ದೆ ಜಾರಿಗೆ ಆಗ್ರಹ

**ಬೆಂಗಳೂರು:** 'ಮತಾಂತರ ನಿಷೇಧ ಕಾಯ್ದೆಯನ್ನು ತಕ್ಷಣ ಜಾರಿಗೆ ತರಬೇಕು' ಎಂದು ಆಗ್ರಹಿಸಿ ರಾಜ್ಯ ಯುವ ವಕೀಲರ ತಂಡ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ವಕೀಲ ಶ್ರೀನಿಧಿ ಲಿಂಗಪ್ಪ ನೇತೃತ್ವದಲ್ಲಿ ವಕೀಲರ ತಂಡ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರನ್ನು ಬುಧವಾರ ಭೇಟಿ ಮಾಡಿ ಮನವಿ ಸಲ್ಲಿಸಿದೆ.

'ಕೆಲವು ರಾಜ್ಯಗಳು ಈ ಕಾಯ್ದೆಯನ್ನು ಈಗಾಗಲೇ ಅನುಷ್ಠಾನ ಮಾಡಿವೆ. ಅದರಂತೆ ರಾಜ್ಯದಲ್ಲೂ ಕಾಯ್ದೆ ಜಾರಿ ಮಾಡಬೇಕಾಗಿದೆ. ಮತಾಂತರ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಸಮೀಕ್ಷೆ ನಡೆಸಿ ನಾವು ಈ ಮನವಿ ಸಲ್ಲಿಸಿದ್ದೇವೆ. ಈ ಬಗ್ಗೆ ಶೀಘ್ರದಲ್ಲಿ ಕ್ರಮ ಕೈಗೊಳ್ಳುವುದಾಗಿ ಬೊಮ್ಮಾಯಿ ಭರವಸೆ ನೀಡಿದ್ದಾರೆ' ಎಂದು ಶ್ರೀನಿಧಿ ಲಿಂಗಪ್ಪ ತಿಳಿಸಿದರು.

### ಸಚಿವ ಈಶ್ವರಪ್ಪಗೆ ಕೋರ್ಟ್ ಸಮನ್ಸ್

**ಶಿವಮೊಗ್ಗ:** ಮಾನನಷ್ಟ ಪ್ರಕರಣವೊಂದರಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರಿಗೆ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಸಮನ್ಸ್ ಜಾರಿ ಮಾಡಿದೆ.

ತಮ್ಮ ವಿರುದ್ಧ ಈಶ್ವರಪ್ಪ ಅವರು ಅಸಂಮಜಸ ಪದ ಬಳಕೆ ಮಾಡಿದ್ದಾರೆ ಎಂದು ದೂರಿ ಶಿವಮೊಗ್ಗದ ವಕೀಲರೊಬ್ಬರು ಮಾನನಷ್ಟ ಮೊಕದ್ದಮೆ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ರದ್ದು ಕೋರಿ ಈಶ್ವರಪ್ಪ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಮಾನನಷ್ಟ ಮೊಕದ್ದಮೆ ಅರ್ಜಿ ವಜಾಗೊಳಿಸಲು ಹೈಕೋರ್ಟ್ ನಿರಾಕರಿಸಿತ್ತು.

## ಕೋವಿಡ್ ಆರೈಕೆ ಕೇಂದ್ರಗಳ ಸಂಖ್ಯೆ ಗಣನೀಯ ಇಳಿಕೆ

**ಬೆಂಗಳೂರು:** ನಗರದಲ್ಲಿ ಕೋವಿಡ್ ಹರಡುವಿಕೆ ಪ್ರಮಾಣ ಗಣನೀಯವಾಗಿ ಕಡಿಮೆಯಾದ ಬಳಿಕ ಕೋವಿಡ್ ರೋಗಿಗಳ ಆರೈಕೆ ಕೇಂದ್ರಗಳ ಸಂಖ್ಯೆಯನ್ನು ಬಿಬಿಎಂಪಿ ಗಣನೀಯವಾಗಿ ಕಡಿತಗೊಳಿಸಿದೆ.


ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಕೆಲ ದಿನಗಳ ಹಿಂದೆ ಬಿಬಿಎಂಪಿ ವ್ಯಾಪ್ತಿಯ ಕೋವಿಡ್ ಆರೈಕೆ ಕೇಂದ್ರಗಳಲ್ಲಿ 3,400ರಷ್ಟು ಹಾಸಿಗೆ ಸೌಲಭ್ಯಗಳಿದ್ದವು. ಅವುಗಳ ಸಂಖ್ಯೆಯನ್ನು ಈಗ 800ಕ್ಕೆ ಇಳಿಸಿದ್ದೇವೆ. ನಗರದಲ್ಲಿ 60 ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸಲಾಗಿತ್ತು. ಈಗ 10 ಕೇಂದ್ರಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

'ಬಿಬಿಎಂಪಿ ವತಿಯಿಂದ ಆರಂಭಿಸಿರುವ ಕೋವಿಡ್ ಆರೈಕೆ ಕೇಂದ್ರಗಳ ಮೂಲಸೌಕರ್ಯಗಳನ್ನು ಹಾಗೆಯೇ ಉಳಿಸಿಕೊಂಡಿದ್ದೇವೆ. ಅಗತ್ಯಬಿದ್ದರೆ ಅವುಗಳನ್ನು ಬಳಸಿಕೊಳ್ಳಬಹುದು. ಸದ್ಯಕ್ಕೆ ಅವು ನಿಷ್ಕ್ರಿಯವಾಗಿವೆ' ಎಂದರು.

ಕೋವಿಡ್ ಸೋಂಕಿತರಿಗೆ ಬಿಬಿಎಂಪಿ ವತಿಯಿಂದ ಚಿಕಿತ್ಸೆ ನೀಡಲು ಖಾಸಗಿ ಆಸ್ಪತ್ರೆಗಳಿಂದ ಪಡೆದ ಹಾಸಿಗೆಗಳನ್ನು ಮರಳಿಸುವಂತೆ ಕೋರಿ ಕೆಲವು ಶಾಸಕರು ಪತ್ರ ಬರೆದಿರುವ ಬಗ್ಗೆ ಪ್ರತಿಕ್ರಿಯಿಸಿರುವ ಮುಖ್ಯ ಆಯುಕ್ತರು, 'ನಗರದಲ್ಲಿ ಕೋವಿಡ್ ಚಿಕಿತ್ಸೆಗಾಗಿ 13 ಸಾವಿರದಷ್ಟು ಹಾಸಿಗೆಗಳನ್ನು ಖಾಸಗಿ ಆಸ್ಪತ್ರೆಗಳಿಂದ ಪಡೆದಿದ್ದೆವು. ಅವುಗಳಲ್ಲಿ 5 ಸಾವಿರ ಹಾಸಿಗೆಗಳನ್ನು ಉಳಿಸಿಕೊಂಡು ಉಳಿದವುಗಳನ್ನು ಮೂರು ವಾರಗಳ ಹಿಂದೆಯೇ ಆಸ್ಪತ್ರೆಯವರಿಗೆ ಬಿಟ್ಟುಕೊಟ್ಟಿದ್ದೇವೆ. ಬಿಬಿಎಂಪಿ ಕೋಟಾದ ಹಾಸಿಗೆಗಳ ಸಂಖ್ಯೆಯನ್ನು ಶೀಘ್ರವೇ ಮತ್ತಷ್ಟು ಕಡಿಮೆ ಮಾಡಲಿದ್ದೇವೆ. ಭವಿಷ್ಯದಲ್ಲಿ ಅವಶ್ಯಕತೆ ಎದುರಾದರೆ ಮತ್ತೆ ಹಾಸಿಗೆಗಳನ್ನು ಪಡೆಯಲಿದ್ದೇವೆ' ಎಂದರು.

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



**ಸ್ಪರ್ಧಾ ವಾಣಿ**
ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ)ರ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ಇದರ ಸಿದ್ಧತೆ ಹೇಗಿರಬೇಕು?

ಜಯಶ್ರೀ ದೇಶಪಾಂಡೆ ಸೇರಿ ಎಂಟು ಮಂದಿಗೆ 'ಪುಸ್ತಕ ಪ್ರಶಸ್ತಿ' 4
ಇನ್ನಷ್ಟು ಕೈಸುಟ್ಟೀತು ತೈಲ ಬೆಲೆ 8

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 53,054 ▲ | 15,879 ▲ | ₹49,450 (ಬೆಂಗಳೂರು) ▼ | ₹71,600 (ಬೆಂಗಳೂರು) ▼ | 74.62 ▼ |

ಸದಾನಂದ ಗೌಡ ಸೇರಿ 12 ಸಚಿವರ ತಲೆದಂಡ: 36 ಮಂದಿ ಹೊಸ ಸೇರ್ಪಡೆ

# ಕೇಂದ್ರ ಸಂಪುಟಕ್ಕೆ ಭಾರಿ ಸರ್ಜರಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ತಮ್ಮ ನೇತೃತ್ವದ ಎರಡನೇ ಅವಧಿಯ ಸರ್ಕಾರದ ಎರಡನೇ ವರ್ಷದಲ್ಲಿ ಸಂಪುಟದಲ್ಲಿ ಭಾರಿ ಬದಲಾವಣೆಯನ್ನು ಪ್ರಧಾನಿ ನರೇಂದ್ರ ಮೋದಿ ಬುಧವಾರ ಮಾಡಿದ್ದಾರೆ. ಮಂತ್ರಿ ಪರಿಷತ್‌ನಿಂದ 12 ಸಚಿವರನ್ನು ಕೈಬಿಟ್ಟಿದ್ದಾರೆ. ಆರೋಗ್ಯ, ಶಿಕ್ಷಣ, ದೂರಸಂಪರ್ಕ, ಮಾಹಿತಿ ತಂತ್ರಜ್ಞಾನ ಹಾಗೂ ವಾರ್ತಾ ಮತ್ತು ಪ್ರಸಾರದಂತಹ ಮಹತ್ವದ ಖಾತೆಗಳನ್ನು ನಿಭಾಯಿಸುತ್ತಿದ್ದವರ ತಲೆದಂಡವಾಗಿದೆ. ಜ್ಯೋತಿರಾದಿತ್ಯ ಸಿಂಧಿಯಾ, ಸರ್ವಾನಂದ ಸೋನೋವಾಲ್ ಮತ್ತು ನಾರಾಯಣ ರಾಣೆ ಸೇರಿ 36 ಹೊಸ ಮುಖಗಳಿಗೆ ಸ್ಥಾನ ಸಿಕ್ಕಿದೆ. ಹಾಲಿ ಸಚಿವರಾಗಿದ್ದ ಏಳು ಮಂದಿಗೆ ಬಡ್ತಿ ದೊರೆತಿದೆ.

ದೇಶವನ್ನು ತಲ್ಲಣಕ್ಕೆ ಈಡುಮಾಡಿರುವ ಕೋವಿಡ್ ಪರಿಸ್ಥಿತಿಯ ಸಮರ್ಪಕ ನಿರ್ವಹಣೆಯಲ್ಲಿ 'ದಕ್ಷತೆ ಪ್ರದರ್ಶಿಸದ' ಆರೋಗ್ಯ ಸಚಿವ ಹರ್ಷವರ್ಧನ್ ಅವರನ್ನು ಸಂಪುಟದಿಂದ ಕೈಬಿಟ್ಟಿರುವುದು ನಿರೀಕ್ಷಿತವೇ ಆಗಿದೆ. ಹರ್ಷವರ್ಧನ್ ತಲೆದಂಡವು ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರದ ವೈಫಲ್ಯವನ್ನು ಒಪ್ಪಿಕೊಂಡಂತೆ ಎಂದು ವಿಶ್ಲೇಷಿಸಲಾಗಿದೆ. ಇಲಾಖೆಗೆ ಸಂಬಂಧಿಸಿದ ಪತ್ರಿಕಾಗೋಷ್ಠಿಯನ್ನು ಅಧಿಕಾರಿಗಳು ನಿರ್ವಹಿಸಿದಾಗಲೇ ಇವರನ್ನು ಕೈಬಿಡುವ ಮುನ್ಸೂಚನೆ ದೊರೆತಿತ್ತು.

ಆದರೆ, ಮೋದಿ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಪ್ರಕಾಶ್ ಜಾವಡೇಕರ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ಅವರ ರಾಜೀನಾಮೆಯು ಆಶ್ಚರ್ಯಕ್ಕೆ ಕಾರಣವಾಗಿದೆ. ಕೋವಿಡ್ ನಿಭಾಯಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂಬ ಆರೋಪ ವ್ಯಾಪಕವಾಗಿ ಕೇಳಿ ಬಂದಾಗ ಇವರು ಸರ್ಕಾರದ ವರ್ಚಸ್ಸು ವೃದ್ಧಿಸಲು ಕೆಲಸ ಮಾಡಲಿಲ್ಲ ಎಂಬುದು ಅವರ 'ತಲೆದಂಡ'ಕ್ಕೆ ಪ್ರಮುಖ ಕಾರಣ ಎಂಬುದು ರಹಸ್ಯವಾಗಿ ಉಳಿದಿಲ್ಲ. ಮಾಹಿತಿ ತಂತ್ರಜ್ಞಾನ ನಿಯಮಗಳ ಜಾರಿಗೆ ಸಂಬಂಧಿಸಿ ಟ್ವಿಟರ್ ಸಂಸ್ಥೆ ಜತೆಗೆ ಆಗಿರುವ ಸಂಘರ್ಷವೂ ರವಿಶಂಕರ್ ಪ್ರಸಾದ್ ತಲೆದಂಡಕ್ಕೆ ಒಂದು ಕಾರಣ ಎನ್ನಲಾಗುತ್ತಿದೆ. ತಮ್ಮ ಕ್ಷೇತ್ರದಲ್ಲಿ ಕೋವಿಡ್ ನಿರ್ವಹಣೆ ಸರಿಯಾಗಿ ಆಗಿಲ್ಲ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ದೂರು ನೀಡಿದ್ದ ಕಾರ್ಮಿಕ ಸಚಿವ ಸಂತೋಷ್ ಗಂಗ್ವಾರ್ ಅವರೂ ತಮ್ಮ ಹುದ್ದೆ ಕಳೆದುಕೊಂಡಿದ್ದಾರೆ.

ಈ ಮೂವರು ಸಚಿವರು ಹೊರನಡೆಯುವುದರೊಂದಿಗೆ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರದ ಭಾಗವಾಗಿದ್ದವರಲ್ಲಿ ಈಗ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾತ್ರ ಮೋದಿ ನೇತೃತ್ವದ ಸಂಪುಟದಲ್ಲಿ ಉಳಿದಿದ್ದಾರೆ.

ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ.ಸದಾನಂದ ಗೌಡ (68) ಅವರು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಸೂಚನೆಯಂತೆ ರಾಜೀನಾಮೆ ನೀಡಿದ್ದಾರೆ. ಈ ರಾಜೀನಾಮೆಯೂ ಅಚ್ಚರಿಗೆ ಕಾರಣವಾಗಿದೆ. ಸಚಿವ ಸ್ಥಾನ ಕಳೆದುಕೊಂಡ ಹಲವರನ್ನು ಪಕ್ಷದ ಕೆಲಸಕ್ಕೆ ನಿಯೋಜಿಸಲಾಗುವುದು ಎಂದು ಹೇಳಲಾಗುತ್ತಿದೆ. ಪಕ್ಷದಲ್ಲಿ ಮಹತ್ವದ ಹಲವು ಹುದ್ದೆಗಳು ಖಾಲಿ ಇವೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ಸಚಿವರಾಗಿದ್ದ ಥಾವರ್‌ಚಂದ್ ಗೆಹ್ಲೋಟ್ ಅವರು ರಾಜೀನಾಮೆ ನೀಡಿದ್ದು, ಅವರನ್ನು ಕರ್ನಾಟಕದ ರಾಜ್ಯಪಾಲರನ್ನಾಗಿ ಮಂಗಳವಾರ ನೇಮಿಸಲಾಗಿದೆ.

15 ಮಂದಿ ಸಂಪುಟ ದರ್ಜೆ ಮತ್ತು 28 ಮಂದಿ ಕಿರಿಯ ಸಚಿವರಾಗಿ ಪ್ರಮಾಣ ವಚನ ಪಡೆದುಕೊಂಡಿದ್ದಾರೆ. ಹಾಗಾಗಿ, ಕೇಂದ್ರ ಸಚಿವ ಸಂಪುಟದ ಸದಸ್ಯರ ಸಂಖ್ಯೆಯು 81ಕ್ಕೆ ಏರಿಕೆಯಾಗಿದೆ. ಪುನರ್‌ರಚನೆಯ ಬಳಿಕ ಸಂಪುಟದಲ್ಲಿ ಇತರ ಹಿಂದುಳಿದ ವರ್ಗ (ಒಬಿಸಿ), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 47 ಮಂದಿಗೆ ಅವಕಾಶ ದೊರೆತಿದೆ. ಮುಸ್ಲಿಂ ಸಮುದಾಯದ ಯಾರೊಬ್ಬರನ್ನೂ ಸೇರ್ಪಡೆ ಮಾಡಿಲ್ಲ. ಹಾಗಾಗಿ, ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ಮುಕ್ತಾರ್ ಅಬ್ಬಾಸ್ ನಖ್ವಿ ಅವರೊಬ್ಬರೇ ಮುಸ್ಲಿಂ ಸಮುದಾಯವನ್ನು ಪ್ರತಿನಿಧಿಸುವ ವ್ಯಕ್ತಿಯಾಗಿದ್ದಾರೆ.

ಹೊಸತಾಗಿ ಸೇರ್ಪಡೆ ಆದವರಲ್ಲಿ 35 ವರ್ಷ ವಯಸ್ಸಿನ ನಿಸಿತ್ ಪ್ರಮಾಣಿಕ್ ಅತ್ಯಂತ ಕಿರಿಯರಾಗಿದ್ದರೆ, 69 ವರ್ಷ ವಯಸ್ಸಿನ ನಾರಾಯಣ ರಾಣೆ ಹಿರಿಯರು. ಈ ಸಚಿವ ಸಂಪುಟದ ಸದಸ್ಯರ ಸರಾಸರಿ ವಯಸ್ಸು 58, ಹಾಗಾಗಿ, ಅದು ಅತ್ಯಂತ ಕಿರಿಯ ವಯಸ್ಸಿನ ಸಂಪುಟವಾಗಿದೆ.

9ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 3, 9



ನೂತನ ಸಚಿವ ಎ.ನಾರಾಯಣಸ್ವಾಮಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದಿಸಿದರು –ಪಿಟಿಐ ಚಿತ್ರ

### ರಾಜ್ಯದ ನಾಲ್ವರಿಗೆ ಸ್ಥಾನ

ಡಿ.ವಿ. ಸದಾನಂದ ಗೌಡ ಅವರು ಸಚಿವ ಸ್ಥಾನ ಕಳೆದುಕೊಂಡರೂ, ರಾಜ್ಯದ ನಾಲ್ವರಿಗೆ ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನ ಸಿಕ್ಕಿದೆ.

| | |
|---|---|
| ರಾಜೀವ್ ಚಂದ್ರಶೇಖರ್ | ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ |
| ಶೋಭಾ ಕರಂದ್ಲಾಜೆ | ಕೃಷಿ ಮತ್ತು ರೈತರ ಅಭಿವೃದ್ಧಿ |
| ಎ. ನಾರಾಯಣ ಸ್ವಾಮಿ | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ |
| ಭಗವಂತ ಖೂಬಾ | ಹೊಸ ಮತ್ತು ನವೀಕರಿಸಬಹುದಾದ ಇಂಧನ, ರಾಸಾಯನಿಕ ಮತ್ತು ರಸಗೊಬ್ಬರ |

### ಏಳು ಮಂದಿಗೆ ಸಂಪುಟ ಸಚಿವರಾಗಿ ಬಡ್ತಿ

ಕಿರಿಯ ಸಹೋದ್ಯೋಗಿಗಳಾಗಿದ್ದ ಏಳು ಮಂದಿಗೆ ಮೋದಿ ಅವರು ಸಂಪುಟ ಸಚಿವರಾಗಿ ಬಡ್ತಿ ನೀಡಿದ್ದಾರೆ.

ಕಿರಣ್ ರಿಜಿಜು, ಆರ್.ಕೆ. ಸಿಂಗ್, ಹರ್‌ದೀಪ್ ಸಿಂಗ್ ಪುರಿ, ಮನ್‌ಸುಖ್ ಮಾಂಡವೀಯ, ಪುರುಷೋತ್ತಮ ರೂಪಾಲಾ, ಜಿ. ಕಿಶನ್ ರೆಡ್ಡಿ ಮತ್ತು ಅನುರಾಗ್ ಠಾಕೂರ್ ಬಡ್ತಿ ಪಡೆದವರು. ರಿಜಿಜು ಅವರು ಕ್ರೀಡೆ, ಸಿಂಗ್ ಅವರು ವಿದ್ಯುತ್, ಪುರಿ ಅವರು ನಾಗರಿಕ ವಿಮಾನಯಾನ, ಮಾಂಡವೀಯ ಅವರು ಹಡಗುಯಾನ ಖಾತೆಯ ರಾಜ್ಯ ಸಚಿವರಾಗಿದ್ದರು. ಅವರೆಲ್ಲರೂ ಸ್ವತಂತ್ರ ಹೊಣೆಗಾರಿಕೆ ಹೊಂದಿದ್ದರು. ಏಳು ಸಚಿವರ ಕಾರ್ಯದಕ್ಷತೆಯನ್ನು ಮೆಚ್ಚಿ ಬಡ್ತಿ ನೀಡಲಾಗಿದೆ ಎಂದು ಹೇಳಲಾಗಿದೆ.

### ಸಚಿವ ಸ್ಥಾನ ಕಸಿದ 'ಮಾನಹಾನಿ' ಪ್ರಕರಣ

**ಬೆಂಗಳೂರು:** ಕೇಂದ್ರ ರಸಗೊಬ್ಬರ ಮತ್ತು ರಾಸಾಯನಿಕ ಖಾತೆಯಂತಹ ಮಹತ್ವದ ಖಾತೆ ಹೊಂದಿದ್ದ ಡಿ.ವಿ. ಸದಾನಂದಗೌಡರು ಸಚಿವ ಸ್ಥಾನ ಕಳೆದುಕೊಳ್ಳಲು ತಮ್ಮ ವಿರುದ್ಧ ಮಾನಹಾನಿಕರ ಸುದ್ದಿ ಪ್ರಕಟಿಸದಂತೆ ಮಾಧ್ಯಮಗಳ ವಿರುದ್ಧ ಅವರು ತಂದಿದ್ದ ತಡೆಯಾಜ್ಞೆ ಕಾರಣವಾಯಿತೇ ಎಂಬ ಚರ್ಚೆ ಬಿಜೆಪಿಯಲ್ಲಿ ಶುರುವಾಗಿದೆ.

ಆಕಸ್ಮಿಕ ರಾಜಕೀಯ ಸನ್ನಿವೇಶವೊಂದರಲ್ಲಿ ಕರ್ನಾಟಕ ಮುಖ್ಯಮಂತ್ರಿ ಹುದ್ದೆಗೇರಿದ ಸದಾನಂದಗೌಡರು ತಮ್ಮ ವರ್ಚಸ್ಸನ್ನು ಆಗ ಉಳಿಸಿಕೊಂಡಿದ್ದರು. ತಮ್ಮನ್ನು ಮುಖ್ಯಮಂತ್ರಿ ಮಾಡಿದ್ದ ಬಿ.ಎಸ್. ಯಡಿಯೂರಪ್ಪ ಅವರಿಗೆ ವಿರುದ್ಧವಾಗಿ ಅವರು ನಡೆಯತೊಡಗಿದ್ದರಿಂದಾಗಿ ಅಕಾಲಿಕವಾಗಿ ಅಧಿಕಾರ ತ್ಯಜಿಸುವ ಅನಿವಾರ್ಯಕ್ಕೆ ಅವರನ್ನು ದೂಡಲಾಗಿತ್ತು.

9ನೇ ಪುಟ ನೋಡಿ




ಬೆಂಗಳೂರಿನ ಕೆಪಿಸಿಸಿ ಕೇಂದ್ರ ಕಚೇರಿಯ ಮುಂಭಾಗ ಪ್ರಧಾನಿ ನರೇಂದ್ರ ಮೋದಿ ಅವರ ಮುಖವಾಡ ಧರಿಸಿ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು –ಪ್ರಜಾವಾಣಿ ಚಿತ್ರ

## ತೈಲ ಬೆಲೆ ಏರಿಕೆ: ಸೈಕಲ್ ಏರಿದ ಕಾಂಗ್ರೆಸಿಗರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ಬೆಲೆ ಏರಿಕೆ ವಿರೋಧಿಸಿ ರಾಜ್ಯದ ಎಲ್ಲ 224 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ವತಿಯಿಂದ ಬುಧವಾರ ಏಕಕಾಲಕ್ಕೆ ಸೈಕಲ್ ಜಾಥಾ ನಡೆಯಿತು.

ಮೈಸೂರಿನಲ್ಲಿ ನಡೆದ ಜಾಥಾಕ್ಕೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಚಾಲನೆ ನೀಡಿದರೆ, ಶಿರಸಿಯಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾಗವಹಿಸಿದ್ದರು. ಕೆಪಿಸಿಸಿ ಕೇಂದ್ರ ಕಚೇರಿಯ ಮುಂಭಾಗದಲ್ಲಿ ನಡೆದ ಪ್ರತಿಭಟನೆಯ ನೇತೃತ್ವವನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಮತ್ತು ಸಲೀಂ ಅಹ್ಮದ್ ವಹಿಸಿದ್ದರು.

ಕೋವಿಡ್ ನಿಯಮ ಪಾಲನೆ ಕಾರಣದಿಂದ ಸೈಕಲ್ ಜಾಥಾಕ್ಕೆ ಪೊಲೀಸರು ಪರವಾನಗಿ ನೀಡಿಲ್ಲ. ಆದರೂ ಕೆಲವೆಡೆ ಬಿಗಿಬಂದೋಬಸ್ತ್‌ನಲ್ಲಿ ಅರ್ಧ ಕಿ.ಮೀನಷ್ಟು ಮೆರವಣಿಗೆ ನಡೆಸಲು ಅವಕಾಶ ನೀಡಿದರು. ಕಾಂಗ್ರೆಸ್‌ನ ಶಾಸಕರು, ಮಾಜಿ ಶಾಸಕರು, ಮಾಜಿ ಸಂಸದರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಜಾಥಾದುದ್ದಕ್ಕೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕೆಲವು ಕಡೆ ಕಹಳೆ ಊದಿ ಆಕ್ರೋಶ ಹೊರಹಾಕಿದರು.

ಮೈಸೂರಿನಲ್ಲಿ ಕಾಂಗ್ರೆಸ್ ಭವನದಿಂದ ಆರಂಭವಾದ ಜಾಥಾ, ಬಾಬು ಜಗಜೀವನ್ ರಾಮ್ ಸರ್ಕಲ್ - ಇರ್ವಿನ್ ರಸ್ತೆ- ಅಶೋಕ ರಸ್ತೆ ಮೂಲಕ ಸಾಗಿ ಗಾಂಧಿವೃತ್ತದಲ್ಲಿ ಕೊನೆಗೊಂಡಿತು. ಸೈಕಲ್ ತುಳಿಯಲು ಮುಂದಾದ ಸಿದ್ದರಾಮಯ್ಯ ಅವರನ್ನು ಅಭಿಮಾನಿಗಳು ಮುತ್ತಿಕೊಂಡಿದ್ದರಿಂದ ನೂಕಾಟ ನಡೆಯಿತು. ನಂತರ ಅವರು ಸೈಕಲ್‌ನಿಂದ ಇಳಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಒಳಗೊಂಡಂತೆ ಮುಖಂಡರು ಜಾಥಾದಲ್ಲಿ ಪಾಲ್ಗೊಂಡರು.

ಶಿರಸಿಯಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ಈ ಜೇಬುಗಳ್ಳರ ಸರ್ಕಾರ ತೊಲಗಿಸಲು ಹೋರಾಟ ಆರಂಭಿಸಿದ್ದೇವೆ' ಎಂದರು. ಶಾಸಕ ಆರ್.ವಿ.ದೇಶಪಾಂಡೆ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಜೊತೆಗಿದ್ದರು.

ಪ್ರಧಾನಿ ನರೇಂದ್ರ ಮೋದಿಯ ಮುಖವಾಡ ಧರಿಸಿ ಕೆಲವರು ಸೈಕಲ್ ತುಳಿದದ್ದು ಗಮನ ಸೆಳೆಯಿತು. ಬೆಂಗಳೂರಿನಲ್ಲಿ ರಾಮಲಿಂಗಾರೆಡ್ಡಿ, ಸಲೀಂ ಅಹ್ಮದ್, ಶಾಸಕ ರಿಜ್ವಾನ್ ಅರ್ಷದ್ ಸೇರಿದಂತೆ ಹಲವು ನಾಯಕರನ್ನು ವಶಕ್ಕೆ ಪಡೆದ ಪೊಲೀಸರು ಬಳಿಕ ಬಿಡುಗಡೆ ಮಾಡಿದರು.

## ನಟ ದಿಲೀಪ್ ಕುಮಾರ್ ನಿಧನ


**ಮುಂಬೈ (ಪಿಟಿಐ):** ಬಾಲಿವುಡ್‌ನ ಖ್ಯಾತ ನಟ ದಿಲೀಪ್ ಕುಮಾರ್ (98) ಅವರು ಮುಂಬೈನ ಪಿ.ಡಿ. ಹಿಂದುಜಾ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಬುಧವಾರ ಬೆಳಿಗ್ಗೆ 7.30 ಗಂಟೆಗೆ ಕೊನೆಯುಸಿರೆಳೆದರು ಎಂದು ಅವರಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯ ಡಾ. ಜಲೀಲ್ ಪಾರ್ಕರ್ ತಿಳಿಸಿದ್ದಾರೆ.

ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ದಿಲೀಪ್ ಕುಮಾರ್ ಅವರನ್ನು ಕಳೆದ ವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬುಧವಾರ ಸಂಜೆ ಸರ್ಕಾರಿ ಗೌರವದೊಂದಿಗೆ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಅವರಿಗೆ ಪತ್ನಿ ಸಾಯಿರಾ ಬಾನು ಇದ್ದಾರೆ. ಅವರಿಗೆ 1991ರಲ್ಲಿ ಪದ್ಮಭೂಷಣ, 1994ರಲ್ಲಿ ದಾದಾ ಸಾಹೇಬ್ ಫಾಲ್ಕೆ ಗೌರವ ಸಂದಿವೆ.

ದಿಲೀಪ್ ಕುಮಾರ್ ಅವರ ನಿಧನಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಕಂಬನಿ ಮಿಡಿದಿದ್ದಾರೆ.



11.12.1922 - 07.07.2021

**ಐದು ದಶಕಗಳ ಸಿನಿಮಾ ಪಯಣ:** 1944ರಲ್ಲಿ ಜ್ವಾರ್ ಭಾಟಾ ಚಿತ್ರದ ಮೂಲಕ ದಿಲೀಪ್‌ಕುಮಾರ್ ಅವರ ಸಿನಿಮಾ ಪಯಣ ಆರಂಭವಾಯಿತು. ನಂತರ ಅವರು ಐದು ದಶಕಗಳ ಕಾಲ ಹಿಂದಿ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು.

65ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ. ಅವರನ್ನು ಅಭಿಮಾನಿಗಳು 'ಟ್ರ್ಯಾಜಿಡಿ ಕಿಂಗ್' ಎಂದೇ ಕರೆಯುತ್ತಿದ್ದರು.

ಈಗ ಪಾಕಿಸ್ತಾನದಲ್ಲಿರುವ ಪೇಶಾವರದಲ್ಲಿ 1922ರ ಡಿಸೆಂಬರ್ 11ರಂದು ಜನಿಸಿದ್ದರು. ಅವರ ಮೂಲ ಹೆಸರು ಮುಹಮ್ಮದ್ ಯೂಸುಫ್‌ಖಾನ್. ನಂತರ ಅವರು ಮುಂಬೈಗೆ ಬಂದು ನೆಲೆಸಿದರು. ಹಿಂದಿ ಚಿತ್ರರಂಗ ಪ್ರವೇಶಿಸಿದ ನಂತರ ಅವರ ಹೆಸರನ್ನು ದಿಲೀಪ್‌ಕುಮಾರ್ ಎಂದು ಬದಲಾಯಿಸಲಾಯಿತು.

ಅಂದಾಜ್, ದಾಗ್, ದೇವದಾಸ್. ಆಜಾದ್ ಚಿತ್ರಗಳಲ್ಲಿ ಮಿಂಚಿದ್ದರು. 1960ರಲ್ಲಿ ಬಿಡುಗಡೆಯಾದ, ಅವರ ನಟನೆಯ ಮೊಘಲ್–ಎ–ಆಝಮ್ ಚಿತ್ರ ಅವರಿಗೆ ಅಪಾರ ಜನಮನ್ನಣೆ ತಂದು ಕೊಟ್ಟಿತು. ಗಂಗಾ ಜಮುನಾ, ರಾಮ್ ಔರ್ ಶ್ಯಾಮ್ ಚಿತ್ರಗಳೂ ಜನಪ್ರಿಯ.

ನುಡಿನಮನ 07

## ಏಕ ಪರದೆ ಚಿತ್ರಮಂದಿರ: ತೆರಿಗೆ ವಿನಾಯಿತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿರುವ 630 ಏಕ ಪರದೆ ಚಿತ್ರಮಂದಿರಗಳಿಗೆ 2021–22ನೇ ಸಾಲಿನ ಆಸ್ತಿ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿ ವಾರ್ತಾ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ಕೋವಿಡ್ ಕಾರಣದಿಂದ ರಾಜ್ಯದಲ್ಲಿ 14 ತಿಂಗಳಿನಿಂದ ಬಹುತೇಕ ಚಿತ್ರಮಂದಿರಗಳ ಬಾಗಿಲು ತೆರೆದಿಲ್ಲ. ಮುಂದೆಯೂ ಪ್ರೇಕ್ಷಕರು ಚಿತ್ರಮಂದಿರಗಳಿಗೆ ಬರುವ ಸಾಧ್ಯತೆ ಕಡಿಮೆ ಎಂದು ಆತಂಕ ವ್ಯಕ್ತಪಡಿಸಿದ್ದ ಕರ್ನಾಟಕ ಚಿತ್ರ ಪ್ರದರ್ಶಕರ ಸಂಘ, ಏಕ ಪರದೆ ಚಿತ್ರಮಂದಿರಗಳಿಗೆ ಆಸ್ತಿ ತೆರಿಗೆ ಪಾವತಿಯಿಂದ ವಿನಾಯಿತಿ ನೀಡುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿತ್ತು.

ಸಂಘದ ಬೇಡಿಕೆಯನ್ನು ಆಧರಿಸಿ ಏಕ ಪರದೆಯ ಚಿತ್ರಮಂದಿರಗಳ ಪ್ರಸಕ್ತ ವರ್ಷದ ಆಸ್ತಿ ತೆರಿಗೆಯನ್ನು ಮನ್ನಾ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ₹ 9 ಕೋಟಿ ಹೊರೆಯಾಗಲಿದೆ ಎಂದು ವಾರ್ತಾ ಇಲಾಖೆ ಆದೇಶದಲ್ಲಿ ತಿಳಿಸಿದೆ.



## ಈಶಾನ್ಯ ಇನ್ನು ಕಲ್ಯಾಣ ಕರ್ನಾಟಕ ಸಾರಿಗೆ

ಪ್ರಜಾವಾಣಿ ವಾರ್ತೆ

**ಕಲಬುರ್ಗಿ:** ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು ಹಾಗೂ ಉತ್ತರ ಕರ್ನಾಟಕದ ವಿಜಯಪುರ ಜಿಲ್ಲೆಯ ವ್ಯಾಪ್ತಿ ಹೊಂದಿರುವ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹೆಸರನ್ನು 'ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ' ಎಂದು ರಾಜ್ಯ ಸರ್ಕಾರ ಮರುನಾಮಕರಣ ಮಾಡಿದೆ.

'ಹೆಸರು ಬದಲಿಸುವಂತೆ ಸಂಸ್ಥೆಯ ಆಳಿತ ಮಂಡಳಿ ಪ್ರಸ್ತಾವ ಸಲ್ಲಿಸಿತ್ತು. ಸಾರಿಗೆ ಇಲಾಖೆ ಬುಧವಾರ ಆದೇಶ ಹೊರಡಿಸಿದೆ' ಎಂದು ಸಾರಿಗೆ ಖಾತೆಯನ್ನೂ ಹೊಂದಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಬುಧವಾರ ಇಲ್ಲಿ ತಿಳಿಸಿದರು.

ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗುತ್ತಿದ್ದಂತೆಯೇ ಹೈದರಾಬಾದ್ ಕರ್ನಾಟಕದ ಹೆಸರನ್ನು ಕಲ್ಯಾಣ ಕರ್ನಾಟಕ ಎಂದು ಬದಲಾಯಿಸಿದ್ದರು.

## 'ರೋಷನ್ ಬೇಗ್ ಆಸ್ತಿ ಮುಟ್ಟುಗೋಲಿಗೆ ಆದೇಶ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಐ ಮಾನಿಟರಿ ಅಡ್ವೈಸರಿ (ಐಎಂಎ) ಹಗರಣದಲ್ಲಿ ಮಾಜಿ ಸಚಿವ ರೋಷನ್ ಬೇಗ್ ಅವರ ಚರ ಮತ್ತು ಸ್ಥಿರಾಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಸಂಬಂಧ ಆದೇಶ ಹೊರಡಿಸಲಾಗಿದೆ' ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ಕೆಪಿಐಡಿ) ಕಾಯ್ದೆಯ ಸೆಕ್ಷನ್ 3ರ ಅಡಿಯಲ್ಲಿ 2021ರ ಜು. 6ರಂದು ಅಧಿಸೂಚನೆ ಹೊರಡಿಸಲಾಗಿದೆ. 2018ರ ವಿಧಾನಸಭೆ ಚುನಾವಣೆ ವೇಳೆ ಚುನಾವಣಾ ಆಯೋಗಕ್ಕೆ ಬೇಗ್ ಸಲ್ಲಿಸಿದ್ದ ಅಫಿಡವಿಟ್ ಆಧರಿಸಿ ಆಸ್ತಿ ವಿವರದ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಎಂದು ವಿವರ ಸಲ್ಲಿಸಿದೆ.



'ಜಂಟಿ ಅಭಿವೃದ್ಧಿ ಒಪ್ಪಂದಲ್ಲಿ ಹೊಸೂರು ರಸ್ತೆಯಲ್ಲಿ ಅಭಿವೃದ್ಧಿಪಡಿಸಿರುವ ವಾಣಿಜ್ಯ ಕಟ್ಟಡ(ಶೇ 33ರಷ್ಟು ಪಾಲು), ರೆಸಿಡೆನ್ಸಿ ರಸ್ತೆಯಲ್ಲಿನ ವಾಣಿಜ್ಯ ಕಟ್ಟಡ, ಸ್ಯಾಂಡರ್ಸ್ ರಸ್ತೆ ಮತ್ತು ಕ್ಲೀವ್ ಲ್ಯಾಂಡ್ ರಸ್ತೆಯಲ್ಲಿನ ಮನೆಗಳು, ಎಚ್‌ಬಿಆರ್ ಲೇಔಟ್, ಫ್ರೇಸರ್ ಟೌನ್ ಮತ್ತು ಕ್ಲೀವ್ ಲ್ಯಾಂಡ್ ರಸ್ತೆಯಲ್ಲಿನ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು' ಎಂದು ವಿವರಿಸಿದೆ.

'ಕೆಪಿಐಡಿ ಕಾಯ್ದೆಯಡಿ ರಚನೆಯಾದ ಸಕ್ಷಮ ಪ್ರಾಧಿಕಾರದ ವರದಿ ಮತ್ತು ಸಿಬಿಐ ಸಲ್ಲಿಸಿದ ದೋಷಾರೋಪ ಪಟ್ಟಿ ಆಧರಿಸಿ ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಐಎಂಎ ಸಂಸ್ಥೆಯ ಪ್ರಚಾರ ಮತ್ತು ವ್ಯವಹಾರದಲ್ಲಿ ಬೇಗ್ ಪ್ರಮುಖ ಪಾತ್ರ ವಹಿಸಿದ್ದರು ಮತ್ತು ಆರ್ಥಿಕ ಲಾಭ ಗಳಿಸಿದ್ದರು ಎಂಬುದನ್ನು ತನಿಖಾ ಸಂಸ್ಥೆಗಳು ಪತ್ತೆ ಹಚ್ಚಿವೆ ಎಂದೂ ಸರ್ಕಾರ ತಿಳಿಸಿದೆ.

ಅಧಿಸೂಚನೆ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಶಿವಾಜಿನಗರದ ಸರ್ಕಾರಿ ಶಾಲೆಗೆ ಐಎಂಎ ಸಮೂಹ ನೀಡಿರುವ ₹12.82 ಕೋಟಿ ದೇಣಿಗೆ ಮರಳಿಸುವ ಸಂಬಂಧ ಸೂಕ್ತ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕು ಎಂದು ಸೂಚನೆ ನೀಡಿತು. ವಿಚಾರಣೆಯನ್ನು ಜುಲೈ 19ಕ್ಕೆ ಮುಂದೂಡಿತು.

## ಬಿಎಸ್‌ವೈ ವಿರುದ್ಧದ ದೂರು: ಇಂದು ಆದೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗುತ್ತಿಗೆದಾರ ಚಂದ್ರಕಾಂತ್ ರಾಮಲಿಂಗಂ ಬಳಿ ₹ 12.5 ಕೋಟಿ ಲಂಚ ಪಡೆದ ಆರೋಪದ ಮೇಲೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅವರ ಮಗ ಬಿ.ವೈ. ವಿಜಯೇಂದ್ರ ಮತ್ತು ಇತರರ ವಿರುದ್ಧ ಸಾಮಾಜಿಕ ಹೋರಾಟಗಾರ ಟಿ.ಜೆ. ಅಬ್ರಹಾಂ ಸಲ್ಲಿಸಿರುವ ಖಾಸಗಿ ದೂರನ್ನು ವಿಚಾರಣೆಗೆ ಅಂಗೀಕರಿಸುವ ಕುರಿತು ಚುನಾಯಿತ ಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯ ಗುರುವಾರ ಆದೇಶ ಪ್ರಕಟಿಸಲಿದೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿಯಲ್ಲಿ ಯಡಿಯೂರಪ್ಪ ಮತ್ತು ಇತರರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿರುವ ಖಾಸಗಿ ದೂರನ್ನು ವಿಚಾರಣೆಗೆ ಅಂಗೀಕರಿಸಬೇಕೆ? ಬೇಡವೆ? ಎಂಬುದರ ಕುರಿತು ಜೂನ್ 30ರಂದು ವಿಚಾರಣೆ ಪೂರ್ಣಗೊಳಿಸಿದ್ದ ನ್ಯಾಯಾಧೀಶ ಬಿ. ಜಯಂತ್ ಕುಮಾರ್, ಆದೇಶ ಕಾಯ್ದಿರಿಸಿದ್ದರು. ಗುರುವಾರ ನ್ಯಾಯಾಲಯ ಆದೇಶ ಪ್ರಕಟಿಸಲಿದ್ದು, ಪ್ರಕರಣದ ಭವಿಷ್ಯ ನಿರ್ಧಾರವಾಗಲಿದೆ.

ಯಡಿಯೂರಪ್ಪ, ವಿಜಯೇಂದ್ರ, ಯಡಿಯೂರಪ್ಪ ಅವರ ಮೊಮ್ಮಗ ಶಶಿಧರ ಮರಡಿ, ಅಳಿಯ ಸಂಜಯ್ ಶ್ರೀ, ಗುತ್ತಿಗೆದಾರ ಚಂದ್ರಕಾಂತ್ ರಾಮಲಿಂಗಂ, ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಮೈಸೂರು ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ. ಪ್ರಕಾಶ್, 37 ಕ್ರೆಸೆಂಟ್ ಹೋಟೆಲ್ ಮಾಲೀಕ ಕೆ. ರವಿ ಮತ್ತು ಯಡಿಯೂರಪ್ಪ ಅವರ ಮತ್ತೊಬ್ಬ ಅಳಿಯ ವಿರೂಪಾಕ್ಷಪ್ಪ ಯಮಕನಮರಡಿ ಅವರನ್ನು ಆರೋಪಿಗಳೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

### ರಾಜ್ಯ ಕೋವಿಡ್ ಅಂಕಿ–ಅಂಶ

| | |
|---|---|
| 28,62,338 ▲ | ಒಟ್ಟು ಸೋಂಕಿತರು (28,59,595 ನಿನ್ನೆಯ ವಿವರ) |
| 39,603 ▼ | ಸಕ್ರಿಯ ಪ್ರಕರಣಗಳು |
| 27,87,111 ▲ | ಗುಣಮುಖರಾದವರು |
| 35,601 ▲ | ಒಟ್ಟು ಸಾವು |

ದಿನದ ಏರಿಕೆ

| | |
|---|---|
| ಹೊಸ ಪ್ರಕರಣ | 2,743 ▼ |
| ಗುಣಮುಖ | 3,081 ▼ |
| ಸಾವು | 75 ▼ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



### ಚಿನಕುರಳಿ

ಪ್ರಕಾಶ್ ಶೆಟ್ಟಿ



## ಎತ್ತಿನಗಾಡಿಯಲ್ಲಿ ಸಂಚರಿಸಿ ಪ್ರತಿಭಟನೆ

ಕೆ.ಆರ್ ಪುರ: ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಕೆ.ಆರ್.ಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಸೈಕಲ್ ಹಾಗೂ ಎತ್ತಿನಗಾಡಿಗಳಲ್ಲಿ ಸಂಚರಿಸುವ ಮೂಲಕ ಪ್ರತಿಭಟನಾ ಜಾಥಾ ನಡೆಸಲಾಯಿತು.

ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಎಂ. ನಾರಾಯಣಸ್ವಾಮಿ, 'ಕೊರೊನಾದಂತಹ ಸಂದರ್ಭದಲ್ಲಿ ಬೆಲೆ ಏರಿಕೆ ಮಾಡಿ ಬಡಮಧ್ಯಮ ವರ್ಗದವರಿಂದ ಸುಲಿಗೆ ಮಾಡಲಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಸಿಸಿ ಸದಸ್ಯ ಕಲ್ಕೆರೆ ನಾರಾಯಣಸ್ವಾಮಿ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್, ಮುಖಂಡರಾದ ಡಿ.ಎ ಗೋಪಾಲ್, ಸಾಕಮ್ಮ, ಪ್ರವೀಣ್ ಗೌಡ ಇದ್ದರು.







ತೈಲ ದರ ಏರಿಕೆ ವಿರೋಧಿಸಿ ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ನೇತೃತ್ವದಲ್ಲಿ ಮುಖಂಡರು ಜಿಗಣಿಯಲ್ಲಿ ಸೈಕಲ್ ಜಾಥಾ ನಡೆಸಿದರು (ಎಡಚಿತ್ರ) ಯಲಹಂಕದಲ್ಲಿ ಸೈಕಲ್ ಜಾಥಾ ನಡೆಸಲು ಮುಂದಾದ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

# 'ದರ ಏರಿಸಿ ಗಾಯದ ಮೇಲೆ ಬರೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಿಜೆಪಿ ಸರ್ಕಾರ ಪೆಟ್ರೋಲ್, ಡೀಸೆಲ್, ಗ್ಯಾಸ್ ಸಿಲಿಂಡರ್ ದರ ಏರಿಕೆ ಮಾಡುತ್ತಾ ಜನ ಸಾಮಾನ್ಯರ ಗಾಯದ ಮೇಲೆ ಮತ್ತೆ ಬರೆ ಎಳೆಯುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಆರೋಪಿಸಿದರು.

ಜಿಗಣಿ ಬ್ಲಾಕ್ ಕಾಂಗ್ರೆಸ್ ಸಮಿತಿಯು ಜಿಗಣಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸೈಕಲ್ ಜಾಥಾದಲ್ಲಿ ಅವರು ಮಾತನಾಡಿದರು.

'ದಿನಬಳಕೆಯ ಅಗತ್ಯ ವಸ್ತುಗಳ ಬೆಲೆಯೂ ಏರಿರುವುದರಿಂದ ಜನ ಸಾಮಾನ್ಯರು ಬದುಕುವುದೇ ದುಸ್ತರವಾಗಿದೆ. ನೊಂದವರು ಸಹಜ ಸ್ಥಿತಿಗೆ ಮರಳುವ ಬದಲು ಮತ್ತೆ ಪಾತಾಳಕ್ಕೆ ಕುಸಿಯುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಉದ್ಯೋಗ ನೀಡುವುದಾಗಿ ಸುಳ್ಳು ಭರವಸೆ ನೀಡಿ ಅಧಿಕಾರಕ್ಕೇರಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಂದ ಇಂದು ಕೋಟ್ಯಂತರ ಜನ ಉದ್ಯೋಗ ಕಳೆದುಕೊಂಡಿದ್ದಾರೆ. ರೈತ ವಿರೋಧಿ ಕೃಷಿ ನೀತಿಗಳನ್ನು ಜಾರಿ ಮಾಡಿ, ಅನ್ನದಾತರನ್ನು ಬೀದಿಗೆ ತಂದಿದ್ದಾರೆ. ಉದ್ಯಮಿಗಳ ಪರ ನಿಂತಿದ್ದಾರೆ' ಎಂದು ದೂರಿದರು.

ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್ ಲಕ್ಷ್ಮಣ,'ಬೆಲೆ ಏರಿಕೆ ಮಾಡುವ ಮೂಲಕ ಜನರ ಜೀವನದ ಜೊತೆಗೆ ಆಟ ಆಡುತ್ತಿರುವ ಬಿಜೆಪಿ ಸರ್ಕಾರವನ್ನು ತೊಲಗಿಸಲು ಜನರೇ ನಿರ್ಧರಿಸಿದ್ದಾರೆ' ಎಂದರು.

ಸೈಕಲ್ ಜಾಥಾದಲ್ಲಿ ಉತ್ತರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಮಾರ್, ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಚಂದ್ರು, ಜಿ.ಕೆ.ರವಿ, ಆಂಜನಪ್ಪ, ಶೋಭಾಗೌಡ, ಸುಂದರೇಶ್, ರವಿ, ಪುನೀತ್, ಅಚ್ಯುತ್ ರಾಜ್, ನರೇಂದ್ರ ಬಾಬು ಭಾಗವಹಿಸಿದ್ದರು.

## ಕಾಂಗ್ರೆಸ್ ಮುಖಂಡರು ವಶಕ್ಕೆ

**ಯಲಹಂಕ:** ತೈಲಬೆಲ ಮತ್ತು ಅಗತ್ಯವಸ್ತುಗಳ ಬೆಲೆ ಏರಿಕೆ ಖಂಡಿಸಿ, ಯಲಹಂಕ ಹಾಗೂ ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು, ಪ್ರತಿಭಟನೆ ಮತ್ತು ಸೈಕಲ್ ಜಾಥಾ ನಡೆಸಿದರು.

ಶಾಸಕ ಕೃಷ್ಣಬೈರೇಗೌಡ ನೇತೃತ್ವದಲ್ಲಿ ಬಳ್ಳಾರಿರಸ್ತೆಯ ಕೊಡಿಗೇಹಳ್ಳಿ ಗೇಟ್‌ನಿಂದ ಸೈಕಲ್ ಜಾಥಾದ ಮೂಲಕ ತೆರಳಿದ ಕಾಂಗ್ರೆಸ್ ಕಾರ್ಯಕರ್ತರು, ಬ್ಯಾಟರಾಯನಪುರದವರೆಗೆ ಸಂಚರಿಸಿ ಮತ್ತೆ ಕೊಡಿಗೇಹಳ್ಳಿ ಗೇಟ್ ಬಳಿಗೆ ಬಂದರು.

ಈ ವೇಳೆ ಮಾತನಾಡಿದ ಕೃಷ್ಣಬೈರೇಗೌಡ, 'ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಯದ್ವಾತದ್ವಾ ತೆರಿಗೆ ಹೆಚ್ಚಿಸಲಾಗಿದೆ. ಇದರಿಂದ ತೈಲದರ ₹100ರ ಗಡಿದಾಟಿದ್ದು, ಗ್ಯಾಸ್ ದರ ₹850ರಿಂದ 900ರವರೆಗೆ ಏರಿಕೆಯಾಗಿದೆ. ಕೊರೊನಾದಿಂದ ಉದ್ಯೋಗ ಕಳೆದುಕೊಂಡು ಸಂಕಷ್ಟದಲ್ಲಿರುವ ದುಡಿಯುವ ವರ್ಗದವರ ಮೇಲೆ ಇದರ ನೇರಹೊಡೆತ ಬೀಳುತ್ತಿದೆ' ಎಂದು ದೂರಿದರು.

ನಂತರ ಪೊಲೀಸರು ಕಾರ್ಯಕರ್ತರನ್ನು ತಮ್ಮ ವಶಕ್ಕೆ ಪಡೆದರು. ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್.ಶ್ರೀನಿವಾಸಯ್ಯ, ಆರ್.ಎಂ.ಶ್ರೀನಿವಾಸ್, ಎನ್.ಆದಿರಾಮು, ಬಿ.ಕೆ.ಮಂಜುನಾಥಗೌಡ, ಉದಯಶಂಕರ್, ಎನ್.ಕೆ.ಮಹೇಶ್ ಕುಮಾರ್, ಡಿ.ಬಿ.ಸುರೇಶ್ ಗೌಡ, ಗೌರೀಶ್ ಪಾಲ್ಗೊಂಡಿದ್ದರು.

ಕಾಂಗ್ರೆಸ್ ಮುಖಂಡ ಎಂ.ಎನ್.ಗೋಪಾಲಕೃಷ್ಣ ನೇತೃತ್ವದಲ್ಲಿ ಕಾಮಾಕ್ಷಮ್ಮ ಬಡಾವಣೆಯಲ್ಲಿ ಪ್ರತಿಭಟನೆ ನಡೆಸಲಾಯಿತು. ಇಲ್ಲಿಂದ ಮದರ್ ಡೈರಿ ವೃತ್ತದವರೆಗೆ ಸೈಕಲ್ ಜಾಥಾ ನಡೆಸಲು ಮುಂದಾಗಿದ್ದ ಕಾರ್ಯಕರ್ತರನ್ನು ಪೊಲೀಸರು ಆರಂಭದಲ್ಲೇ ವಶಕ್ಕೆ ಪಡೆದರು.

ಕಾಂಗ್ರೆಸ್ ಮುಖಂಡರಾದ ವೈ.ಆರ್.ಶ್ರೀಧರ್, ಎಸ್.ಬಿ.ಬಾಷಾ, ಎ.ಎನ್.ಸಂತೋಷ್ ಕುಮಾರ್, ರಾಜಕುಮಾರ್, ಲಾವಣ್ಯ ನರಸಿಂಹಮೂರ್ತಿ, ಪದ್ಮಾವತಿ ಅಮರನಾಥ್, ಮಂಗಳ ಮತ್ತಿತರರು ಪಾಲ್ಗೊಂಡಿದ್ದರು.

## ಸೈಕಲ್ ರ‍್ಯಾಲಿ: ಬಂಧನ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಪೆಟ್ರೋಲ್, ಡೀಸೆಲ್ ದರ ಏರಿಕೆ ವಿರುದ್ಧ ಬೊಮ್ಮನಹಳ್ಳಿಯಲ್ಲಿ ಸೈಕಲ್ ರ‍್ಯಾಲಿ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಬಿಡುಗಡೆ ಮಾಡಿದರು.

ಕೆಪಿಸಿಸಿ ಕರೆಯ ಮೇರೆಗೆ ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಸಮಿತಿ ಬುಧವಾರ ಸೈಕಲ್ ರ‍್ಯಾಲಿ ಹಮ್ಮಿಕೊಂಡಿತ್ತು. ಮಂಗಮ್ಮನಪಾಳ್ಯ ಸರ್ಕಲ್ ನಿಂದ ಆರಂಭವಾದ 500ಕ್ಕೂ ಹೆಚ್ಚು ಸೈಕಲ್ ಗಳ ರ‍್ಯಾಲಿ, ಬೊಮ್ಮನಹಳ್ಳಿ, ಹೊಸೂರು ರಸ್ತೆ ಮೂಲಕ ಗಾರ್ವೆಬಾವಿಪಾಳ್ಯ ತಲುಪಿತು. ಈ ವೇಳೆ ರ‍್ಯಾಲಿಗೆ ಅನುಮತಿ ಪಡೆದಿಲ್ಲ ಎಂಬ ಕಾರಣ ಮುಂದೊಡ್ಡಿ ಪೊಲೀಸರು ರ‍್ಯಾಲಿಯನ್ನು ತಡೆದರು. ಇದರಿಂದ ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು.

ಪೊಲೀಸರ ಈ ಕ್ರಮ ಖಂಡಿಸಿ ಕಾರ್ಯಕರ್ತರುಹೊಸೂರು ಮುಖ್ಯ ರಸ್ತೆಯಲ್ಲೇ ಧರಣಿ ಕುಳಿತರು. ಇದರಿಂದ ಕೆಲಕಾಲ ಸಂಚಾರಕ್ಕೂ ಅಡಚಣೆಯಾಯಿತು. ನಂತರ ಪ್ರತಿಭಟನಕಾರರನ್ನು ಬಂಧಿಸಿದ ಪೊಲೀಸರು, ಆಡುಗೋಡಿ ಪೊಲೀಸ್ ಮೈದಾನಕ್ಕೆ ಕರೆ ತಂದು, ಬಿಡುಗಡೆ ಮಾಡಿದರು.

ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಾಸುದೇವರೆಡ್ಡಿ , ಬ್ಲಾಕ್‌ನ ಯುವ ಕಾಂಗ್ರೆಸ್ ಅಧ್ಯಕ್ಷ ಅನಿಲ್ ರೆಡ್ಡಿ ಮಾತನಾಡಿದರು.



# 'ಕಾಮಗಾರಿ ನಡೆಸದೆಯೇ ಬಿಲ್ ಪಾವತಿ'

## ₹ 450 ಕೋಟಿಗಳಷ್ಟು ಸಾರ್ವಜನಿಕ ಹಣ ಲೂಟಿ: ಬಿಜೆಪಿ ಆರೋಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಗಾಂಧಿನಗರ ಕ್ಷೇತ್ರದ ಏಳು ವಾರ್ಡ್‌ಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಅಕ್ರಮ ನಡೆದಿದೆ. ₹ 450 ಕೋಟಿಗಳಷ್ಟು ಸಾರ್ವಜನಿಕ ಹಣ ಲೂಟಿಯಾಗಿದೆ' ಎಂದು ಬಿಜೆಪಿಯ ಬೆಂಗಳೂರು ದಕ್ಷಿಣ ಜಿಲ್ಲೆ ಘಟಕದ ಅಧ್ಯಕ್ಷ ಎನ್.ಆರ್.ರಮೇಶ್ ಆರೋಪಿಸಿದರು.

'ಈ ಕ್ಷೇತ್ರದಲ್ಲಿ ವಿವಿಧ ಕಾಮಗಾರಿಗಳಿಗೆ 2015-16 ರಿಂದ 2020ರ ನವೆಂಬರ್‌ವರೆಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಬಿಬಿಎಂಪಿಯ ವಿವಿಧ ಅನುದಾನಗಳಿಂದ ₹ 640.23 ಕೋಟಿ ಬಿಡುಗಡೆಯಾಗಿದೆ. 2019-20ರಲ್ಲಿ ಮತ್ತು 2020-21ರ ಮೊದಲ ಆರು ತಿಂಗಳುಗಳಲ್ಲಿ ಗಾಂಧಿನಗರಕ್ಕೆ ₹ 252.23 ಕೋಟಿ ಬಿಡುಗಡೆ ಮಾಡಲಾಗಿದೆ. ಇಷ್ಟಾಗಿಯೂ ಎಲ್ಲ ಏಳು ವಾರ್ಡ್‌ಗಳಲ್ಲಿ ಗರಿಷ್ಠ ₹ 150 ಕೋಟಿಗಳಷ್ಟು ಮೊತ್ತದ ಕಾಮಗಾರಿಗಳು ಪೂರ್ಣಗೊಂಡ ಕುರುಹುಗಳೂ ಕಾಣಸಿಗುವುದಿಲ್ಲ. ಬಹುತೇಕ ಕಾಮಗಾರಿಗಳನ್ನು ನಡೆಸಿಯೇ ಇಲ್ಲ. ಕೆಲವು ಕಾಮಗಾರಿಗಳಿಗೆ ಎರಡೆರಡು ಬಾರಿ ಬಿಲ್ ಪಾವತಿಸಲಾಗಿದೆ' ಎಂದು ದೂರಿದರು.

'ಈ ವಿಭಾಗದ ಶೇ 75ರಷ್ಟು ಕಾಮಗಾರಿಗಳನ್ನು ಕೆಆರ್‌ಐಡಿಎಲ್ ಮೂಲಕವೇ ನಿರ್ವಹಿಸಲಾಗಿದೆ. ಪಾಲಾಕ್ಷಪ್ಪ, ವೆಂಕಟೇಶ್ ಮತ್ತು ರಾಜು ಎಂಬುವರು ಕಾರ್ಯಪಾಲಕ ಎಂಜಿನಿಯರ್ (ಇಇ) ಆಗಿದ್ದಾಗ ಈ ಕಾಮಗಾರಿಗಳು ನಡೆದಿವೆ' ಎಂದು ಹೇಳಿದರು.

'ಬಿನ್ನಿಪೇಟೆ ವಾರ್ಡ್‌ನಲ್ಲಿ 2019-20ರಲ್ಲಿ ತಲಾ ₹1.25 ಕೋಟಿ ಮೊತ್ತದ ಎರಡು ಕಾಮಗಾರಿಗಳು ಮತ್ತು ₹ 96 ಲಕ್ಷ ಮೊತ್ತದ ಒಂದು ಕಾಮಗಾರಿಗೆ ಸಂಬಂಧಿಸಿದ ಕಾಮಗಾರಿ ಪ್ರಮಾಣಪತ್ರಗಳು ಕಳೆದು ಹೋಗಿವೆ ಎಂದು ಬಿಂಬಿಸಿ ಅದರ ನಕಲನ್ನು ಪಡೆಯುವ ಪ್ರಯತ್ನ ನಡೆದಿತ್ತು. ಕಾಟನ್‌ಪೇಟೆ ವಾರ್ಡ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅನುದಾನದಲ್ಲಿ ಒಟ್ಟು ₹ 4 ಕೋಟಿ ಮೊತ್ತದ ಕಾಮಗಾರಿಗಳನ್ನು ಕೆಆರ್‌ಐಡಿಎಲ್ ಮೂಲಕ ನಿರ್ವಹಿಸಲು ಅನುಮತಿ ಪಡೆಯಲಾಗಿದೆ. ಕೆಲಸ ನಿರ್ವಹಿಸದೆಯೇ ಹಣ ಬಿಡುಗಡೆ ಮಾಡಿಸಿಕೊಳ್ಳಲಾಗುತ್ತಿದೆ' ಎಂದು ಆರೋಪಿಸಿದರು.

ಈ ಅಕ್ರಮದ ತನಿಖೆಯನ್ನು ಸಿಐಡಿಗೆ ವಹಿಸಲು ಶಿಫಾರಸು ಮಾಡುವಂತೆ ಒತ್ತಾಯಿಸಿ ಅವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಹಾಗೂ ಆಡಳಿತಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ದೂರಿನ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಗೌರವ್ ಗುಪ್ತ, 'ಈ ಬಗ್ಗೆ ತನಿಖೆ ನಡೆಸಲಾಗುತ್ತದೆ. ಅಧಿಕಾರಿಗಳು ತಪ್ಪೆಸಗಿರುವುದು ಕಂಡು ಬಂದರೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

### 'ಯಡಿಯೂರು ವಾರ್ಡ್ ಕಾಮಗಾರಿ ಕೆಆರ್‌ಐಡಿಎಲ್‌ಗೆ ವಹಿಸಿದ್ದೇಕೆ'

'ಗಾಂಧಿನಗರ ಕ್ಷೇತ್ರದ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ವಹಿಸಿದ್ದನ್ನು ಟೀಕಿಸುವ ಎನ್.ಆರ್.ರಮೇಶ್ ಅವರು ಯಡಿಯೂರು ವಾರ್ಡಿನ (ರಮೇಶ್ ಪತ್ನಿ ಈ ವಾರ್ಡ್‌ನ ಮಾಜಿ ಸದಸ್ಯೆ) ಕಸ ನಿರ್ವಹಣೆ ಕಾಮಗಾರಿಗಳನ್ನು ಕೆಆರ್‌ಐಡಿಎಲ್ ಮೂಲಕ ಮಾಡಿಸಿದ್ದೇಕೆ. ರಾಜಾಜಿನಗರ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ರಾಜರಾಜೇಶ್ವರಿ ನಗರ ಕ್ಷೇತ್ರಗಳ ಕಾಮಗಾರಿಗಳನ್ನೂ ಈ ಸಂಸ್ಥೆಗೆ ವಹಿಸಲಾಗಿದೆಯಲ್ಲವೇ. ಅವೆಲ್ಲವೂ ಸರಿ ಇವೆಯೇ' ಎಂದು ಕಾಂಗ್ರೆಸ್ ವಕ್ತಾರ ಎ.ಎನ್.ನಟರಾಜ ಗೌಡ ಪ್ರಶ್ನಿಸಿದ್ದಾರೆ.

'ಕೆಆರ್‌ಐಡಿಎಲ್ ಸಂಸ್ಥೆಗೆ ಹೆಚ್ಚಿನ ಕಾಮಗಾರಿ ವಹಿಸಲು ಕೆಟಿಪಿಪಿ ಕಾಯ್ದೆಗೆ ಕೆಲವೇ ತಿಂಗಳುಗಳ ಹಿಂದೆ ಈಗಿನ ರಾಜ್ಯ ಸರ್ಕಾರ ತಿದ್ದುಪಡಿ ತಂದಿದೆ. ನವನಗರೋತ್ಥಾನ ಯೋಜನೆಯ ಕಾಮಗಾರಿಗಳನ್ನೂ ಈ ಸಂಸ್ಥೆ ಮೂಲಕವೇ ನಿರ್ವಹಿಸಲು ಅವಕಾಶ ಕಲ್ಪಿಸಿದೆಯಲ್ಲವೇ. ಈ ಬಗ್ಗೆ ಏಕೆ ಸೊಲ್ಲೆತ್ತಿಲ್ಲ' ಎಂದೂ ಕೇಳಿದ್ದಾರೆ.

'ಮುನಿರತ್ನ, ಎಸ್.ಟಿ.ಸೋಮಶೇಖರ್ ವಿರುದ್ಧವೂ ಅಕ್ರಮವಾಗಿ ಕಾಮಗಾರಿ ನಡೆಸಿದ ಆಪಾದನೆಯನ್ನು ಎನ್.ಆರ್.ರಮೇಶ್ ಮಾಡಿದ್ದರು. ಈಗ ಬಿಜೆಪಿ ನೇತೃತ್ವದ ಸರ್ಕಾರವೇ ಇದೆ. ಆ ಆಪಾದನೆಗಳ ತನಿಖೆಗಳು ಏನಾದವು ತಿಳಿಸುವಿರಾ. ಗಾಂಧಿನಗರ ಮಾತ್ರ ಏಕೆ ಕಾಣುತ್ತಿದೆ. ಪಕ್ಕದ ಮಲ್ಲೇಶ್ವರ ಕ್ಷೇತ್ರದಲ್ಲಿ ಎಲ್ಲವೂ ಸರಿ ಇವೆಯೇ' ಎಂದೂ ಮಾಹಿತಿ ಕೇಳಿದ್ದಾರೆ.

'2019-20ರಿಂದ ಮತ್ತು 2020-21ರ ಮೊದಲ ಆರು ತಿಂಗಳುಗಳಲ್ಲಿ ಗಾಂಧಿನಗರ ಕ್ಷೇತ್ರಕ್ಕೆ ಅಕ್ರಮವಾಗಿ ₹ 252.23 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ರಮೇಶ್ ಆರೋಪಿಸಿದ್ದಾರೆ. ಈ ಅವಧಿಯಲ್ಲಿ ರಾಜ್ಯದಲ್ಲಿ ಮತ್ತು ಬಿಬಿಎಂಪಿಯಲ್ಲಿ ಬಿಜೆಪಿ ಆಡಳಿತವೇ ಇತ್ತು. ಅವರ ಆರೋಪ ಸರ್ಕಾರದ ವಿರುದ್ಧವೇ ಇರಬೇಕು' ಎಂದರು.

'ಕಾಮಗಾರಿ ಪೂರ್ಣಗೊಂಡ ಪ್ರಮಾಣಪತ್ರಗಳು, ಗುಣಮಟ್ಟ ಪರಿಶೀಲನೆ ವರದಿಗಳು ಸಂಬಂಧಪಟ್ಟ ಕಡತದಲ್ಲಿರುತ್ತವೆ. ಎಂ.ಬಿ ಪುಸ್ತಕ ಎಂಜಿನಿಯರ್ ಬಳಿ ಇರುತ್ತದೆ. ಬಿ.ಆರ್. ಸಂಖ್ಯೆ ಅದರ ರಿಜಿಸ್ಟರ್‌ನಲ್ಲಿರುತ್ತದೆ. ಇವುಗಳೆಲ್ಲವನ್ನೂ ಐಎಫ್‌ಎಂಎಸ್ ತಂತ್ರಾಂಶ ಮೂಲಕ ಸಾರ್ವಜನಿಕರೂ ನೋಡಬಹುದು' ಎಂದ ತಿಳಿಸಿದರು.

# ಅತ್ಯಾಚಾರ ಪ್ರಕರಣ: 12 ಮಂದಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ಬಾಂಗ್ಲಾದೇಶದ 23 ವರ್ಷದ ಯುವತಿ ಮೇಲೆ ಮೃಗೀಯವಾಗಿ ವರ್ತಿಸಿ, ಸಾಮೂಹಿಕ ಅತ್ಯಾಚಾರ ಎಸಗಿದ್ದ ಪ್ರಕರಣದ 12 ಆರೋಪಿಗಳ ವಿರುದ್ಧ ರಾಮಮೂರ್ತಿನಗರ ಪೊಲೀಸರು ನ್ಯಾಯಾಲಯಕ್ಕೆ ಬುಧವಾರ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ.

'ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿಗಳ ವಿರುದ್ಧ 1,019 ಪುಟಗಳ ಚಾಜ್‌ರ್ಶೀಟ್ ಅನ್ನು ಸಲ್ಲಿಸಲಾಗಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಶರಣಪ್ಪ ತಿಳಿಸಿದರು.

'10 ಮಂದಿಯ ವಿರುದ್ಧ ಅತ್ಯಾಚಾರ ಆರೋಪ ಹಾಗೂ ಇಬ್ಬರು ಯುವತಿಯರ ವಿರುದ್ಧ ಅಕ್ರಮ ವಲಸೆ ಆರೋಪವಿದೆ. ಕೃತ್ಯಕ್ಕೆ ಸಂಬಂಧಿಸಿದಂತೆ 30ಕ್ಕೂ ಹೆಚ್ಚು ಸಾಕ್ಷಿಗಳನ್ನು ಉಲ್ಲೇಖಿಸಲಾಗಿದೆ. ಆರು ಮಂದಿಯಿಂದ ಪಡೆದಿರುವ ಹೇಳಿಕೆ ದಾಖಲಿಸಿ, ಚಾರ್ಜ್‌ಶೀಟ್‌ನಲ್ಲಿ ನಮೂದಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಕೃತ್ಯ ನಡೆದ ಜಾಗದಲ್ಲಿ ಹಾಗೂ ಆರೋಪಿಗಳ ಮನೆಯಲ್ಲಿ ಪತ್ತೆಯಾಗಿದ್ದ ಸಾಕ್ಷ್ಯಾಧಾರಗಳು, ಕರೆಗಳ ಮಾಹಿತಿ, ಆರೋಪಿಗಳ ಮೊಬೈಲ್‌ನಲ್ಲಿ ಸೆರೆಯಾಗಿದ್ದ ಕೃತ್ಯದ ವಿಡಿಯೊಗಳು ಪೂರಕವಾಗಿ ಲಭ್ಯವಾಗಿತ್ತು. ಎಫ್‌ಎಸ್‌ಎಲ್ ವರದಿ, ಆರೋಪಿಗಳ ಡಿಎನ್‌ಎ ಮಾದರಿ ವರದಿಯನ್ನೂ ಚಾರ್ಜ್‌ಶೀಟ್‌ನಲ್ಲಿ ಸೇರಿಸಲಾಗಿದೆ'.

'ಆರೋಪಿಗಳಾದ ಸಾಗರ್, ಮೊಹಮ್ಮದ್ ಬಾಬಾ ಶೇಕ್, ರಿದಾಯ್ ಬಾಬು, ಹಕೀಲ್, ಶೂಬೂಜ್, ರಫ್ಸಾನ್, ತಾನಿಯಾ ಸೇರಿದಂತೆ 12 ಮಂದಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಈ ಪೈಕಿ 11 ಮಂದಿ ಆರೋಪಿಗಳು ಹಾಗೂ ಸಂತ್ರಸ್ತೆ ಬಾಂಗ್ಲಾದೇಶದವರು' ಎಂದು ಮಾಹಿತಿ ನೀಡಿದರು.

'ಅತ್ಯಾಚಾರ ಘಟನೆಗೆ ಆರೋಪಿಗಳು ಹಾಗೂ ಸಂತ್ರಸ್ತೆ ನಡೆಸುತ್ತಿದ್ದ ವೇಶ್ಯಾವಾಟಿಕೆ ದಂಧೆಯೇ ಪ್ರಮುಖ ಕಾರಣ. ಪ್ರಕರಣದ ಆರೋಪಿಗಳು ಯುವತಿಯರನ್ನು ಬಾಂಗ್ಲಾದಿಂದ ಭಾರತಕ್ಕೆ ಅಕ್ರಮವಾಗಿ ಸಾಗಾಟ ಮಾಡಿದ್ದರು.ಆದರೆ,ಆರೋಪಿಗಳಿಂದಯುವತಿಯರನ್ನು ಸಂತ್ರಸ್ತೆ ದೂರ ಮಾಡಿದ್ದಳು. ಇದರಿಂದ ನಷ್ಟ ಅನುಭವಿಸಿದ್ದ ಆರೋಪಿಗಳು ಸಂತ್ರಸ್ತೆಯ ಮೇಲೆ ಅತ್ಯಾಚಾರ ಎಸಗಿರುವುದಾಗಿ ತನಿಖೆಯಲ್ಲಿ ತಿಳಿದು ಬಂದಿದೆ' ಎಂದೂ ಹೇಳಿದರು.

ಪ್ರಕರಣದ ಆರೋಪಿಗಳನ್ನು ಪತ್ತೆ ಹಚ್ಚಿದ ಪೊಲೀಸರಿಗೆ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ₹1 ಲಕ್ಷ ನಗದು ಬಹುಮಾನ ಘೋಷಿಸಿದ್ದಾರೆ.

### ನಗರದಲ್ಲಿ ಇಂದು

**ದತ್ತಿ ಉಪನ್ಯಾಸ:** ಎಸ್.ಕೆ. ಪ್ರೇಮಾ, ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ದತ್ತಿ ಕಾರ್ಯಕ್ರಮ: ವಿಷಯ: 'ಕನ್ನಡದ ವಚನಕಾರ್ತಿಯರು ಉಪನ್ಯಾಸ ಮಾಲಿಕೆ', ಉದ್ಘಾಟನೆ: ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ, ಉಪಸ್ಥಿತಿ: ಆರ್. ಲಕ್ಷ್ಮೀನಾರಾಯಣ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

## ಜಾಮೀನು ನಿಯಮ ಉಲ್ಲಂಘನೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭದ್ರತಾ ಕಾಯ್ದೆಯ ವೈಯಕ್ತಿಕ ಮುಚ್ಚಳಿಕೆ ಹಾಗೂ ಜಾಮೀನು ನಿಯಮ ಉಲ್ಲಂಘಿಸಿದ ಶಿವಾಜಿನಗರದ ರೌಡಿ ಶಬ್ಬೀರ್‌ನನ್ನು (26) ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.

'ಶಿವಾಜಿನಗರ ವ್ಯಾಪ್ತಿಯ ಬ್ರಾಡ್ ವೇ ರಸ್ತೆಯ ದರ್ಗಾ ಬಳಿ ಮಾರಕಾಸ್ತ್ರಗಳೊಂದಿಗೆ ದರೋಡೆಗೆ ಸಜ್ಜಾಗಿದ್ದ ಆರೋಪದಡಿ ಶಬ್ಬೀರ್‌ನನ್ನು ಕಳೆದ ವರ್ಷ ಬಂಧಿಸಲಾಗಿತ್ತು. ಬಳಿಕ ಜಾಮೀನಿನ ಮೇಲೆ ಶಬ್ಬೀರ್ ಹೊರ ಬಂದಿದ್ದ' ಎಂದು ಪೊಲೀಸರು ತಿಳಿಸಿದರು.

'ಶಬ್ಬೀರ್‌ಗೆ ಒಂದು ವರ್ಷದ ಅವಧಿಗೆ ವೈಯಕ್ತಿಕ ಮುಚ್ಚಳಿಕೆ ಜಾರಿಯಲ್ಲಿತ್ತು. ಈ ಅವಧಿಯಲ್ಲಿ ಯಾವುದೇ ಅಪರಾಧ ಕೃತ್ಯಗಳಲ್ಲಿ ತೊಡಗಬಾರದು ಎಂದು ಸೂಚಿಸಲಾಗಿತ್ತು. ಆದರೂ ಶಬ್ಬೀರ್ ಅಪರಾಧ ಕೃತ್ಯಗಳನ್ನು ಮುಂದುವರಿಸಿದ್ದ' ಎಂದರು.

# ಕೊರಿಯರ್ ಕಚೇರಿಗಳ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೊರ ರಾಜ್ಯಗಳಿಂದ ನಗರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಮಾದಕ ವಸ್ತುಗಳು ಸರಬರಾಜು ಆಗುತ್ತಿರುವ ಅನುಮಾನದ ಮೇರೆಗೆ ಕೇಂದ್ರ ವಿಭಾಗದ ಕೊರಿಯರ್ ಕಚೇರಿಗಳ ಮೇಲೆ ಪೊಲೀಸರು ಬುಧವಾರ ದಿಢೀರ್ ದಾಳಿ ನಡೆಸಿದರು.

ವಿಶಾಖಪಟ್ಟಣದಿಂದ ಬೆಂಗಳೂರಿಗೆ ಗಾಂಜಾ ಹಾಗೂ ಇತರ ಮಾದಕ ವಸ್ತುಗಳು ಪೂರೈಕೆಯಾಗುತ್ತಿರುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಿವೆ. ಡ್ರಗ್ಸ್ ಪೂರೈಕೆದಾರರು ಅನುಮಾನ ಬರದಂತೆ ಕೊರಿಯರ್ ಮೂಲಕ ಡ್ರಗ್ಸ್ ಸಾಗಿಸುವ ಮಾರ್ಗ ಕಂಡುಕೊಂಡಿದ್ದರು.

ಕೇಂದ್ರ ವಿಭಾಗದ ವಿವೇಕನಗರ, ಅಶೋಕನಗರ, ಸಂಪಂಗಿ ರಾಮನಗರ, ಸದಾಶಿವನಗರ, ಶೇಷಾದ್ರಿಪುರ, ವೈಯಾಲಿಕಾವಲ್ ಭಾಗದಲ್ಲಿ ಹೆಚ್ಚಾಗಿ ಮಾದಕ ವಸ್ತುಗಳು ಸರಬರಾಜು ಆಗುತ್ತಿರುವ ಕುರಿತು ಮಾಹಿತಿ ಇದ್ದಿದ್ದರಿಂದ ಈ ಭಾಗದಲ್ಲಿರುವ ಕೊರಿಯರ್ ಕಚೇರಿಗಳ ಮೇಲೆ ದಾಳಿ ನಡೆಸಿದರು. 12 ಸ್ಥಾನಗಳಿಂದ ವಿವಿಧೆಡೆ ತಪಾಸಣೆ ನಡೆಯಿತು.

'ಕೇಂದ್ರ ವಿಭಾಗದ ವ್ಯಾಪ್ತಿಯಲ್ಲಿ ಡ್ರಗ್ಸ್ ಪೂರೈಕೆ ಮೇಲೆ ಹದ್ದಿನ ಕಣ್ಣಿಡಲಾಗಿದೆ. ಡ್ರಗ್ಸ್ ಪೂರೈಸುವವರು ಹಾಗೂ ಖರೀದಿಸುವವರ ಮೇಲೆ ನಿಗಾ ಇಡಲಾಗಿದೆ' ಎಂದು ದಾಳಿಯ ನೇತೃತ್ವ ವಹಿಸಿದ್ದ ಕೇಂದ್ರ ವಿಭಾಗದ ಡಿಸಿಪಿ ಅನುಚೇತ್ ತಿಳಿಸಿದ್ದಾರೆ.

ಕೇಂದ್ರ ಸಚಿವ ಸಂಪುಟ ಪುನರ್‌ರಚನೆ: ಕಾಫಿನಾಡು ಚಿಕ್ಕಮಗಳೂರಿಗೆ ಎರಡನೇ ಬಾರಿ ಒಲಿದ ಭಾಗ್ಯ

# 3 ದಶಕದ ಬಳಿಕ ರಾಜ್ಯದ ಮಹಿಳೆಗೆ ಸಚಿವ ಸ್ಥಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಕರ್ನಾಟಕದಿಂದ ಕೇಂದ್ರ ಸಚಿವ ಸಂಪುಟ ಸೇರಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಶೋಭಾ ಕರಂದ್ಲಾಜೆ ಪಾತ್ರರಾಗಿದ್ದಾರೆ.

ಕಳೆದ ಮೂರು ದಶಕಗಳಿಂದೀಚೆಗೆ ರಾಜ್ಯದ ಮಹಿಳೆಯೊಬ್ಬರು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ, ಗೆದ್ದು ಕೇಂದ್ರ ಸಚಿವ ಸ್ಥಾನಕ್ಕೆ ಏರಿಲ್ಲ. ಆ ಕೀರ್ತಿಗೂ ಶೋಭಾ ಪಾತ್ರರಾಗಿದ್ದಾರೆ. ಪ್ರಧಾನಿ ಮೋದಿ ತಡವಾಗಿಯಾದರೂ ಶೋಭಾ ಅವರನ್ನು ಗುರುತಿಸಿದ್ದಾರೆ ಎಂಬ ವಿಶ್ಲೇಷಣೆ ಬಿಜೆಪಿ ವಲಯದಲ್ಲಿ ನಡೆದಿದೆ.



ಶೋಭಾ ಕರಂದ್ಲಾಜೆ

ಈ ಹಿಂದೆ 1991 ರಲ್ಲಿ ಚಿಕ್ಕಮಗಳೂರು ಕ್ಷೇತ್ರದಿಂದ ಗೆದ್ದಿದ್ದ ಕಾಂಗ್ರೆಸ್‌ನ ಡಿ.ಕೆ.ತಾರಾದೇವಿ ಅವರು ಪಿ.ವಿ. ನರಸಿಂಹರಾವ್ ಅವರ ಮಂತ್ರಿ ಮಂಡಲದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಈಗ ಚಿಕ್ಕಮಗಳೂರು–ಉಡುಪಿ ಕ್ಷೇತ್ರವನ್ನು ಶೋಭಾ ಪ್ರತಿನಿಧಿಸುತ್ತಿದ್ದಾರೆ.

ಮಾರ್ಗರೇಟ್ ಆಳ್ವ ಅವರು ಅದೇ ಅವಧಿಯಲ್ಲಿ (1991 ರಿಂದ 96) ಕೇಂದ್ರ ಸಚಿವರಾಗಿದ್ದರು. ಆಗ ಅವರು ರಾಜ್ಯಸಭೆ ಸದಸ್ಯರಾಗಿದ್ದರು. ಆಳ್ವ 1999 ರಲ್ಲಿ ಕೆನರಾ ಕ್ಷೇತ್ರದಿಂದ ಲೋಕಸಭೆಗೆ ಒಮ್ಮೆ ಮಾತ್ರ ಆಯ್ಕೆ ಆಗಿದ್ದರು.

ಆಗ ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಇತ್ತು. ಯುಪಿಎ ಅವಧಿಯಲ್ಲಿ ವಿವಿಧ ರಾಜ್ಯಗಳಲ್ಲಿ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದರು.

1991 ರ ಬಳಿಕ ನಡೆದ ಲೋಕಸಭಾ ಚುನಾವಣೆಗಳಲ್ಲಿ ಕರ್ನಾಟಕದಿಂದ ಗೆದ್ದಿರುವ ಮಹಿಳೆಯರು ಸಚಿವ ಸ್ಥಾನ ಪಡೆಯಲಿಲ್ಲ. ಗೆದ್ದ ಮಹಿಳೆಯರ ಸಂಖ್ಯೆಯೂ ಕಡಿಮೆ. ಶೋಭಾ ಎರಡನೇ ಬಾರಿಗೆ ಲೋಕಸಭಾ ಚುನಾವಣೆಯಲ್ಲಿ ಗೆದ್ದಿರುವುದು ಮಾತ್ರವಲ್ಲದೆ, ಹಿಂದೆ ರಾಜ್ಯದಲ್ಲಿ ಸಚಿವರಾಗಿ ಕಾರ್ಯ ನಿರ್ವಹಿಸಿ ಅನುಭವ ಹೊಂದಿದ್ದಾರೆ. ಇವೆಲ್ಲವನ್ನೂ ಪರಿಗಣಿಸಿ ಅವರಿಗೆ ಸ್ಥಾನ ನೀಡಲಾಗಿದೆ.

2019 ರ ಲೋಕಸಭಾ ಚುನಾವಣೆ ಬಳಿಕ ಬಹುತೇಕ ನೇಪಥ್ಯ ಸರಿದಿದ್ದ ಅವರು, ಬಹಿರಂಗ ಹೇಳಿಕೆಗಳನ್ನು ಕೊಡುವುದನ್ನೂ ಕಡಿಮೆ ಮಾಡಿದ್ದರು. 2018 ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ರಾಜ್ಯದಿಂದ ಸ್ಪರ್ಧಿಸುವ ಬಗ್ಗೆ ಒಲವು ಹೊಂದಿದ್ದರು. ಕೇಂದ್ರ ನಾಯಕತ್ವ ಅದಕ್ಕೆ ಅವಕಾಶ ನೀಡಿರಲಿಲ್ಲ.

2019 ರ ಲೋಕಸಭೆಯಲ್ಲಿ ಗೆದ್ದ ಬಳಿಕ ಅವರು ಪಕ್ಷದ ಚಟುವಟಿಕೆಯಿಂದಲೂ ದೂರ ಉಳಿದಿದ್ದರು.

ಯಡಿಯೂರಪ್ಪ ಅವರ ಜತೆಗೆ ನಿಕಟ ಒಡನಾಟ ಹೊಂದಿದ್ದ ಶೋಭಾ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಬಳಿಕ ಅಂತರ ಕಾಯ್ದುಕೊಂಡಿದ್ದರು. ಅದಕ್ಕೆ, ಯಡಿಯೂರಪ್ಪನವರ ಕುಟುಂಬದವರು ಕಾರಣ ಎಂದೂ ಹೇಳಲಾಗಿತ್ತು.

ಅಲ್ಲದೇ, ಕರ್ನಾಟಕದ ಸರ್ಕಾರ ಹಾಗೂ ರಾಜಕಾರಣದಲ್ಲಿ ತಲೆ ಹಾಕದಂತೆ ಪಕ್ಷದ ವರಿಷ್ಠರು ಶೋಭಾ ಅವರಿಗೆ ಸ್ಪಷ್ಟ ಸೂಚನೆಯನ್ನು ನೀಡಿದ್ದರು ಎನ್ನಲಾಗುತ್ತಿದೆ.

ಇದೀಗ, ಕೇಂದ್ರ ನಾಯಕತ್ವ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಅವರಿಗೆ ಶೋಭಾ ಅವಕಾಶ ನೀಡಿದೆ.



## ಡಿವಿಎಸ್‌ಗೆ ರಾಜ್ಯದಲ್ಲಿ ಉತ್ತಮ ಸ್ಥಾನ: ಡಿಸಿಎಂ

ಪ್ರಜಾವಾಣಿ ವಾರ್ತೆ

**ರಾಮನಗರ:** ಕೇಂದ್ರ ಸಚಿವ ಸದಾನಂದ ಗೌಡ ಸ್ವಯಂಪ್ರೇರಿತರಾಗಿ ರಾಜೀನಾಮೆ ನೀಡಿ, ಮತ್ತೊಬ್ಬರಿಗೆ ಅವಕಾಶ ನೀಡಿದ್ದಾರೆ. ಅವರಿಗೆ ಮುಂದೆ ರಾಜ್ಯದಲ್ಲಿ ದೊಡ್ಡ ಸ್ಥಾನ ಸಿಗಬಹುದು ಎಂದು ಉಪ ಮುಖ್ಯಮಂತ್ರಿ ಡಾ.ಸಿ. ಎನ್. ಅಶ್ವತ್ಥನಾರಾಯಣ ಸುಳಿವು ನೀಡಿದ್ದಾರೆ.

ನಗರದಲ್ಲಿ ಬುಧವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಸದಾನಂದಗೌಡರು ರಾಜ್ಯದ ಮುಖ್ಯಮಂತ್ರಿಯಾಗಿ ಹಾಗೂ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ ಉತ್ತಮ ಕೆಲಸ ಮಾಡಿದ್ದಾರೆ. ರಾಜಕೀಯದಲ್ಲಿ ಯಾವಾಗ ಏನು ಬೇಕಾದರೂ ಆಗಬಹುದು. ಮುಂದೆ ರಾಜ್ಯದ ಮುಖ್ಯಮಂತ್ರಿ ಆಗುವ ಬಗ್ಗೆ ಗೊತ್ತಿಲ್ಲ. ಯಾರಿಗೆ ಯಾವಾಗ ಅವಕಾಶ ಒದಗಿ ಬರುತ್ತೋ ಎನ್ನುವುದನ್ನು ರಾಜಕಾದಲ್ಲಿ ಹೇಳಲಾಗದು. ನಮ್ಮ ಪಕ್ಷದಲ್ಲಿ ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ಅವರಿಗೆ ಉತ್ತಮ ಸ್ಥಾನ ಸಿಗಬಹುದು' ಎಂದರು.

ಮುಖ್ಯಮಂತ್ರಿ ಬದಲಾವಣೆ ಕುರಿತು ಬಸವರಾಜ ಯತ್ನಾಳ್, ಸಿ.ಪಿ. ಯೋಗೇಶ್ವರ್ ಕುರಿತು ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿದ ಡಿಸಿಎಂ, 'ಸದ್ಯಕ್ಕೆ ರಾಜ್ಯದಲ್ಲಿ ಮುಖ್ಯಮಂತ್ರಿ ಇದ್ದಾರೆ. ಈ ವಿಚಾರದಲ್ಲಿ ಯಾರೂ ಮಾತನಾಡಬಾರದು' ಎಂದರು.

**ಶೀಘ್ರದಲ್ಲಿಯೇ ಮೇಕೆದಾಟು:** 'ಮೇಕೆದಾಟು ಯೋಜನೆಯನ್ನು ಸರ್ಕಾರ ಶೀಘ್ರದಲ್ಲಿಯೇ ಅನುಷ್ಠಾನಕ್ಕೆ ತರಲಿದೆ. ಅವರು ಅವರ ಪಾಲಿನ ನೀರನ್ನು ಬಳಸಿಕೊಂಡು ಯೋಜನೆ ರೂಪಿಸಿದಂತೆ, ನಾವು ನಮ್ಮ ಪಾಲಿನ ನೀರನ್ನು ಬಳಸಿಕೊಂಡು ಯೋಜನೆ ಅನುಷ್ಠಾನಕ್ಕೆ ತರುತ್ತೇವೆ. ಇದಕ್ಕೆ ತಮಿಳುನಾಡು ಒಪ್ಪುತ್ತಿಲ್ಲ. ಈ ಬಗ್ಗೆ ಕಾನೂನು ಚೌಕಟ್ಟಿನಲ್ಲಿಯೇ ಸೂಕ್ತ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಲಿದೆ' ಎಂದರು.

**ಮೈಶುಗರ್ ಖಾಸಗೀಕರಣ ಅನಿವಾರ್ಯ:** ಮಂಡ್ಯದ ಮೈಶುಗರ್ ಕಾರ್ಖಾನೆ ಆರಂಭದ ಬಗ್ಗೆ ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿಯಾಗಿದ್ದರು. ಇದು ತಪ್ಪೇನೂ ಅಲ್ಲ. ಕಾರ್ಖಾನೆ ಆರಂಭ ಆ ಭಾಗದ ಜನರ ಬಹುದಿನಗಳ ಬಯಕೆ. ಆ ನಿಟ್ಟಿನಲ್ಲಿ ಸರ್ಕಾರ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಿದೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಮೈಶುಗರ್ ಕಾರ್ಖಾನೆ ಖಾಸಗೀಕರಣ ಮಾಡುವುದು ಅನಿವಾರ್ಯ. ಈವರೆಗೆ ಸರ್ಕಾರದ ಉಸ್ತುವಾರಿಯಲ್ಲಿ ಹೇಗೆ ನಡೆದಿದೆ, ಏನೆಲ್ಲ ಅಧ್ವಾನಗಳು ಆಗಿದ್ದವು ಎಂಬುದು ಎಲ್ಲರಿಗೂ ಗೊತ್ತಿದೆ. ಹೀಗಾಗಿ ಖಾಸಗೀಕರಣವೇ ಉತ್ತಮ ಪರಿಹಾರ. ಈ ಕಾರ್ಖಾನೆ ನಮ್ಮ ರಾಜ್ಯದ ಹೆಮ್ಮೆಯ ಸಂಕೇತ. ಅದನ್ನು ಉಳಿಸಿ ಬೆಳೆಸಬೇಕು ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಮಹಿಳೆಯರ ಸಂಖ್ಯೆ 11ಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟದಲ್ಲಿ ಏಳು ಸಂಸದೆಯರು ಸ್ಥಾನ ಪಡೆಯುವ ಮೂಲಕ ಕೇಂದ್ರ ಸಚಿವ ಸಂಪುಟದಲ್ಲಿ ಮಹಿಳಾ ಸಚಿವರ ಸಂಖ್ಯೆ 11ಕ್ಕೆ ಏರಿದೆ.

2019ರಲ್ಲಿ ಸಚಿವೆ ಆಗಲು ವಿಫಲರಾಗಿದ್ದ ಅಪ್ನಾ ದಳದ ಅನುಪ್ರಿಯಾ ಪಟೇಲ್ ಈ ಬಾರಿ ಸಚಿವ ಸ್ಥಾನಕ್ಕೆ ಮರಳಿದ್ದಾರೆ.

ಇನ್ನುಳಿದಂತೆ ಸಂಸದರಾದ ಶೋಭಾ ಕರಂದ್ಲಾಜೆ, ದರ್ಶನಾ ಜಾರ್ದೋಶ್, ಮೀನಾಕ್ಷಿ ಲೇಖಿ, ಪ್ರತಿಮಾ ಭೌಮಿಕ್ ಮತ್ತು ಡಾ. ಭಾರತಿ ಪವಾರ್ ಹೊಸದಾಗಿ ಸಂಪುಟಕ್ಕೆ ಸೇರ್ಪಡೆ ಆಗಿದ್ದಾರೆ.

ಸಚಿವೆಯರಾಗಿ ಕರ್ತವ್ಯ ನಿಭಾಯಿಸುತ್ತಿರುವ ನಿರ್ಮಲಾ ಸೀತಾರಾಮನ್, ಸ್ಮೃತಿ ಇರಾನಿ, ರೇಣುಕಾ ಸಿಂಗ್ ಮತ್ತು ಸಾಧ್ವಿ ನಿರಂಜನ್ ಜ್ಯೋತಿ ಅವರು ಸಂಪುಟ ಪುನರ್ರಚನೆ ಬಳಿಕವೂ ಮುಂದುವರಿದಿದ್ದಾರೆ. ಆದರೆ ಸಹಾಯಕ ಸಚಿವೆಯಾಗಿದ್ದ ದೇವಶ್ರೀ ಚೌಧರಿಯನ್ನು ಸಂಪುಟದಿಂದ ಕೈಬಿಡಲಾಗಿದೆ.

ಮೋದಿ ನೇತೃತ್ವದ ಸರ್ಕಾರದ ಎರಡನೇ ಅವಧಿಯಲ್ಲಿ ಆರು ಮಹಿಳಾ ಸಚಿವರಿದ್ದರು. ಅಕಾಲಿ ದಳವು ಬಿಜೆಪಿ ಜೊತೆಗೆ ಮೈತ್ರಿ ಮುರಿದುಕೊಂಡ ಬಳಿಕ ಹರ್‌ಸಿಮ್ರತ್ ಕೌರ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಮೊದಲ ಅವಧಿಯಲ್ಲಿ ಸಚಿವರಾಗಿದ್ದ ಸುಷ್ಮಾ ಸ್ವರಾಜ್ ಮತ್ತು ಮೇನಕಾ ಗಾಂಧಿ ಅವರಿಗೆ ಎರಡನೇ ಅವಧಿಯಲ್ಲಿ ಸ್ಥಾನ ನೀಡಲಾಗಿರಲಿಲ್ಲ.

ಕೆಲವು ವರ್ಷಗಳಿಂದ ದೇಶದಲ್ಲಿ ಮಹಿಳಾ ಸಚಿವರ ಸಂಖ್ಯೆ ಹೆಚ್ಚುತ್ತಿದೆ. ಆದರೆ ಮೋದಿ ಆಡಳಿತದಲ್ಲಿ ಮಹಿಳಾ ಸಂಪುಟ ಸಚಿವರ ಸಂಖ್ಯೆಯೂ ಹೆಚ್ಚಿದೆ. ಮೊದಲ ಅವಧಿಯಲ್ಲಿ ನಿರ್ಮಲಾ ಸೀತಾರಾಮನ್ ರಕ್ಷಣಾ ಸಚಿವೆ ಕೂಡ ಆಗಿದ್ದರು. ಸದ್ಯ ಸಂಸತ್ತಿನಲ್ಲಿ 78 ಮಹಿಳಾ ಸದಸ್ಯರಿದ್ದಾರೆ. ಅವರಲ್ಲಿ 41 ಸಂಸದರು ಬಿಜೆಪಿಯವರು.

ಹೊಸದಾಗಿ ಸಚಿವ ಸ್ಥಾನ ಪಡೆದಿರುವ ಮಹಿಳೆಯರಲ್ಲಿ ಒಬ್ಬರಾಗಿರುವ ಶೋಭಾ ಕರಂದ್ಲಾಜೆ, ಎಲ್ಲಾ ಸಂದರ್ಭಗಳಲ್ಲೂ ಪಕ್ಷದ ಬೆನ್ನಿಗೆ ನಿಲ್ಲುವ ಪ್ರಮುಖ ರಾಜಕಾರಣಿಗಳಲ್ಲಿ ಒಬ್ಬರು.

ಮೀನಾಕ್ಷಿ ಲೇಖಿ ಅವರು ಪ್ರಧಾನಿ ಮೋದಿ ಅವರ ಸ್ಥಿರ ಬೆಂಬಲಿಗರು. 2014ರ ಲೋಕಸಭೆ ಚುನಾವಣೆಗೂ ಮುನ್ನವೇ ನರೇಂದ್ರ ಮೋದಿ ಪ್ರಧಾನಿಯಾಗಿ ಆಯ್ಕೆ ಆಗುಬೇಕು ಎಂದು ಪ್ರತಿಪಾದಿಸುತ್ತಿದ್ದವರು. ಸಂಸತ್ತಿನ ಹೊರಗೂ ಬಿಜೆಪಿ ಪರವಾಗಿ ಹೋರಾಟ ಮಾಡಿರುವವರು. ರಫೇಲ್ ಹಗರಣವನ್ನು ಮುಂದಿಟ್ಟು ಕಾಂಗ್ರೆಸ್ ಪಕ್ಷವು ಸರ್ಕಾರದ ವಿರುದ್ಧ ಆರೋಪ ಮಾಡಿದ್ದಾಗ ಅದರ ವಿರುದ್ಧ ಗಟ್ಟಿ ದನಿಯಲ್ಲಿ ಮಾತನಾಡಿದ್ದರು. ಆರ್‌ಜೆಡಿಯ ಮಾಜಿ ಅಧ್ಯಕ್ಷರಾದ ಅನ್ನಪೂರ್ಣ ಸಿಂಗ್, 2019ರ ಲೋಕಸಭಾ ಚುನಾವಣೆಗೂ ಮೊದಲೇ ಬಿಜೆಪಿ ಸೇರ್ಪಡೆಯಾಗಿ, ಜಾರ್ಖಂಡ್‌ನ ಕೋಡರಮಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು.

ಉಳಿದಂತೆ ಸೂರತ್‌ನಿಂದ ಮೂರು ಬಾರಿ ಸಂಸದರಾಗಿ ಆಯ್ಕೆ ಆಗಿರುವ ದರ್ಶನಾ ಜಾರ್ದೋಶ್, ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಭಾರತಿ ಪವಾರ್, ತ್ರಿಪುರಾ ಪಶ್ಚಿಮ ಕ್ಷೇತ್ರದಿಂದ ಆರಿಸಿ ಬಂದಿರುವ ಪ್ರತಿಮಾ ಭೌಮಿಕ್ ಸ್ಥಾನ ಪಡೆದಿದ್ದಾರೆ.

### ದಾಖಲೆ ಬರೆಯಲು ವಿಫಲ

ಮೊತ್ತೊಬ್ಬ ಮಹಿಳೆಗೆ ಸಚಿವೆ ಸ್ಥಾನ ನೀಡಿದ್ದರೆ, ಮೋದಿ ನೇತೃತ್ವದ ಸರ್ಕಾರವು ಹೆಚ್ಚು ಮಹಿಳಾ ಸಚಿವರನ್ನು ಹೊಂದಿರುವ ಭಾರತದ ಸರ್ಕಾರ ಎಂದು ಇತಿಹಾಸದಲ್ಲಿ ದಾಖಲಾಗುತ್ತಿತ್ತು. 2013ರಲ್ಲಿ ಮನಮೋಹನ್ ಸಿಂಗ್ ಅವರ ಸರ್ಕಾರದಲ್ಲಿ 12 ಮಹಿಳಾ ಸಚಿವರಿದ್ದರು. ಭಾರತದಲ್ಲಿ ಮಹಿಳಾ ಸಚಿವೆಯರ ಸಂಖ್ಯೆ ಹೆಚ್ಚಾಗುತ್ತಿದೆ. ಆದರೂ, ಒಟ್ಟು ಸಚಿವರಲ್ಲಿ ಶೇ 50ರಷ್ಟು ಮಹಿಳಾ ಸಚಿವರನ್ನು ಹೊಂದಿರುವ 9 ದೇಶಗಳ ಪಟ್ಟಿಗೆ ಸೇರಲು ಕ್ರಮಿಸಬೇಕಿರುವ ಹಾದಿ ಬಹಳವಿದೆ.



ಒಪ್ಪಂದ ಪತ್ರವನ್ನು ಅಶ್ವತ್ಥನಾರಾಯಣ ಅವರಿಗೆ ಚೆನ್‌ರಾಜ್ ರಾಯ್‌ಚಂದ್ ಅವರು ಹಸ್ತಾಂತರಿಸಿದರು

## 'ಪೋಷಕರನ್ನು ಕಳೆದುಕೊಂಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡ ಒಂದು ಸಾವಿರ ಪದವಿ ವಿದ್ಯಾರ್ಥಿಗಳಿಗೆ ಉಚಿತ ಆನ್‌ಲೈನ್ ಶಿಕ್ಷಣ ನೀಡಲು ಜೈನ್ ವಿಶ್ವವಿದ್ಯಾಲಯ ಮುಂದೆ ಬಂದಿದ್ದು, ಈ ಕುರಿತ ಒಪ್ಪಿಗೆ ಪತ್ರವನ್ನು ಉಪ ಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ಅವರಿಗೆ ನೀಡಿತು.

ಜೈನ್ ಸಂಸ್ಥೆಯ 30ನೇ ವಾರ್ಷಿಕೋತ್ಸವದ ಅಂಗವಾಗಿ ಶೇಷಾದ್ರಿಪುರದ ಕಾಲೇಜು ಆವರಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಚೆನ್‌ರಾಜ್ ರಾಯ್‌ಚಂದ್ ಅವರು ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿ ಹಸ್ತಾಂತರಿಸಿದರು.

'ಈ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕವೇ ಅತ್ಯುತ್ತಮ ಶಿಕ್ಷಣ ನೀಡಲಾಗುವುದು. ಅವರಿಗೆ ಅಗತ್ಯವಾದ ಎಲ್ಲ ಶೈಕ್ಷಣಿಕ ಅಗತ್ಯಗಳನ್ನೂ, ಪರಿಕರಗಳನ್ನೂ ಒದಗಿಸಲಾಗುವುದು ಎಂದು ಜೈನ್ ಸಂಸ್ಥೆ ತಿಳಿಸಿದೆ. ಇಂಥ ವಿದ್ಯಾರ್ಥಿಗಳಿಗೆ ಶೇ 100 ವಿದ್ಯಾರ್ಥಿ ವೇತನವನ್ನೂ ಸಂಸ್ಥೆ ಘೋಷಣೆ ಮಾಡಿದೆ' ಎಂದು ಡಾ.ಅಶ್ವತ್ಥನಾರಾಯಣ ತಿಳಿಸಿದರು.

**ಪಾರಂಪರಿಕ ಕಾಲೇಜು ಕಟ್ಟಡಗಳ ಅಭಿವೃದ್ಧಿ:** ಮಲ್ಲೇಶ್ವರದ 18ನೇ ಕ್ರಾಸ್‌ನಲ್ಲಿರುವ ಸರ್ಕಾರಿ ಶಾಲೆಯ ಪಾರಂಪರಿಕ ಕಲ್ಲು ಕಟ್ಟಡ ಹಾಗೂ ರೇಸ್‌ಕೋರ್ಸ್ ರಸ್ತೆಯಲ್ಲಿ ಪಾರಂಪರಿಕ ಆರ್.ಸಿ.ಕಾಲೇಜಿನ ಕಲ್ಲು ಕಟ್ಟಡಗಳನ್ನು ಸಂರಕ್ಷಿಸಿ ನವೀಕರಿಸಲು ಜೈನ್ ಶಿಕ್ಷಣ ಸಂಸ್ಥೆ ಸಕಾರಾತ್ಮಕವಾಗಿ ಸ್ಪಂದಿಸಿದೆ.

## ಸಹಕಾರ ಸಚಿವಾಲಯ ರಚನೆ ಐತಿಹಾಸಿಕ ಹೆಜ್ಜೆ: ಸಚಿವ

ಪ್ರಜಾವಾಣಿ ವಾರ್ತೆ

**ಮೈಸೂರು:** ಕೇಂದ್ರ ಸರ್ಕಾರವು ನೂತನ ಸಹಕಾರ ಸಚಿವಾಲಯ ಸ್ಥಾಪಿಸಿರುವುದು ಸಹಕಾರ ಕ್ಷೇತ್ರದ ಬೆಳವಣಿಗೆ ನಿಟ್ಟಿನಲ್ಲಿ ಮಹತ್ವದ ಹಾಗೂ ಐತಿಹಾಸಿಕ ಹೆಜ್ಜೆ ಎಂದು ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಬುಧವಾರ ಇಲ್ಲಿ ಬಣ್ಣಿಸಿದರು.

'ಅಭಿವೃದ್ಧಿ ಪಥದಲ್ಲಿ ಸಾಗಲು ಹಾಗೂ ವಿವಿಧ ರಾಜ್ಯ ಸಹಕಾರ ಸಂಘಗಳಲ್ಲಿ ಶಿಸ್ತು ಮೂಡಿಸಲು ಈ ನಡೆ ಸಹಕಾರಿ ಆಗಲಿದೆ. ಈ ಮೂಲಕ ಮಹಾತ್ಮ ಗಾಂಧಿ ಆಶಯವೂ ಪೂರ್ಣವಾಗಬಲ್ಲದು. ಇದಕ್ಕೆ ಕಾರಣವಾಗಿರುವ ಪ್ರಧಾನಿ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರಿಗೆ ಅಭಿನಂದನೆ ಸಲ್ಲಿಸುವೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಸೋಮಶೇಖರ್

'ಕೇಂದ್ರದಲ್ಲಿಯೂ ಸಹಕಾರ ಸಚಿವಾಲಯ ಸ್ಥಾಪನೆಯಾಗಬೇಕೆಂಬುದು ಸಹಕಾರ ಕ್ಷೇತ್ರದ ಕನಸಾಗಿತ್ತು. ಸಹಕಾರ ಭಾರತಿ ವತಿಯಿಂದ ಒತ್ತಾಯವನ್ನೂ ಮಾಡಲಾಗಿತ್ತು. ಸಹಕಾರದಿಂದ ಸಮೃದ್ಧಿ ಎಂಬ ತತ್ವಕ್ಕೆ ಬದ್ಧವಾಗಿರುವ ಕೇಂದ್ರ ಸರ್ಕಾರದ ಕ್ರಮ ಮಾದರಿ. ಹೆಚ್ಚಿನ ಅನುದಾನ ಪಡೆಯಲು, ರೈತರು ಮತ್ತು ಸಹಕಾರಿಗಳ ಅಭ್ಯುದಯಕ್ಕೆ ಪೂರಕವಾಗಲಿದೆ' ಎಂದರು.

## ನೀವು ಶಾಸಕರೋ, ಭಯೋತ್ಪಾದಕರೋ?

### ಎಚ್‌ಡಿಕೆ ಸೇರಿ ಜೆಡಿಎಸ್ ಶಾಸಕರ ವಿರುದ್ಧ ಸಂಸದೆ ಸುಮಲತಾ ಆಕ್ರೋಶ

ಪ್ರಜಾವಾಣಿ ವಾರ್ತೆ

**ಮಂಡ್ಯ:** 'ಅಕ್ರಮ ಗಣಿಗಾರಿಕೆಯಿಂದ ಕೆಆರ್‌ಎಸ್ ಜಲಾಶಯಕ್ಕೆ ಧಕ್ಕೆಯುಂಟಾಗುತ್ತಿರುವುದನ್ನು ನಾನು ಪ್ರಶ್ನಿಸಿದರೆ ಮಾಜಿ ಮುಖ್ಯಮಂತ್ರಿ ಸೇರಿ ಜಿಲ್ಲೆಯ ಹಲವು ಶಾಸಕರು ಬೆದರಿಕೆಯೊಡ್ಡುತ್ತಿದ್ದಾರೆ. ಅವರೆಲ್ಲ ಶಾಸಕರೋ ಅಥವಾ ಭಯೋತ್ಪಾದಕರೋ' ಎಂದು ಸಂಸದೆ ಸುಮಲತಾ ಬುಧವಾರ ಪ್ರಶ್ನಿಸಿದರು.

ಶ್ರೀರಂಗಪಟ್ಟಣ, ಪಾಂಡವಪುರ ತಾಲ್ಲೂಕಿನ ವಿವಿಧ ಕಲ್ಲು ಗಣಿ ಚಟುವಟಿಕೆ ಪ್ರದೇಶಗಳಿಗೆ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮ್ಮ ಬಳಿ ಸಿಡಿ ಬಾಂಬ್ ಇದೆ, ಮಿಸೈಲ್ ಇದೆ ಎಂದೆಲ್ಲಾ ಬೆದರಿಕೆ ಹಾಕುತ್ತಿದ್ದಾರೆ. ಇವು ಜನಪ್ರತಿನಿಧಿಗಳಾಡುವ ಮಾತುಗಳಾ? ಮುಖ್ಯಮಂತ್ರಿ ಮಗ, ಜೆಡಿಎಸ್‌ನ 8 ಶಾಸಕರ ವಿರುದ್ಧ ಹೋರಾಡಿ ಗೆದ್ದಿದ್ದೇನೆ. ಸೋತರೂ ಅವರಿಗೆ ಬುದ್ಧಿ ಬಂದಿಲ್ಲ, ನಾನು ಬೆದರುವುದಿಲ್ಲ' ಎಂದರು.

'ಕಲ್ಲು ಗಣಿ ಅಕ್ರಮದ ಬಗ್ಗೆ ಮಾತನಾಡಿದರೆ ಯಾಕೆ ಭಯ? ಅಂಬರೀಷ್ ಅವರ ಮುಂದೆ ಕೈಕಟ್ಟಿಕೊಂಡು ನಿಂತಿದ್ದವರಿಂದ ಪಾಠ ಕಲಿಯಬೇಕಾಗಿಲ್ಲ. ಸಂಸದೆಯಾಗಿ ಗಣಿ ಪ್ರದೇಶಕ್ಕೂ ಹೋಗುತ್ತೇನೆ, ಕೆಆರ್‌ಎಸ್‌ಗೂ ಹೋಗುತ್ತೇನೆ, ನಿಮಗ್ಯಾಕೆ ಭಯ' ಎಂದು ಪ್ರಶ್ನಿಸಿದರು.

'ಮಾಜಿ ಮುಖ್ಯಮಂತ್ರಿಯಾಗಿ ಸಂಸದೆ ಬಗ್ಗೆ ಆಡುವ ಮಾತು ಸಂಸ್ಕಾರ ತೋರಿಸುತ್ತದೆ. ಅದರಿಂದಲೇ ಲೋಕಸಭೆ ಚುನಾವಣೆಯಲ್ಲಿ ಸೋತಿದ್ದೀರಿ. ಈಗ ಚನ್ನಪಟ್ಟಣ ಶಾಸಕರಷ್ಟೇ, ನಾನು ಮಂಡ್ಯದ ಸಂಸದೆ. ನನ್ನ ಕೆಲಸಗಳನ್ನು ತಡೆಯಲು ಬರಬೇಡಿ, ಸಿನಿಮಾದವರ ಬಗ್ಗೆ ಕೆಟ್ಟದಾಗಿ ಮಾತನಾಡಿದರೆ ಸುಮ್ಮನಿರುವುದಿಲ್ಲ' ಎಂದರು.

'ಡಿ.ಕೆ.ಶಿವಕುಮಾರ್ ಅವರು ಜಲಸಂಪನ್ಮೂಲ ಸಚಿವರಾಗಿದ್ದಾಗ ₹ 76 ಕೋಟಿ ವೆಚ್ಚದಲ್ಲಿ ಜಲಾಶಯ ದುರಸ್ತಿಯಾಗಿದೆ. ಜಲಾಶಯ ಬಿರುಕು ಬಿಟ್ಟಿದ್ದಕ್ಕೇ ಅಷ್ಟೊಂದು ಹಣ ಖರ್ಚಾಗಿರುವ ಬಗ್ಗೆ ತನಿಖೆ ನಡೆಯಲಿ' ಎಂದರು.



ಶ್ರೀರಂಗಪಟ್ಟಣ ತಾಲ್ಲೂಕು ಚನ್ನನಕೆರೆ ಗ್ರಾಮದ ಬಳಿಯ ಕಲ್ಲು ಗಣಿ ಪ್ರದೇಶಕ್ಕೆ ಸಂಸದೆ ಸುಮಲತಾ ಬುಧವಾರ ಭೇಟಿ ನೀಡಿದರು

### ಸುಮಲತಾ ಬಂಧನಕ್ಕೆ ಒತ್ತಾಯ

'ಕೆಆರ್‌ಎಸ್ ಜಲಾಶಯ ಬಿರುಕು ಬಿಟ್ಟಿದೆ ಎಂದು ಹೇಳಿ ರೈತರಲ್ಲಿ ಆತಂಕ ಮೂಡಿಸುತ್ತಿರುವ ಸಂಸದೆ ಸುಮಲತಾ ಅವರನ್ನು ಬಂಧಿಸಬೇಕು' ಎಂದು ಒತ್ತಾಯಿಸಿ ಜೆಡಿಎಸ್ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

'ಕನ್ನಂಬಾಡಿ ಈ ದೇಶದ ಆಸ್ತಿ. ಮಾನಸಿಕ ಅಸ್ವಸ್ಥರಾಗಿರುವ ಸಂಸದರು ಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಕೆಆರ್‌ಎಸ್ ಜಲಾಶಯ ನಂಬಿ ರೈತರು ಜೀವನ ನಡೆಸುತ್ತಿದ್ದಾರೆ. ರಾಜ್ಯ ಸರ್ಕಾರ ಕೂಡಲೇ ಅವರನ್ನು ಬಂಧಿಸಬೇಕು' ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

## ₹64 ಲಕ್ಷ ದಂಡ ಸಹಿತ ತೆರಿಗೆ ವಸೂಲಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತೆರಿಗೆ ವಂಚಿಸಲು ಕೋಟ್ಯಂತರ ಮೌಲ್ಯದ ಚಿನ್ನಾಭರಣವನ್ನು ಕೊರಿಯರ್ ಮೂಲಕ ಅಕ್ರಮವಾಗಿ ಸಾಗಾಟ ಮಾಡಿದ್ದ ಎಸ್‌.ಎಸ್‌.ಆಭರಣ ಮಳಿಗೆ ಸಂಸ್ಥೆಯಿಂದ ದಂಡ ಸಹಿತ ₹64,27,994 ಹಣವನ್ನು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ವಸೂಲಿ ಮಾಡಿದ್ದಾರೆ.

ಕಳೆದ ನವೆಂಬರ್‌ನಲ್ಲಿ ಮುಂಬೈನಿಂದ ಅಕ್ರಮವಾಗಿ ಬೆಂಗಳೂರಿಗೆ ಕೊರಿಯರ್ ಮೂಲಕ ಚಿನ್ನಾಭರಣ ಸಾಗಿಸುತ್ತಿದ್ದ ಆರೋಪಿಗಳು ಕೆ.ಆರ್.ಮಾರುಕಟ್ಟೆ ಪೊಲೀಸರಿಗೆ ತಪಾಸಣೆ ವೇಳೆ ಸಿಕ್ಕಿಬಿದ್ದಿದ್ದರು.

ಆಗ ಸುಮಾರು ₹3 ಕೋಟಿ ಬೆಲೆಬಾಳುವ ಚಿನ್ನಾಭರಣಗಳು ಪತ್ತೆಯಾಗಿದ್ದವು. ಈ ಸಂಬಂಧ ಆಭರಣ ಮಳಿಗೆ ಮಾಲೀಕರ ಮಹಿಂದರ್‌ಗೆ ನೋಟಿಸ್ ನೀಡಲಾಗಿತ್ತು.

ತನಿಖೆ ಮುಂದುವರಿಸಿದ್ದ ಪೊಲೀಸರು, ತೆರಿಗೆ ವಂಚಿಸುವ ಸಲುವಾಗಿ ಜುವೆಲ್ಲರ್ಸ್‌ನ ಮಾಲೀಕ ಭಾರಿ ಪ್ರಮಾಣದ ಚಿನ್ನಾಭರಣವನ್ನು ಕೊರಿಯರ್ ಮೂಲಕ ಸಾಗಾಟ ಮಾಡುವ ಉಪಾಯ ಮಾಡಿದ್ದನ್ನು ಪತ್ತೆ ಹಚ್ಚಿದ್ದರು. 'ಈ ಬಗ್ಗೆ ಪೊಲೀಸರು ತನಿಖೆ ನಡೆಸಿ, ವಾಣಿಜ್ಯ ತೆರಿಗೆ ಇಲಾಖೆಗೆ ಪತ್ರ ಬರೆದಿದ್ದರು. ಮಾಲೀಕನಿಂದ ತೆರಿಗೆ ಹಾಗೂ ದಂಡ ಸೇರಿದಂತೆ ₹64 ಲಕ್ಷ ವಸೂಲಿ ಮಾಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಸಚಿವ ಸೋಮಶೇಖರ್ ಹೆಸರಲ್ಲಿ ವಂಚನೆ: ದೂರು

**ಬೆಂಗಳೂರು:** ಸಹಕಾರ ಸಚಿವ ಎಸ್. ಟಿ.ಸೋಮಶೇಖರ್ ಅವರ ಹೆಸರಿನಲ್ಲಿ ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ತೆರೆದು, ಹಣಕ್ಕಾಗಿ ಬೇಡಿಕೆ ಇಟ್ಟಿರುವ ಸಂಬಂಧ ಸೈಬರ್ ಕ್ರೈಂ ಠಾಣೆಯಲ್ಲಿ ದೂರು ದಾಖಲಾಗಿದೆ.

ಈ ಬಗ್ಗೆ ಎಸ್‌.ಟಿ.ಸೋಮಶೇಖರ್ ಆಪ್ತ ಸಹಾಯಕ ಚೇತನ್ ಎಂಬುವರು ಕೇಂದ್ರ ಸೆನ್ ಠಾಣೆಗೆ ದೂರು ನೀಡಿದ್ದಾರೆ.

'ಫೇಸ್‌ಬುಕ್‌ನಲ್ಲಿ ಎಸ್. ಟಿ.ಸೋಮಶೇಖರ್ ಹೆಸರಿನಲ್ಲಿ ನಕಲಿ ಖಾತೆ ತೆರೆದಿದ್ದ, ಆರೋಪಿಗಳು ಪಕ್ಷ ಹಾಗೂ ಪಕ್ಷದ ನಾಯಕರ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದಾರೆ'. 'ಮೊಬೈಲ್ ಸಂಖ್ಯೆಯೊಂದನ್ನು ನೀಡಿ ಫೋನ್ ಪೇ ಮೂಲಕ ಹಣ ವರ್ಗಾಯಿಸುವಂತೆ ಬೇಡಿಕೆ ಇಟ್ಟಿದ್ದಾರೆ. ಸಚಿವರ ಹೆಸರಿಗೆ ಕಳಂಕ ಉಂಟು ಮಾಡುತ್ತಿರುವ ಆರೋಪಿಗಳ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕು' ಎಂದು ಚೇತನ್ ದೂರಿನಲ್ಲಿ ಮನವಿ ಮಾಡಿದ್ದಾರೆ.

### 'ಬಾಡಿಗೆದಾರರ ಮಾಹಿತಿ ಸಂಗ್ರಹಕ್ಕೆ ತಂತ್ರಾಂಶ'

**ಬೆಂಗಳೂರು:** 'ಹೊರ ರಾಜ್ಯ ಹಾಗೂ ವಿದೇಶಗಳಿಂದ ಬಂದು ನಗರದಲ್ಲಿ ಬಾಡಿಗೆಗೆ ಮನೆ ಪಡೆಯುವವರ ಮಾಹಿತಿ ಸಂಗ್ರಹಿಸಲು ಆನ್‌ಲೈನ್ ತಂತ್ರಾಂಶವನ್ನು ಪೊಲೀಸ್ ಇಲಾಖೆ ಅಭಿವೃದ್ಧಿಪಡಿಸಲಿದೆ. ಇದರಿಂದ ಅನ್ಯ ಕಡೆಗಳಿಂದ ನಗರಕ್ಕೆ ಬಂದು ನೆಲೆಸಿರುವವರಿಂದ ನಡೆಯುತ್ತಿರುವ ಅಪರಾಧಗಳನ್ನು ನಿಯಂತ್ರಿಸಲು ಸಾಧ್ಯ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಬುಧವಾರ ತಿಳಿಸಿದರು.

ಅಪರಾಧಗಳಲ್ಲಿ ಭಾಗಿಯಾಗುವವರ ಮೇಲೆ ನಿಗಾ ಇಡಬಹುದು ಎಂದರು.

## ಶರಣ ಸಾಹಿತ್ಯ ಪರಿಷತ್ತಿಗೆ ನೂತನ ಕಾರ್ಯಸಮಿತಿ ರಚನೆ

**ಬೆಂಗಳೂರು:** ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿಗೆ ನೂತನ ಕಾರ್ಯಸಮಿತಿ ರಚನೆಯಾಗಿದ್ದು, ಮತ್ತೊಂದು ಅವಧಿಗೆ ಗೊ.ರು. ಚನ್ನಬಸಪ್ಪ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ.

ಪರಿಷತ್ತಿಗೆ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಗದುಗಿನ ತೋಂಟದ ಸಿದ್ಧರಾಮ ಸ್ವಾಮೀಜಿ ಗೌರವಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಿರಿಯ ಉಪಾಧ್ಯಕ್ಷರಾಗಿ ಅಪ್ಪಾರಾವ್ ಅಕ್ಕೋಣೆ, ಉಪಾಧ್ಯಕ್ಷರಾಗಿ ಕೊಂಡಜ್ಜಿ ಬ. ಷಣ್ಮುಖಪ್ಪ, ಸಿಂ.ರಾ. ಹೊನ್ನಲಿಂಗಯ್ಯ, ಕೋಶಾಧ್ಯಕ್ಷರಾಗಿ ಎಸ್‌.ಎಂ. ಹಂಪಯ್ಯ, ಪ್ರಧಾನ ಕಾರ್ಯದರ್ಶಿಯಾಗಿ ಎಸ್‌.ಬಿ. ಅಂಗಡಿ, ಕಾರ್ಯದರ್ಶಿಯಾಗಿ ಶ್ರೀಶೈಲ ಪಟ್ಟಣಶೆಟ್ಟಿ ಮತ್ತು ದಯಾನಂದ ಪಾಟೀಲ ನೇಮಕರಾಗಿದ್ದಾರೆ. ಕದಳಿ ಮಹಿಳಾ ವೇದಿಕೆ ಮತ್ತು ಯುವಸಂಗಮದ ಪ್ರತಿನಿಧಿಗಳ ಜತೆಗೆ ಪರಿಷತ್ತಿನ ಗೌರವಾಧ್ಯಕ್ಷರು ಮತ್ತು ಅಧ್ಯಕ್ಷರು ನಾಮಕರಣ ಮಾಡುವ ನಾಲ್ಕು ಜನ ಸದಸ್ಯರಾಗಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಸಿದ್ಧಲಿಂಗಯ್ಯ ವೃತ್ತ

## ಮರೆಯಲ್ಲಿ ಸೂಚನಾ ಫಲಕ: ಸವಾರರಿಗೆ ದಂಡದ ಬರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಕಸ್ತೂರಬಾ ರಸ್ತೆ ಮತ್ತು ವಿಠಲ ಮಲ್ಯ ರಸ್ತೆ ಮಧ್ಯದ ಸಿದ್ದಲಿಂಗಯ್ಯ ವೃತ್ತದ ಬಳಿ ಮರೆಯಲ್ಲಿ ಅಳವಡಿಸಿರುವ ಸೂಚನಾ ಫಲಕವೊಂದರಿಂದಾಗಿ ನಿತ್ಯವೂ ಹಲವಾರು ಮಂದಿ ವಾಹನ ಸವಾರರು ದಂಡ ಪಾವತಿಸುವಂತಾಗಿದೆ. ಫಲಕ ಕಣ್ಣಿಗೆ ಕಾಣಿಸದೇ ಮುಂದಕ್ಕೆ ಸಾಗಿದ್ದಕ್ಕೆ ದಂಡ ತೆತ್ತು ಹೋಗಬೇಕಾಗಿದೆ.

ಕೇಂದ್ರ ವಾಣಿಜ್ಯ ಜಿಲ್ಲೆಯ ವ್ಯಾಪ್ತಿಗೆ ಸೇರುವ ಈ ಪ್ರದೇಶ, ದಿನವಿಡೀ ಸಂಚಾರ ದಟ್ಟಣೆ ಇರುವ ಪ್ರದೇಶ. ಇಡೀ ದಿನ ಹತ್ತಾರು ಸಾವಿರ ವಾಹನಗಳು ಈ ಮಾರ್ಗದಲ್ಲಿ ಸಂಚರಿಸುತ್ತವೆ. ವಿಶ್ವೇಶ್ವರಯ್ಯ ಮ್ಯೂಸಿಯಂ ಕಡೆಯಿಂದ ಬರುವಾಗ ಜೆ.ಡಬ್ಲ್ಯು ಮ್ಯಾರಿಯಟ್ ಹೋಟೆಲ್ ಬಳಿ ವಿಠಲ ಮಲ್ಯ ರಸ್ತೆಯ ಕಡೆಗೆ 'ಮುಕ್ತ ಎಡ ತಿರುವು ಇಲ್ಲ' (ನೋ ಫ್ರೀ ಲೆಫ್ಟ್) ಎಂಬ ಫಲಕ ಅಳವಡಿಸಲಾಗಿದೆ. ಆದರೆ, ಈ ಸೂಚನಾ ಫಲಕ ಕಣ್ಣಿಗೆ ಬೀಳುವುದೇ ಕಷ್ಟ ಎಂಬಂತೆ ಮರೆಯಲ್ಲಿದೆ.

ಆ ಮಾರ್ಗವಾಗಿ ಬರುವ ವಾಹನ ಸವಾರರು, ಮುಕ್ತ ಎಡ ತಿರುವು ಇದೆ ಎಂದು ಭಾವಿಸಿ ಮುಂದಕ್ಕೆ ಸಾಗುತ್ತಿದ್ದಾರೆ. 'ಸಿಗ್ನಲ್'ನಿಂದ ಕೆಲವೇ ದೂರದಲ್ಲಿ ನಿಂತುಕೊಳ್ಳುವ ಸಂಚಾರ ವಿಭಾಗದ ಪೊಲೀಸರು, ವಾಹನ ಸವಾರರನ್ನು ತಡೆದು 'ಸೂಚನೆ ಉಲ್ಲಂಘಿಸಿದ' ಆರೋಪದ ಮೇಲೆ ದಂಡ ವಸೂಲಿ ಮಾಡುತ್ತಿದ್ದಾರೆ.

'ಸಂಜೆ 4 ಗಂಟೆಯಿಂದ ರಾತ್ರಿ 7 ಗಂಟೆಯವರೆಗೆ ಈ ಸ್ಥಳದಲ್ಲಿ 'ಮುಕ್ತ ಎಡ ತಿರುವು ಇಲ್ಲ' ಎಂಬ ಸೂಚನೆ ಉಲ್ಲಂಘಿಸಿದ ಆರೋಪದ ಮೇಲೆ 30ರಿಂದ 40 ಮಂದಿಗೆ ಸಂಚಾರ ಪೊಲೀಸರು ದಂಡ ವಿಧಿಸುತ್ತಿದ್ದಾರೆ. ಹಲವು ದಿನಗಳಿಂದ ಈ ಪರಿಸ್ಥಿತಿ ಇದೆ' ಎಂದು ಇದೇ ಮಾರ್ಗದಲ್ಲಿ ವಹಿವಾಟು ನಡೆಸುವ ಉದ್ಯಮಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಸೂಚನಾ ಫಲಕವನ್ನು ರಸ್ತೆಯ ಮಧ್ಯ ಭಾಗದಲ್ಲಿ ಅಳವಡಿಸಲಾಗಿದೆ. ಎಂ.ಜಿ. ರಸ್ತೆಯ ಕಡೆಯಿಂದ ಬರುವವರಿಗೆ ಸೂಚನಾ ಫಲಕ ಕಾಣಿಸುವುದೇ ಇಲ್ಲ. ಕಂಡರೂ, ಇದು ಮುಖ್ಯ ರಸ್ತೆ ಬಳಕೆದಾರರಿಗೆ ಇರುವ ಫಲಕ ಎಂದೇ ಭಾವಿಸಿಕೊಳ್ಳುವಂತಿದೆ. ಯಾವುದೇ ಅಡತಡೆ ಇಲ್ಲದ ಮತ್ತು ವಿಸ್ತಾರವಾದ ರಸ್ತೆ ಇರುವುದರಿಂದ ಮುಕ್ತ ಎಡ ತಿರುವು ಇದೆ ಎಂದೇ ಭಾವಿಸಿಕೊಂಡು ಮುಂದಕ್ಕೆ ಸಾಗುತ್ತಾರೆ. ಸಂಚಾರ ವಿಭಾಗದ ಪೊಲೀಸರು ಅಂತಹವರನ್ನು ಹಿಡಿದು, ದಂಡ ವಿಧಿಸುತ್ತಿದ್ದಾರೆ' ಎಂದು ಅವರು ವಿವರಿಸಿದರು.

'ಎರಡು ವರ್ಷಗಳ ಹಿಂದೆಯೂ ಇದೇ ರೀತಿಯ ಸಮಸ್ಯೆ ಸೃಷ್ಟಿಯಾಗಿತ್ತು. ಸ್ಥಳೀಯರು ಧ್ವನಿ ಎತ್ತಿದ ಬಳಿಕ ಸೂಚನಾ ಫಲಕವನ್ನು ಸರಿಪಡಿಸಲಾಗಿತ್ತು. ಕೆಲವು ತಿಂಗಳ ಹಿಂದೆ ಹಳೆಯ ಸೂಚನಾ ಫಲಕ ತೆರವು ಮಾಡಿ, ರಸ್ತೆಯ ಮಧ್ಯದಲ್ಲಿ ಹೊಸ ಫಲಕ ಅಳವಡಿಸಲಾಗಿದೆ' ಎಂದು ವಿಠಲ ಮಲ್ಯ ರಸ್ತೆಯ ವಿವಿಧ ವಾಣಿಜ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಉದ್ಯೋಗಿಗಳು ದೂರುತ್ತಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಪೂರ್ವ ಸಂಚಾರ ವಿಭಾಗದ ಡಿಸಿಪಿ ಕೆ.ಎಂ. ಶಾಂತರಾಜು, 'ಸೂಚನಾ ಫಲಕ ಅಳವಡಿಸುವ ಕೆಲಸವನ್ನು ಎಂಜಿನಿಯರ್‌ಗಳು ಮಾಡುತ್ತಾರೆ. ಅದರಲ್ಲಿ ಪೊಲೀಸರ ಪಾತ್ರ ಏನೂ ಇರುವುದಿಲ್ಲ. ಸ್ಥಳ ಪರಿಶೀಲಿಸಿ, ಸಮಸ್ಯೆ ಪರಿಹರಿಸಲಾಗುವುದು. ವಾಹನ ಸವಾರರ ಕಣ್ಣಿಗೆ ಗೋಚರಿಸುವಂತೆ ಸೂಚನಾ ಫಲಕ ಅಳವಡಿಸಲಾಗುವುದು' ಎಂದರು.



ಕಸ್ತೂರಬಾ ರಸ್ತೆ ಮತ್ತು ವಿಠಲ ಮಲ್ಯ ರಸ್ತೆ ನಡುವೆ ಇರುವ ಸಿದ್ಧಲಿಂಗಯ್ಯ ವೃತ್ತ –ಪ್ರಜಾವಾಣಿ ಚಿತ್ರ

## ಕಥಾಸಂಕಲನ, ಕಾದಂಬರಿ ಆಹ್ವಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್ 'ಮಾಸ್ತಿ ಕಥಾ ಪುರಸ್ಕಾರ' ಹಾಗೂ 'ಮಾಸ್ತಿ ಕಾದಂಬರಿ ಪುರಸ್ಕಾರ'ಕ್ಕೆ ಕಥಾಸಂಕಲನ ಹಾಗೂ ಕಾದಂಬರಿಗಳನ್ನು ಆಹ್ವಾನಿಸಿದೆ.

ಮಾಸ್ತಿ ಅವರ 130ನೇ ವರ್ಷದ ಜನ್ಮದಿನದ ಸಂಸ್ಮರಣೆ ಪ್ರಯುಕ್ತ ಟ್ರಸ್ಟ್ ಈ ಸ್ಪರ್ಧೆಯನ್ನು ಹಮ್ಮಿಕೊಂಡಿದೆ. 2020ರ ಜ.1ರಿಂದ ಡಿ.31ರ ಅವಧಿಯಲ್ಲಿ ಪ್ರಕಟಗೊಂಡ ಕೃತಿಗಳನ್ನು ಮಾತ್ರ ಸ್ಪರ್ಧೆಗೆ ಪರಿಗಣಿಸಲಾಗುತ್ತದೆ. ಪ್ರಶಸ್ತಿ ಪಡೆದ ಕಥಾ ಸಂಕಲನ ಹಾಗೂ ಕಾದಂಬರಿ ಪುರಸ್ಕೃತ ಲೇಖಕರಿಗೆ ತಲಾ ₹ 25 ಸಾವಿರ ನಗದು ಮತ್ತು ಪ್ರಕಾಶಕರಿಗೆ ₹ 10 ಸಾವಿರ ನಗದು, ಫಲಕ ನೀಡಲಾಗುತ್ತದೆ.

ಆಸಕ್ತರು ಕೃತಿಯ ನಾಲ್ಕು ಪ್ರತಿಗಳನ್ನು ಆಗಸ್ಟ್ 16ರೊಳಗೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್, ನಂ.21, ಎಲ್ಲಪ್ಪ ಗಾರ್ಡನ್, 10ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು–560 003 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ಟ್ರಸ್ಟ್ ಅಧ್ಯಕ್ಷ ಮಾವಿನಕೆರೆ ರಂಗನಾಥ್ ತಿಳಿಸಿದ್ದಾರೆ.

**ಸಂಪರ್ಕ:** 080–23363347

## ಹೊಸಪೇಟೆ: ಹಳ್ಳದಲ್ಲಿ ಕೊಚ್ಚಿ ಹೋದ ದಂಪತಿ

**ಹೊಸಪೇಟೆ (ವಿಜಯನಗರ):** ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ಸುರಿದ ಭಾರಿ ಮಳೆಗೆ ಹೂವಿನಹಡಗಲಿ ತಾಲ್ಲೂಕಿನ ಪಶ್ಚಿಮ ಕಾಲ್ವಿ ಗ್ರಾಮದ ಬಳಿ ರಭಸವಾಗಿ ಹರಿಯುತ್ತಿದ್ದ ಹಳ್ಳದಲ್ಲಿ ಮೋಟಾರ್ ಬೈಕ್ ಸಮೇತ ದಂಪತಿ ಕೊಚ್ಚಿ ಹೋಗಿದ್ದಾರೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮುತ್ಕೂರು ಗ್ರಾಮದ ಮಲ್ಲಿಕಾರ್ಜುನ (55), ಅವರ ಪತ್ನಿ ಸುಮಂಗಲಮ್ಮ (48) ಮೃತರು.

ಮುಂಡರಗಿ ತಾಲ್ಲೂಕಿನ ತಳಕಲ್ಲು ಗ್ರಾಮದಲ್ಲಿ ಸಂಬಂಧಿಕರನ್ನು ಭೇಟಿಯಾಗಿ ವಾಪಸ್ ಬರುವಾಗ ಈ ಅವಘಡ ಸಂಭವಿಸಿದೆ. ಬುಧವಾರ ಇಬ್ಬರ ಶವ ಹಳ್ಳದಲ್ಲಿ ಪತ್ತೆಯಾಗಿದೆ.

**ಗೋಡೆ ಕುಸಿದು ಮಗು ಸಾವು (ಚಿತ್ರದುರ್ಗ ವರದಿ):** ಮಂಗಳವಾರ ರಾತ್ರಿ ಸುರಿದ ಬಿರುಸಿನ ಮಳೆಗೆ ಹೊಸದುರ್ಗ ತಾಲ್ಲೂಕಿನ ಕೆಲ್ಲೋಡು ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಓಂಕಾರಪ್ಪ ಹಾಗೂ ಸಾವಿತ್ರಮ್ಮ ಅವರ ಮಗ ಲೋಹಿತ್ (3) ಮೃತಪಟ್ಟಿದ್ದಾನೆ.


ಮಲ್ಲಿಕಾರ್ಜುನ ಹಾಗೂ ಅವರ ಪತ್ನಿ ಸುಮಂಗಲಮ್ಮ

## ಮುದ್ದಣ ಕಾವ್ಯ ಪ್ರಶಸ್ತಿ: ಹಸ್ತಪ್ರತಿ ಆಹ್ವಾನ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಕಾಂತಾವರ ಕನ್ನಡ ಸಂಘವು ಕೊಡಮಾಡುವ 2021ನೇ ಸಾಲಿನ ಮುದ್ದಣ ಕಾವ್ಯ ಪ್ರಶಸ್ತಿಗಾಗಿ, ಸಿದ್ಧವಾಗಿರುವ ಕವನ ಸಂಗ್ರಹದ ಹಸ್ತಪ್ರತಿಗಳನ್ನು ಆಹ್ವಾನಿಸಲಾಗಿದೆ.

ಪ್ರಶಸ್ತಿಯು ₹10,000 ನಗದು ಹಾಗೂ ಪ್ರಮಾಣ ಪತ್ರವನ್ನು ಒಳಗೊಂಡಿದೆ.

ಆಸಕ್ತರು ಹೆಚ್ಚಿನ ಮಾಹಿತಿಯನ್ನು ಕನ್ನಡ ಸಂಘದ ಇ–ಮೇಲ್ kannadasanghakanthavara@gmail.com ಮೂಲಕ ಪಡೆಯಬಹುದು.

ವಿಶೇಷ ಮಾಹಿತಿ ಬೇಕಾಗಿದ್ದಲ್ಲಿ ಮೊಬೈಲ್ ಸಂಖ್ಯೆ 9900701666 (ಅಧ್ಯಕ್ಷ) ಅಥವಾ 9008978366 (ಕಾರ್ಯದರ್ಶಿ) ಅವರನ್ನು ಸಂಪರ್ಕಿಸಬಹುದು ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಹಸ್ತಪ್ರತಿಗಳನ್ನು ಸ್ವೀಕರಿಸಲು ಸೆ.15 ಕೊನೆಯ ದಿನಾಂಕ. ನವೆಂಬರ್ 1ರಂದು ಪ್ರಶಸ್ತಿಗೆ ಆಯ್ಕೆಯಾದವರ ಹೆಸರು ಘೋಷಣೆಯಾಗಲಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

# ಜಯಶ್ರೀ ದೇಶಪಾಂಡೆ ಸೇರಿ ಎಂಟು ಮಂದಿಗೆ 'ಪುಸ್ತಕ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲೇಖಿಕಾ ಸಾಹಿತ್ಯ ವೇದಿಕೆಯು 2020–21ನೇ ಸಾಲಿನ 'ಪುಸ್ತಕ ಪ್ರಶಸ್ತಿ'ಯನ್ನು ಬುಧವಾರ ಪ್ರಕಟಿಸಿದ್ದು, ಬೆಂಗಳೂರಿನ ಜಯಶ್ರೀ ದೇಶಪಾಂಡೆ ಸೇರಿದಂತೆ ಎಂಟು ಮಂದಿ ಆಯ್ಕೆಯಾಗಿದ್ದಾರೆ.

ಕಥೆ ವಿಭಾಗದಲ್ಲಿ ಜಯಶ್ರೀ ದೇಶಪಾಂಡೆ ಅವರ 'ಉತ್ತರಾರ್ಧ', ಕಾವ್ಯ ವಿಭಾಗದಲ್ಲಿ ವಿಭಾ ಪುರೋಹಿತ್ ಅವರ 'ಬಾಲ್ಕನಿ ಕಂಡ ಕವಿತೆಗಳು', ಕಾದಂಬರಿ ವಿಭಾಗದಲ್ಲಿ ದಾವಣಗೆರೆಯ ಪಾಪು ಗುರು ಅವರ 'ಸಂಜೆ', ಪ್ರಬಂಧ ವಿಭಾಗದಲ್ಲಿ ಮಡಿಕೇರಿಯ ಸಹನಾ ಕಾಂತಬೈಲು ಅವರ 'ಆನೆ ಸಾಕಲು ಹೊರಟವಳು', ಪ್ರವಾಸ ಪ್ರಬಂಧ ವಿಭಾಗದಲ್ಲಿ ಬೆಂಗಳೂರಿನ ಎಸ್.ಪಿ. ವಿಜಯಲಕ್ಷ್ಮಿ ಅವರ 'ಸಾಗರದಾಚೆಯ ನಾಡಿನಲ್ಲಿ' ಕೃತಿ ಆಯ್ಕೆಯಾಗಿದೆ.

ಸಂಶೋಧನೆ ವಿಭಾಗದಲ್ಲಿ ಕಲಬುರ್ಗಿಯ ವಿಜಯಲಕ್ಷ್ಮಿ ಸಜ್ಜನ್ ಅವರ 'ಕನ್ನಡ ರಾಮಾಯಣಗಳಲ್ಲಿ ರಾವಣ', ವಿಭಿನ್ನ ಕೃತಿ ವಿಭಾಗದಲ್ಲಿ ಬೆಂಗಳೂರಿನ ನಾಗರತ್ನ ಮೂರ್ತಿ ಅವರ 'ಕೀಲಿಕೈಯನು ತಾರ ಕೀಲಿ ಕೈಯ', ಹಾಗೂ ವಿಶೇಷ ಕೃತಿ ವಿಭಾಗದಲ್ಲಿ ಎಂ.ಎಸ್. ವಿದ್ಯಾ ಅವರ 'ಕನ್ನಡ ರಂಗಭೂಮಿಯಲ್ಲಿ ಹಾಸ್ಯ' ಪುಸ್ತಕವು ಪ್ರಶಸ್ತಿಗೆ ಭಾಜನವಾಗಿದೆ.

ಬಂಟ್ವಾಳದ ರೇಷ್ಮಾ ಭಟ್ ಅವರ 'ಕಥಾ ವ್ಯವಕಲನ' ಹಾಗೂ ಹಾಸನದ ಸುಮಾ ವೀಣಾ ಅವರ 'ಮನಸು ಕನ್ನಡಿ' ಕೃತಿಯು ಮೆಚ್ಚುಗೆ ಪಡೆದಿವೆ ಎಂದು ಪ್ರಕಟಣೆ ತಿಳಿಸಿದೆ. ಎಸ್.ಪಿ. ಪ್ರಭಾವತಿ ಹಾಗೂ ಶೈಲಜಾ ಸುರೇಶ್ ಅವರು ಪ್ರಶಸ್ತಿಗಳ ಆಯ್ಕೆದಾರರಾಗಿದ್ದರು.

## ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು |
|---|---|---|---|---|
| ಕೆಆರ್‌ಎಸ್* | 124.80 | 89.82 | 1,309 | 4,519 |
| ಹಾರಂಗಿ | 2,859 | 2,842.65 | 363 | 80 |
| ಕಬಿನಿ | 2,284 | 2,275.93 | 1,047 | 700 |
| ಹೇಮಾವತಿ | 2,922 | 2,896.10 | 1,046 | 1,000 |
| ಲಿಂಗನಮಕ್ಕಿ | 1,819 | 1,784.15 | 1,868 | - |
| ಸೂಪಾ (ಮೀ) | 564 | 538 | 1,722 | 6,038 |
| ಮಾಣಿ | 594.36 | 573.60 | 20 | - |
| ತುಂಗಭದ್ರಾ | 1,633 | 1,609.85 | 8,144 | 257 |
| ಮಲಪ್ರಭಾ | 2,079.5 | 2,063.05 | 715 | 194 |
| ಘಟಪ್ರಭಾ | 2,175 | 2,136.06 | 1,549 | 133 |
| ಭದ್ರಾ | 186 | 155.6 | 1,759 | 81 |
| ಆಲಮಟ್ಟಿ (ಮೀ) | 519.6 | 517.44 | 2,446 | 907 |
| ನಾರಾಯಣಪುರ (ಮೀ) | 492.25 | 490.63 | 200 | - |

* ನೆಲಮಟ್ಟದಿಂದ

## ನಿಧನ ವಾರ್ತೆ

### ಜಿ. ಚೆನ್ನಕೇಶವ




**ಬೆಂಗಳೂರು:** ರಂಗಭೂಮಿ ನಿರ್ದೇಶಕ, ನಟ ಹಾಗೂ ಚಿತ್ರ ಕಲಾವಿದ ಜಿ. ಚೆನ್ನಕೇಶವ (49) ಅವರು ಬುಧವಾರ ನಿಧನರಾದರು.

ಅನಾರೋಗ್ಯ ಸಮಸ್ಯೆಯಿಂದಾಗಿ ಕಳೆದ ಶುಕ್ರವಾರ ಅವರು ವಿಜಯನಗರದ ಖಾಸಗಿ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದರು. ಬಹು ಅಂಗಾಂಗ ವೈಫಲ್ಯ ಸಮಸ್ಯೆಯಿಂದಾಗಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ. ಪತ್ನಿ ಗಿರಿಜಾ ಅವರು ಕೂಡ ರಂಗ ಕಲಾವಿದರಾಗಿದ್ದಾರೆ.

ಇಲ್ಲಿನ ನಾಗರಬಾವಿಯಲ್ಲಿರುವ ಅವರ ತಾಯಿಯ ಮನೆಯಲ್ಲಿ (ನಮ್ಮೂರು ತಿಂಡಿ ಎದುರಗಡೆ) ಗುರುವಾರ ಬೆಳಿಗ್ಗೆ 10.30ಕ್ಕೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.


ಅವರು ಚಿತ್ರಕಲಾ ಪರಿಷತ್ತಿನಲ್ಲಿ ಚಿತ್ರಕಲೆ ಹಾಗೂ ನೀನಾಸಂನಲ್ಲಿ ರಂಗ ಶಿಕ್ಷಣವನ್ನು ಅಭ್ಯಾಸ ಮಾಡಿದ್ದರು.



# ಎಸ್‌ಡಿಎ ಪರೀಕ್ಷೆ ಸಾಮಾನ್ಯ ಜ್ಞಾನಕ್ಕೆ ಆದ್ಯತೆ

ಕೆ.ಎಚ್. ಮಂಜುನಾಥ್

ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ)ರ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ಇದರ ಸಿದ್ಧತೆ ಹೇಗಿರಬೇಕು ಎಂಬುದರ ವಿವರಗಳು ಇಲ್ಲಿವೆ...



ಕರ್ನಾಟಕ ಲೋಕ ಸೇವಾ ಆಯೋಗವು ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ)ರ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದ್ದು ಬರುವ ಸೆಪ್ಟೆಂಬರ್ 18 ಮತ್ತು 19ರಂದು ದಿನಾಂಕ ನಿಗದಿಪಡಿಸಿದೆ. ಕಡ್ಡಾಯ ಭಾಷಾ ಕನ್ನಡ ಪತ್ರಿಕೆ ಸೆ. 18ರಂದು ನಡೆದರೆ, ಸಾಮಾನ್ಯ ಜ್ಞಾನ ಮತ್ತು ಇಂಗ್ಲಿಷ್/ ಕನ್ನಡದ ಪರೀಕ್ಷೆಗಳು ಸೆ. 19ರಂದು ನಡೆಯಲಿವೆ. ಹಾಗಾದರೆ ಈ ಪರೀಕ್ಷೆ ಹೇಗಿರುತ್ತದೆ ಮತ್ತು ತಯಾರಿ ಹೇಗೆ ನಡೆಸಬೇಕೆಂಬುದನ್ನು ನೋಡೋಣ.

## ಪರೀಕ್ಷೆಯಲ್ಲಿ ಏನೇನು ಇರುತ್ತದೆ?

ಈ ಪರೀಕ್ಷೆಯಲ್ಲಿ ಮೂರು ಪ್ರಶ್ನೆ ಪತ್ರಿಕೆಗಳು ಇರುತ್ತವೆ. ಮೊದಲನೆಯದು ಕಡ್ಡಾಯ ಕನ್ನಡ. ಈ ಪತ್ರಿಕೆಯಲ್ಲಿ ಪಡೆದಿರುವ ಅಂಕಗಳನ್ನು ಅಂತಿಮ ರ‍್ಯಾಂಕಿಂಗ್ ಪಟ್ಟಿಯಲ್ಲಿ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಎರಡನೆಯದು ಸಾಮಾನ್ಯ ಕನ್ನಡವಾದರೆ, ಮೂರನೆಯದು ಸಾಮಾನ್ಯ ಜ್ಞಾನ. ಎರಡನೇ ಮತ್ತು ಮೂರನೇ ಪತ್ರಿಕೆಗಳು ಮಹತ್ವದ್ದಾಗಿವೆ. ಇವೆರಡರಲ್ಲಿ ಗಳಿಸಿದ ಅಂಕಗಳನ್ನು ಸ್ಪರ್ಧೆಗೆ ಪರಿಗಣಿಸುವುದರಿಂದ ಅತ್ಯುತ್ತಮ ತಯಾರಿ ಮಾಡಿಕೊಳ್ಳಬೇಕು.

ದ್ವಿತೀಯ ಪತ್ರಿಕೆಯಲ್ಲಿ ನಿಮ್ಮ ಕನ್ನಡ ಭಾಷಾ ಜ್ಞಾನದ ಸಮಗ್ರ ಪರೀಕ್ಷೆ ಮಾಡುತ್ತಾರೆ. ಇದು ಕೂಡಾ 100 ಅಂಕಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯ ಕನ್ನಡವು ಮಹತ್ವದ ಪತ್ರಿಕೆಯಾಗಿದ್ದು ನೀವು ಕನ್ನಡದಲ್ಲಿ ಎಷ್ಟು ಹೆಚ್ಚು ಅಂಕಗಳನ್ನು ಗಳಿಸುತ್ತೀರೋ ಅಷ್ಟೂ ಆಯ್ಕೆ ಸಾಧ್ಯತೆ ಹೆಚ್ಚು. ಏಕೆಂದರೆ ಸಾಮಾನ್ಯ ಜ್ಞಾನಕ್ಕೆ ಹೋಲಿಸಿದರೆ ಈ ಪತ್ರಿಕೆ ಸುಲಭವಾಗಿರುತ್ತದೆ, ಆದ್ದರಿಂದ ನೀವು ಸುಲಭವಾಗಿ ಹೆಚ್ಚು ಅಂಕ ಪಡೆಯಬಲ್ಲಿರಿ. (ಸಾಮಾನ್ಯಜ್ಞಾನವನ್ನು ನಿರ್ಲಕ್ಷಿಸಬೇಡಿ. ಎರಡೂ ಪತ್ರಿಕೆಗಳಲ್ಲಿ ನೀವು ಪಡೆದ ಅಂಕಗಳನ್ನು ಆಧರಿಸಿಯೇ ಅಂತಿಮ ರ‍್ಯಾಂಕ್ ನಿಶ್ಚಯವಾಗುತ್ತದೆ). ನೀವು ಒಂದು ವೇಳೆ ಪ್ರಯತ್ನಿಸಿದರೆ, ಸುಲಭವಾಗಿ 100 ಅಂಕಗಳಿಗೆ 90 ರಿಂದ 95ರ ತನಕ ಪಡೆಯಬಹುದು, ಆದರೆ ಇದೇ ಪ್ರಮಾಣದ ಅಂಕವನ್ನು ಸಾಮಾನ್ಯ ಅಧ್ಯಯನದಲ್ಲಿ ಗಳಿಸುವುದು ಕಷ್ಟ. ಹೀಗಾಗಿ ಕನ್ನಡವನ್ನು ಗಮನವಿಟ್ಟು ಓದಿ. ಈ ಪತ್ರಿಕೆಯಲ್ಲಿ ಕೇವಲ ವ್ಯಾಕರಣ ಮಾತ್ರ ಇರುವುದಿಲ್ಲ, ಅದರ ಜೊತೆಗೆ ಬೇರೆ ವಿಷಯ ಕೂಡ ಇರುತ್ತದೆ. ಹಳೆಯ ಪ್ರಶ್ನೆಪತ್ರಿಕೆಯನ್ನು ಗಮನಿಸಿದರೆ ಈ ಕೆಳಗಿನ ವಿಷಯಗಳಿಂದ ಪ್ರಶ್ನೆಗಳನ್ನು ಕೇಳಿರುವುದು ಗೊತ್ತಾಗುತ್ತದೆ. ಅವುಗಳೆಂದರೆ

1) ಕನ್ನಡ ಭಾಷೆ ಮತ್ತು ಸಾಹಿತ್ಯ, 2) ಪದಗಳ ಸುಧಾರಣೆ, 3) ಸಮಾನಾರ್ಥಕ ಪದಗಳು, 4) ವಿರುದ್ಧಾರ್ಥಕ ಪದಗಳು, 5) ನುಡಿಗಟ್ಟುಗಳ ಅರ್ಥವನ್ನು ಗ್ರಹಿಸುವುದು, 6) ತಪ್ಪಿರುವ ಭಾಗವನ್ನು ಸರಿಪಡಿಸಿ, 7) ಬಿಟ್ಟಸ್ಥಳ ತುಂಬಿ, 8) ಪ್ಯಾರಾ ಓದಿ: ಪ್ರಶ್ನೆಗೆ ಉತ್ತರಿಸಿ, 9) ಪದ ಬಳಸಿ ವಾಕ್ಯ ರಚಿಸಿ, 10) ವಾಕ್ಯಗಳನ್ನು ಬಳಸಿ: ಸಾಹಿತ್ಯ ಖಂಡ ರಚಿಸಿ, 11) ವ್ಯಾಕರಣ 12) ಭಿನ್ನ ಪದ ಗುರುತಿಸಿ.

ಸಾಮಾನ್ಯಜ್ಞಾನ ಪತ್ರಿಕೆಯು 100 ಅಂಕಗಳನ್ನು ಒಳಗೊಂಡಿರುತ್ತದೆ. ಈ ಪತ್ರಿಕೆಯಲ್ಲಿ ಭಾರತದ ಇತಿಹಾಸ, ಭೂಗೋಳ, ಭಾರತದ ಸಂವಿಧಾನ, ಭಾರತದ ಅರ್ಥಶಾಸ್ತ್ರ, ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಲ್ಲದೇ ಕರ್ನಾಟಕದ ಐತಿಹಾಸಿಕ ಅಂಶಗಳು, ನಮ್ಮ ರಾಜ್ಯದ ಆರ್ಥಿಕ ಬೆಳವಣಿಗೆಗಳ ಕುರಿತ ಪ್ರಶ್ನೆಗಳು, ರಾಜಕೀಯ ತಿರುವುಗಳನ್ನು ಸಂವಿಧಾನಾತ್ಮಕ ದೃಷ್ಟಿಯಲ್ಲಿ ನೋಡುವಂತೆ ವಿಷಯ ಜೋಡಿಸಿ ಪ್ರಶ್ನೆಗಳನ್ನು ಹೆಣೆಯುವುದನ್ನು ಕಾಣುತ್ತೇವೆ.

### ಸಲಹೆಗಳು

- ಪ್ರತಿ ದಿನ ಪರೀಕ್ಷೆ ಮುಗಿಯುವ ತನಕ ಕನಿಷ್ಠ 5-6 ಗಂಟೆಯನ್ನಾದರೂ ಓದಲು ಮೀಸಲಿಡಿ. ಅದರಲ್ಲಿ 1 ಗಂಟೆ ಬಹು ಆಯ್ಕೆ ಪ್ರಶ್ನೆಗಳನ್ನು ಬಿಡಿಸಲು ಮೀಸಲಿಡಿ.
- ಪ್ರತಿನಿತ್ಯವೂ ನೀವು ಹಿಂದೆ ಓದಿದ ವಿಷಯವನ್ನು ಪುನರಾವರ್ತನೆ ಮಾಡುತ್ತಾ ಅಧ್ಯಯನ ಮಾಡುವುದರಿಂದ ಹಿಂದೆ ಓದಿರುವುದನ್ನು ಮರೆತು ಹೋಗದಂತೆ ತಡೆಯಬಹುದು.
- ದಿನಪತ್ರಿಕೆಗಳನ್ನು ಓದುವಾಗ ನೀವು ಈಗಾಗಲೇ ಭಾರತದ ಸಂವಿಧಾನವನ್ನು ಓದಿರುವುದರ ಆಧಾರದ ಮೇಲೆ ಅದಕ್ಕೆ ಸಂಬಂಧಿಸಿದ ಲೇಖನ/ ವರದಿಗಳಿದ್ದರೆ ಗಮನ ಕೊಟ್ಟು ಓದಿ. ಭಾರತೀಯ ಅರ್ಥಶಾಸ್ತ್ರದ ಹಿನ್ನೆಲೆಯಲ್ಲಿರುವ ವರದಿಗಳನ್ನು ಓದಿ. ವಿಜ್ಞಾನದ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟವಾಗುವ ಎಲ್ಲಾ ವರದಿ ಹಾಗೂ ಲೇಖನಗಳನ್ನು ಮರೆಯದೇ ಓದಿ.
- ಇತಿಹಾಸವನ್ನು ಅಧ್ಯಯನ ಮಾಡುವಾಗ ಕರ್ನಾಟಕ ಹಾಗೂ ಭಾರತ ಇತಿಹಾಸ ಎರಡನ್ನೂ ಗಮನ ಕೊಟ್ಟು ಓದಿ. ಸ್ವಾತಂತ್ರ್ಯ ಹೋರಾಟ, ಸಾಂಸ್ಕೃತಿಕ ಭಾರತ ಮತ್ತು ಸಾಂಸ್ಕೃತಿಕ ಕರ್ನಾಟಕದ ಕುರಿತಾದ ಎಲ್ಲಾ ಅಂಶಗಳನ್ನು ಗಮನ ಕೊಟ್ಟು ಓದಿ.
- ರಾಷ್ಟ್ರೀಯ ಉದ್ಯಾನವನ, ನದಿಗಳು, ಪ್ರಶಸ್ತಿಗಳು, ಇತ್ತೀಚೆಗೆ ಪ್ರಕಟವಾದ ಪುಸ್ತಕಗಳು ಮತ್ತು ಅದರ ಲೇಖಕರು, ನೈಸರ್ಗಿಕ ವಿಕೋಪಗಳಾದ ಚಂಡಮಾರುತ, ಸುನಾಮಿ, ಪ್ರವಾಹ ಮೊದಲಾದವುಗಳಿಗೆ ಸಂಬಂಧಿಸಿದ ಮಾಹಿತಿ, ಕ್ರೀಡಾರಂಗದಲ್ಲಾದ ಇತ್ತೀಚಿನ ಸಾಧನೆ ಮತ್ತು ಸಾಧಕರ ಪರಿಚಯ, ಕಲಾವಿದರ ಸಾಧನೆ, ಇತ್ತೀಚೆಗೆ ಪ್ರಕಟವಾದ ಪ್ರಶಸ್ತಿಗಳು, ಅಂತರರಾಷ್ಟ್ರೀಯ/ ರಾಷ್ಟ್ರೀಯ/ ರಾಜ್ಯದಲ್ಲಿ ಸುದ್ದಿಯಲ್ಲಿರುವ ಸ್ಥಳಗಳು ಹಾಗೂ ಮಹನೀಯರ ಬಗ್ಗೆ ಮಾಹಿತಿ, ದೇಶಗಳು, ಅವುಗಳ ರಾಜಧಾನಿ ಮತ್ತು ಸುದ್ದಿಯಲ್ಲಿರುವ ಪ್ರಮುಖ ಸ್ಥಳಗಳ ಮಾಹಿತಿ.

(ಲೇಖಕ: ನಿರ್ದೇಶಕರು, ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು)

### ತಯಾರಿ ಹೀಗಿರಲಿ..

ಈಗ ಲಭ್ಯವಿರುವ ಎರಡು ತಿಂಗಳಲ್ಲಿ ಸಂಪೂರ್ಣ ಅಧ್ಯಯನ ಮಾಡಿಕೊಂಡು ಮುನ್ನಡೆಯಬೇಕಾಗಿದೆ. ಅದಕ್ಕಾಗಿ ಹಿಂದಿನ ಪ್ರಶ್ನೆಪತ್ರಿಕೆಯನ್ನು ತಿರುವಿ ಹಾಕಿ. ಸಾಮಾನ್ಯಜ್ಞಾನ ಮತ್ತು ಸಾಮಾನ್ಯ ಕನ್ನಡ ಪರೀಕ್ಷೆಗಳ ತಯಾರಿಗೆ ಒಂದೇ ರೀತಿಯ ಮಹತ್ವ ಕೊಟ್ಟು ಓದಿ.

ಅದಕ್ಕಾಗಿ 8, 9, 10ನೇ ತರಗತಿಯ ವಿಜ್ಞಾನ ಮತ್ತು ಸಮಾಜವಿಜ್ಞಾನದ ಪುಸ್ತಕಗಳನ್ನು ಆರಂಭದಲ್ಲಿ ಓದಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಬಜೆಟ್ ಮತ್ತು ಆರ್ಥಿಕ ಸಮೀಕ್ಷೆಗಳನ್ನು ಓದಿ. ಇಡೀ ಪುಸ್ತಕ ಓದುವ ಅವಶ್ಯಕತೆ ಇಲ್ಲ, ಆದರೆ ಸಮೀಕ್ಷೆಯ ಸಾರಾಂಶ ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಅವುಗಳನ್ನು ತಪ್ಪದೇ ಓದಿಕೊಳ್ಳಬೇಕು. ಇದಾದ ನಂತರ ಕರ್ನಾಟಕ ಸರ್ಕಾರದ ಗ್ಯಾಜೆಟಿಯರ್‌ನಲ್ಲಿ ಪ್ರಕಟಿಸಿರುವ 'ಕರ್ನಾಟಕದ ಕೈಪಿಡಿ'ಯ ಇತ್ತೀಚಿನ ಆವೃತ್ತಿಯಲ್ಲಿರುವ ಕರ್ನಾಟಕದ ಇತಿಹಾಸ ಮತ್ತು ಕರ್ನಾಟಕದ ಭೂಗೋಳದ ವಿಷಯವನ್ನು ಓದಿಕೊಳ್ಳಿ. ಜೊತೆಗೆ ಕರ್ನಾಟಕಕ್ಕೆ ಸಂಬಂಧಿಸಿದ ಹಲವು ಜನರಲ್ ನಾಲೆಜ್ ವಿಷಯಗಳು ಅಲ್ಲಿ ಲಭ್ಯವಿವೆ. ಅವುಗಳನ್ನು ನೋಡಿಕೊಳ್ಳಲು ಮರೆಯಬೇಡಿ. ಸಾಮಾನ್ಯ ಕನ್ನಡ ಪತ್ರಿಕೆಗೆ ಮೈಸೂರು ವಿಶ್ವವಿದ್ಯಾಲಯದ 'ಕನ್ನಡ ಕೈಪಿಡಿ', ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ಸಂಕ್ಷಿಪ್ತ ನಿಘಂಟು' ಪರಾಮರ್ಶಿಸಿ. ಎಸ್‌ಡಿಎ ಪರೀಕ್ಷೆಗೆಂದೇ ಯೂಟ್ಯೂಬ್ ಚಾನೆಲ್‌ನಲ್ಲಿ ವಿಶೇಷ ಪಾಠಗಳಿವೆ.

# ಚಿಮಣಿ ಬೆಳಕಲ್ಲಿ ಓದಿದವರೀಗ ಅಧಿಕಾರಿ

ಬಾಲಶೇಖರ ಬಂದಿ

**ಚಿಮಣಿ** ಬೆಳಕಿನಲ್ಲಿ ಓದಿದ ವ್ಯಕ್ತಿ ಈಗ 'ಡಿಒ' (ಡಿಸ್ಟ್ರಿಕ್ಟ್ ಆಫೀಸರ್) ಆಗಿ ನೇಮಕವಾಗಿದ್ದಾರೆ. ಶ್ರದ್ಧೆ, ಪರಿಶ್ರಮವಿದ್ದರೆ ಯಶಸ್ಸು ಸಿಗುತ್ತದೆ ಎನ್ನುವ ಇವರು, ಸಾಧನೆಗೆ ಬಡತನ ಅಡ್ಡಿಯಾಗುವುದಿಲ್ಲ ಎಂದು ನಿರೂಪಿಸಿದ್ದಾರೆ.

ಈ ಸಾಧಕರ ಹೆಸರು ಶಿವಾನಂದ ಪಟ್ಟಣಶೆಟ್ಟಿ. ಬೆಳಗಾವಿ ಜಿಲ್ಲೆ ಮೂಡಲಗಿ ಶೈಕ್ಷಣಿಕ ವಲಯದ ಅವರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಯಾಗಿ ಸರ್ಕಾರಿ ನೌಕರಿ ಪಡೆದಿದ್ದಾರೆ.

ಬಾಗಲಕೋಟೆಯ ಮುಧೋಳ ತಾಲ್ಲೂಕಿನ ಸೈದಾಪುರದಲ್ಲಿ ಗುಡಿಸಲಿನಲ್ಲಿದ್ದುಕೊಂಡು, ಚಿಮಣಿ ಬೆಳಕಲ್ಲಿ ಓದಿ 2009ರಲ್ಲಿ ತಾಲ್ಲೂಕಿನ ಖಾನಟ್ಟಿ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 94.98ರಷ್ಟು ಅಂಕ ಪಡೆದಿದ್ದರು. ಮೂಡಲಗಿ ಶೈಕ್ಷಣಿಕ ವಲಯಕ್ಕೆ ಪ್ರಥಮ ಸ್ಥಾನ ಗಳಿಸಿ ಗಮನಸೆಳೆದಿದ್ದರು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದ ಅವರನ್ನು ತಾಯಿ ಕೂಲಿ ಮಾಡಿ ಸಾಕುತ್ತಿದ್ದರು. ಕಿತ್ತು ತಿನ್ನುವ ಬಡತನ ಇದ್ದಿದ್ದರಿಂದಾಗಿ ಎಸ್ಸೆಸ್ಸೆಲ್ಸಿ ನಂತರದ ಶಿಕ್ಷಣ ಪಡೆಯುವುದೇ ಪ್ರಶ್ನೆಯಾಗಿತ್ತು. 'ಚಿಮಣಿ ಬೆಳಕಲ್ಲಿ ಅರಳಿದ ಗ್ರಾಮೀಣ ಪ್ರತಿಭೆ' ಶೀರ್ಷಿಕೆಯಲ್ಲಿ 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ (2009ರ ಮೇ 4) ಪ್ರಕಟವಾಗಿತ್ತು. ಅದನ್ನು ಗಮನಿಸಿದ ಓದುಗರು ಶಿವಾನಂದ ಅವರಿಗೆ ನೆರವಾಗಿದ್ದರು.

ಧಾರವಾಡದ ವಿದ್ಯಾಪೋಷಕ ಸಂಸ್ಥೆ, ವಿವಿಧ ಸಂಘ–ಸಂಸ್ಥೆಯವರು, ಶಿಕ್ಷಕರು, ವೈದ್ಯರು ಸೇರಿದಂತೆ ದಾನಿಗಳು ಆರ್ಥಿಕ ಸಹಾಯ ಮಾಡಿ ಕಲಿಕೆಗೆ ಆಸರೆಯಾದರು. ಓದುಗರು ಮತ್ತು ಜನರ ಸಹಾಯವನ್ನು ಶಿವಾನಂದ ಹುಸಿ ಮಾಡಲಿಲ್ಲ. ದ್ವಿತೀಯ ಪಿಯುಸಿ ಮತ್ತು ಸಿಇಟಿಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು, ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದರು. 2015ರಲ್ಲಿ ಬಿ.ಇ ಪದವಿ ಪಡೆದಿದ್ದಾರೆ. ಕ್ಯಾಂಪಸ್ ಸಂದರ್ಶನದಲ್ಲಿ ಕಂಪನಿಯೊಂದರ ನೌಕರಿಗೆ ಆಯ್ಕೆಯಾಗಿದ್ದರು. ಅದನ್ನು ಬಿಟ್ಟು ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಪರೀಕ್ಷೆಗಳನ್ನು ಎದುರಿಸಿದರು. 2018ರಲ್ಲಿ ಕೆಪಿಎಸ್‌ಸಿಯಿಂದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ನಡೆಸಿದ ಪರೀಕ್ಷೆಯಲ್ಲಿ 2ನೇ ರ‍್ಯಾಂಕ್ ಗಳಿಸಿ ಆಯ್ಕೆಯಾಗಿದ್ದಾರೆ. 'ಐಎಎಸ್ ಅಧಿಕಾರಿ ಆಗಬೇಕೆಂಬ ಕನಸಿದೆ. ಅದಕ್ಕಾಗಿ ಖಾಸಗಿ ಕಂಪನಿಯೊಂದರ ನೌಕರಿ ಬಿಟ್ಟೆ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಮೂರು ಬಾರಿ ಪ್ರಿಲಿಮಿನರಿ ಹಂತ ಪಾಸ್ ಮಾಡಿದ್ದೆ. ಈಗ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ 'ಡಿಒ' (ಡಿಸ್ಟ್ರಿಕ್ಟ್ ಆಫೀಸರ್) ಹುದ್ದೆ ದೊರೆತಿದ್ದು ಸಂತೋಷ ನೀಡಿದೆ. ಜನರೇ ನನ್ನನ್ನು ಬೆಳೆಸಿದ್ದಾರೆ. ಜನರ ಪ್ರೀತಿ, ಸಹಾಯ ಮರೆಯುವುದಿಲ್ಲ. ಈಗ ಸಿಕ್ಕಿರುವ ಕೆಲಸ ಮಾಡುತ್ತಲೇ ಯುಪಿಎಸ್‌ಸಿ ಪರೀಕ್ಷೆ ಎದುರಿಸುತ್ತೇನೆ. ವಿಶೇಷವಾಗಿ 'ಪ್ರಜಾವಾಣಿ'ಯ ನೆರವನ್ನೂ ಮರೆಯಲಾರೆ' ಎಂದು ಸ್ಮರಿಸಿದರು. ಕೈಮಗ್ಗ, ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಶ್ರೀಮಂತ ಪಾಟೀಲ ಅವರು ಶಿವಾನಂದ ಅವರಿಗೆ ನೇಮಕಾತಿ ಆದೇಶ ಪತ್ರ ನೀಡಿದ್ದಾರೆ. ಇನ್ನೂ ಸ್ಥಳ ನಿಗದಿಯಾಗಿಲ್ಲ.

'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ ವರದಿ ಗಮನಿಸಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಶಿವಾನಂದ ಅವರಿಗೆ ನೆರವಾಗಿದ್ದರು. 2009ರಲ್ಲಿ ಆಗಿನ ರಾಜ್ಯಪಾಲರಾಗಿದ್ದ ಎಚ್.ಆರ್. ಭಾರದ್ವಾಜ್ ಅವರಿಂದ 'ಎಸ್ಸೆಸ್ಸೆಲ್ಸಿ ಪ್ರತಿಭಾ ಪುರಸ್ಕಾರ' ಕೊಡಿಸಿದ್ದರು. 2011ರಲ್ಲಿ ಸಿಇಟಿ ಪರೀಕ್ಷೆಯಲ್ಲಿ 124ನೇ ರ‍್ಯಾಂಕ್ ಪಡೆದಾಗಲೂ ಯಡಿಯೂರಪ್ಪ ಅವರು ವಿದ್ಯಾರ್ಥಿಯ ಸಾಧನೆಯನ್ನು ಶ್ಲಾಘಿಸಿದ್ದರು. ಮುಖ್ಯಮಂತ್ರಿಗಳು ವರದಿ ಗಮನಿಸಿ 'ಪ್ರಜಾವಾಣಿ' ಸಂಪಾದಕರಿಗೆ ಪತ್ರ ಬರೆದು ಅಭಿನಂದಿಸಿದ್ದರು.



"ಸರ್ಕಾರಿ ನೌಕರಿಯು ಲಂಚದ ಮೇಲೆ ದೊರೆಯುತ್ತವೆ ಎನ್ನುವುದು ಸುಳ್ಳು. ನನಗೆ ಪ್ರತಿಭೆಯಿಂದಾಗಿ ಕೆಲಸ ಸಿಕ್ಕಿದೆ. ಎಲ್ಲಿಯೂ, ಯಾರಿಗೂ ಹಣ ಕೊಟ್ಟಿಲ್ಲ"

**ಶಿವಾನಂದ ಪಟ್ಟಣಶೆಟ್ಟಿ,** ಡಿಒ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

## ಪ್ರಜಾವಾಣಿ ಉದ್ಯೋಗ ವಾರ್ತೆ

**ಗ್ರಾಮೀಣ ರೋಜ್‌ಗಾರ್ ಕಲ್ಯಾಣ್ ಸಂಸ್ಥಾನ್ ಯೋಜನೆಯಲ್ಲಿ ವಿವಿಧ ಹುದ್ದೆಗಳು**

ಗ್ರಾಮೀಣ್ ರೋಜ್‌ಗಾರ್ ಕಲ್ಯಾಣ್ ಸಂಸ್ಥಾನ್ ಕರ್ನಾಟಕ ಯೋಜನೆಯಡಿ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- **ಹುದ್ದೆಗಳು:** ಜಿಲ್ಲಾ ಸಂಯೋಜಕರು, ಬ್ಲಾಕ್ ಸಂಯೋಜಕರು, ಕಂಪ್ಯೂಟರ್ ಆಪರೇಟರ್, ಬ್ಲಾಕ್ ಮೇಲ್ವಿಚಾರಕರು.
- **ಸ್ಥಳ:** ಕರ್ನಾಟಕದೆಲ್ಲೆಡೆ.
- **ವಯೋಮಿತಿ:** ಕನಿಷ್ಠ 18 ವರ್ಷ ಹಾಗೂ ಗರಿಷ್ಠ 37. ಎಸ್‌ಟಿ ಹಾಗೂ ಎಸ್‌ಸಿ ಅಭ್ಯರ್ಥಿಗಳಿಗೆ ಐದು ವರ್ಷಗಳ ವಯೋಮಿತಿ ಸಡಿಲಿಕೆ ಇದೆ.
- **ಆಯ್ಕೆ ಪ್ರಕ್ರಿಯೆ:** ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- **ಅರ್ಜಿ ಶುಲ್ಕ:** ಸಾಮಾನ್ಯ ವರ್ಗ ಹಾಗೂ ಇತರ ಅಭ್ಯರ್ಥಿಗಳಿಗೆ ₹ 320 ಹಾಗೂ ಎಸ್‌ಸಿ, ಎಸ್‌ಟಿ, ಅಂಗವಿಕಲ ಅಭ್ಯರ್ಥಿಗಳಿಗೆ ₹ 170
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಜುಲೈ 15, 2021
- **ಹೆಚ್ಚಿನ ಮಾಹಿತಿಗೆ:** https://grks.org/

## ಎಸ್ಸೆಸ್ಸೆಲ್ಸಿ ದಿಕ್ಸೂಚಿ

### ವಿಷಯ: ಗಣಿತ

31. ಒಂದು ಗೋಪುರದ ತುದಿಯನ್ನು ಅದರ ಪಾದದಿಂದ 20 m ದೂರದಲ್ಲಿರುವ ಒಂದು ಬಿಂದುವಿನಿಂದ ವೀಕ್ಷಿಸಿದಾಗ ಉಂಟಾಗುವ ಉನ್ನತಕೋನವು 45° ಆದರೆ ಆ ಗೋಪುರದ ಎತ್ತರ

A) 10 m B) 20 m C) 30 m D) $20\sqrt{3}$ m

32. ಕೇಂದ್ರೀಯ ಪ್ರವೃತ್ತಿಯ ಅಳತೆಗಳ ನಡುವಿನ ಪ್ರಾಯೋಗಿಕ ಸಂಬಂಧವು

A) 3 ಮಧ್ಯಾಂಕ = ಬಹುಲಕ + 2 ಸರಾಸರಿ
B) 2 ಮಧ್ಯಾಂಕ = ಬಹುಲಕ + 3ಸರಾಸರಿ
C) ಮಧ್ಯಾಂಕ = ಬಹುಲಕ + 2 ಸರಾಸರಿ
D) ಮಧ್ಯಾಂಕ = ಬಹುಲಕ - ಸರಾಸರಿ

33. ಈ ಕೆಳಗಿನವುಗಳಲ್ಲಿ ಇದು ಕೇಂದ್ರೀಯ ಪ್ರವೃತ್ತಿಯ ಅಳತೆಯಲ್ಲ

A) ಸರಾಸರಿ B) ಮಧ್ಯಾಂಕ
C) ಬಹುಲಕ D) ವ್ಯಾಪ್ತಿ

34. ಈ ಕೆಳಗಿನ ದತ್ತಾಂಶಗಳ ಬಹುಲಕ 12,15,14,13,12,15,18,25,16,15,20,18

A)15 B) 18 C) 12 D) 25

35. ಮಧ್ಯಾಂಕವನ್ನು ಕಂಡುಹಿಡಿಯುವ ಸೂತ್ರ

A) $L + \left[\frac{\frac{N}{2} - cf}{f}\right] X h$ B) $L + \left[\frac{\frac{N}{2} + cf}{f}\right] X h$

C) $L + \left[\frac{f_1 - f_0}{2f_1 - f_0 - f_2}\right] X h$ D) $L + \left[\frac{f_1 - f_0}{2f_1 - f_0 + f_2}\right] X h$

36. ಒಂದು ನೇರ ಸಿಲಿಂಡರಿನ ಪಾದದ ವಿಸ್ತೀರ್ಣವು 22 $cm^2$ ಮತ್ತು ಎತ್ತರವು 10 cm. ಆದರೆ ಸಿಲಿಂಡರಿನ ಘನಫಲ

A) 2200 $cm^2$ B) 2200 $cm^3$
C) 220 $cm^3$ D) 220 $cm^2$

37. ಸಿಲಿಂಡರಿನ ಘನಪಲ ಕಂಡು ಹಿಡಿಯುವ ಸೂತ್ರ

A) $\pi r^2 h$ B) $\frac{1}{3}\pi r^2 h$
C) $\pi rl$ D) $2\pi rh$

38. ಒಂದು ಶಂಕು ಮತ್ತು ಒಂದು ಸಿಲಿಂಡರ್ ಸಮನಾದ ಪಾದ ಮತ್ತು ಸಮನಾದ ಎತ್ತರ ಹೊಂದಿವೆ . ಸಿಲಿಂಡರ್ ಮತ್ತು ಶಂಕುಗಳ ಘನಫಲಗಳ ಅನುಪಾತವು.

A) 2:1 B) 3:1 C) 2:3 D) 3:2

39. ಎತ್ತರ 24cm ಮತ್ತು ಪಾದದ ತ್ರಿಜ್ಯ 6 cm ಇರುವ ಜೇಡಿಮಣ್ಣಿನ ಶಂಕುವನ್ನು ಗೋಳವಾಗಿ ಬದಲಾಯಿಸಲಾಗಿದೆ, ಗೋಳದ ತ್ರಿಜ್ಯವು.

A) 3 cm B) 6cm C) 12cm D)24 cm

40. 27$cm^3$ ಘನಫಲವನ್ನು ಹೊಂದಿರುವ 2 ವರ್ಗ ಘನಗಳ ಮುಖಗಳನ್ನು ಸೇರಿಸಿ ಒಂದು ಆಯತ ಘನಾಕೃತಿ ಮಾಡಿದೆ. ಈ ಆಯತ ಘನಾಕೃತಿಯ ಘನಫಲ

A) 27$cm^3$ B) 54$cm^3$
C) 108$cm^3$ D) 216$cm^3$

### ವಿಷಯ: ವಿಜ್ಞಾನ

31. ಎಲ್ ಉದ್ದವಿರುವ ವಾಹಕ ತಂತಿಯ ರೋದಶೀಲತೆ $\rho$ ಆಗಿದೆ. ತಂತಿಯನ್ನು ಸಮಭಾಗವಾಗಿ ಕತ್ತರಿಸಿದಾಗ, ಅದರ ರೋದಶೀಲತೆ

ಎ) $\rho$ ಬಿ) $\rho/2$
ಸಿ) 2$\rho$ ಡಿ) 4$\rho$

32. 10v ಬ್ಯಾಟರಿ 20$\Omega$ ರೋದವಿರುವ ವಾಹಕದಲ್ಲಿ 20,000c ಆವೇಶಗಳನ್ನುಚಲಿಸುವಂತೆ ಮಾಡುತ್ತದೆ. ಆಗಾದರೆ 10s ಗಳಲ್ಲಿ ನಡೆದ ಕೆಲಸ

ಎ) 2 x $10^3$ j ಬಿ) 2 x $10^5$ j
ಸಿ) 2 x $10^4$ j ಡಿ) 2 x $10^2$ j

33. ಈ ಕೆಳಗಿನ ಯಾವುದಕ್ಕೆ ವಿದ್ಯುತ್ ಸಾಮರ್ಥ್ಯವು ವಿಲೋಮಾನುಪಾತವಾಗಿರುತ್ತದೆ?

ಎ) ರೋದ ಬಿ) ವಿಭವಾಂತರ
ಸಿ) ವಿದ್ಯುತ್ ಪ್ರವಾಹ ಡಿ) ತಾಪಮಾನ

34. ವಿದ್ಯುತ್ ಶಕ್ತಿಯ ವ್ಯಾವಹಾರಿಕ ಮೂಲಮಾನ

ಎ) ಜೌಲ್ ಬಿ) ಕಿಲೊ ಜೌಲ್
ಸಿ) ಕಿಲೊ ವ್ಯಾಟ್ ಗಂಟೆ ಡಿ) ವ್ಯಾಟ್ ಗಂಟೆ

35. ಕಾಂತದ ಒಳಗೆ ಕಾಂತೀಯ ಬಲ ರೇಖೆಗಳು ಚಲಿಸುವುದು

ಎ) ಉತ್ತರದಿಂದ ದಕ್ಷಿಣಕ್ಕೆ ಬಿ) ದಕ್ಷಿಣದಿಂದ ಉತ್ತರಕ್ಕೆ
ಸಿ) ದಕ್ಷಿಣದಿಂದ ದೂರಕ್ಕೆ ಡಿ) ಉತ್ತರದಿಂದ ದೂರಕ್ಕೆ



36. ವಿದ್ಯುತ್ ಪ್ರವಹಿಸುತ್ತಿರುವ ಸುರುಳಿ ಆಕಾರದ ವಾಹಕ ತಂತಿಯಲ್ಲಿ ಕಾಂತ ಕ್ಷೇತ್ರದ ಸ್ವಭಾವ

ಎ) ಸುರುಳಿ ಬಿ) ಅಂಡಾಕಾರ
ಸಿ) ನೇರ ಡಿ) ಡೊಂಕು

37. ವಿದ್ಯುತ್ ಜನಕದ ಕಾರ್ಯ

ಎ) ವಿದ್ಯುತ್ ಆವೇಶಗಳ ಆಕರವಾಗಿದೆ
ಬಿ) ಶಾಖ ಶಕ್ತಿಯ ಆಕರವಾಗಿದೆ
ಸಿ) ವಿದ್ಯುತ್ ಕಾಂತವಾಗಿದೆ
ಡಿ) ಶಕ್ತಿ ಪರಿವರ್ತಕವಾಗಿದೆ

38. ಭೂ ತಂತಿಯಲ್ಲಿ ಪ್ರವಹಿಸುವುದು

ಎ) ವಿದ್ಯುತ್ ಪ್ರವಾಹ ಬಿ) ವಿಭವಾಂತರ
ಸಿ) ವಿದ್ಯುತ್ ಪ್ರವಹಿಸುವುದಿಲ್ಲ ಡಿ) ಶಾಖ

39. ಉತ್ತಮ ಇಂಧನವು

ಎ) ಹೆಚ್ಚಿನ ಶಕ್ತಿ ಬಿಡುಗಡೆ ಮಾಡುತ್ತದೆ
ಬಿ) ಸಾಗಾಣಿಕೆ ಸುಲಭ ಸಿ) ಲಭ್ಯತೆ ಸುಲಭ
ಡಿ) ಮೇಲಿನ ಎಲ್ಲವೂ

40. ಈ ಕೆಳಗಿನವುಗಳಲ್ಲಿ ಮೂಲ ಶಕ್ತಿಯ ಆಕರ

ಎ) ವಾಯು ಶಕ್ತಿ ಬಿ) ಜಲ ಶಕ್ತಿ
ಸಿ) ಪಳೆಯುಳಿಕೆ ಇಂಧನ ಡಿ) ಸೂರ್ಯ

### Subject : Second Language English

31. All that grandma wanted was

A. her family members B. to grow trees
C. a tree house D. to grow old gracefully

32. The doctor's suggestion made grandma feel

A. graceful B. happy
C. miserable D. relieved

33. His sceptre shows ____________________. The appropriate option to complete this line of the poem is

A. him that gives and him that takes
B. the dread and fear of kings;
C. monarch better than his crown
D. the force of temporal power

34. The Quality of Mercy should be enthroned in the

A. Sceptre B. Crown
C. heart of kings D. throne of kings

35. In the last stanza of the poem, 'The Song of India', the mother's forehead opens up. This signifies the

A. mother's irritation at the poet's questions
B. mother's pain seeing her countrymen
C. beautiful future of India
D. forthcoming natural disasters.

36. The thing that has put the Mother on the page of Atomic Age is

A. religion B. patriotism
C. technology D. wars

37. "… now preaching it with words of screaming notes and chords". These lines suggest that the Jazz player

A. was shouting very loudly
B. had an old Saxophone
C. wanted to be louder than other players.
D. wanted to convey a message through his music

38. My day or night ____________________ The appropriate option to complete this line of the poem is

A. Myself I make B. I sleep or play
C. are the blessings of the sight
D. I eve keep awake

39. The students' march was unique as

A. they marched with only placards.
B. distributed pamphlets to the policemen.
C. there were no slogans or shouts.
D. they held Gandhiji's photo

40. 'Mussoorie' bath was

A. a punishment given to cadets
B. a midnight bath C. a dip in the pool
D. a cold water bath

(ಪ್ರಶ್ನೆಪತ್ರಿಕೆ ಸಂಯೋಜನೆ: ಸ್ವಾಮಿ ಎಚ್‌.ಆರ್‌./ ಎ. ಶ್ರೀನಿವಾಸ್‌/ ಎಂ.ಎಸ್‌. ವರ್ಧಿನಿ)

## ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

### ಭಾಗ -20

271. ಒಂದು ನಾಟಿಕಲ್ ಮೈಲಿ ಎಂದರೆ

ಎ) 2.562 ಕಿ.ಮೀ. ಬಿ) 1.852 ಕಿ.ಮೀ.
ಸಿ) 1.652 ಕಿ.ಮೀ ಡಿ) 0.852 ಕಿ.ಮೀ

272. 2011ರ ಜನಗಣತಿ ಪ್ರಕಾರ ಭಾರತದ ಹೆಚ್ಚು ಜನಸಂಖ್ಯೆ ಹೊಂದಿದ ರಾಜ್ಯಗಳಲ್ಲಿ ಕರ್ನಾಟಕ ______ ನೇ ಸ್ಥಾನದಲ್ಲಿದೆ.

ಎ) 05 ಬಿ) 06 ಸಿ) 08 ಡಿ) 07

273. ಭಾಕ್ರಾನಂಗಲ್ ಅಣೆಕಟ್ಟನ್ನು ಯಾವ ನದಿಗೆ ಕಟ್ಟಲಾಗಿದೆ?

ಎ) ಸಟ್ಲೆಜ್ ಬಿ) ಸಿಂಧೂ
ಸಿ) ಮಹಾನದಿ ಡಿ) ನರ್ಮದಾ

274. ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಕೊನೆಯ ವಿದೇಶಿಯರು

ಎ) ಡಚ್ಚರು ಬಿ) ಪೋರ್ಚುಗೀಸರು
ಸಿ) ಫ್ರೆಂಚರು ಡಿ) ಬ್ರಿಟೀಷರು

275. 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಮುಸ್ಲಿಮರು ಭಾಗವಹಿಸಬಾರದು ಎಂದು ಹೇಳಿದವರು ಯಾರು?

ಎ) ರಹಮತ್ ಅಲಿ
ಬಿ) ಮೌಸಿನ್ ಉಲ್ ಮುಲ್ಕ್
ಸಿ) ಖಾನ್-ಅಬ್ದುಲ್ ಗಫಾರ್ ಖಾನ್
ಡಿ) ಮಹಮ್ಮದ್ ಅಲಿ ಜಿನ್ನಾ

276. ಇಟಲಿಯ ಕ್ರಾಂತಿವೀರ ಗ್ಯಾರಿಬಾಲ್ಡಿಯನ್ನು ತಮ್ಮ ಆದರ್ಶ ವ್ಯಕ್ತಿಯನ್ನಾಗಿ ಸ್ವೀಕರಿಸಿದ ಭಾರತೀಯ ಯಾರು?

ಎ) ವಲ್ಲಭಭಾಯಿ ಪಟೇಲ್
ಬಿ) ಬಾಲಗಂಗಾಧರ ತಿಲಕ್
ಸಿ) ಲಾಲಾ ಲಜಪತ್ ರಾಯ್
ಡಿ) ಬಿಪಿನ್ ಚಂದ್ರಪಾಲ್

277. ಅಖಿಲ ಭಾರತ ಮುಸ್ಲಿಂ ಲೀಗ್ ಸ್ಥಾಪನೆಯಾದ ವರ್ಷ?

ಎ) 1906 ಬಿ) 1907 ಸಿ) 1916 ಡಿ) 1921

278. ಕಾಂಗ್ರೆಸ್‌ನ ಯಾವ ಅಧಿವೇಶನದಲ್ಲಿ 'ಪೂರ್ಣ ಸ್ವರಾಜ್' ಸ್ಥಾಪನೆಯ ನಿರ್ಣಯ ಅಂಗೀಕರಿಸಲಾಯಿತು?

ಎ) ಕೋಲ್ಕತ್ತ ಅಧಿವೇಶನ
ಬಿ) ಬೆಳಗಾವಿ ಅಧಿವೇಶನ
ಸಿ) ಬಾಂಬೆ ಅಧಿವೇಶನ
ಡಿ) ಲಾಹೋರ್ ಅಧಿವೇಶನ

279. ಕರ್ನಾಟಕದ ಗಾಂಧಿ ಎಂದು ಪ್ರಸಿದ್ಧವಾದ ವ್ಯಕ್ತಿ ಯಾರು?

ಎ) ಮೈಲಾರ ಮಹಾದೇವಪ್ಪ
ಬಿ) ಆಲೂರು ವೆಂಕಟರಾಯ
ಸಿ) ಹರ್ಡೀಕರ್ ಮಂಜಪ್ಪ
ಡಿ) ಖಾನ್ ಅಬ್ದುಲ್ ಗಫಾರ್ ಖಾನ್

280. ಸಾಮಾನ್ಯವಾಗಿ ಬ್ರಿಟಿಷರು ಭಾರತೀಯರ ಸ್ವಾತಂತ್ರ್ಯದ ಎಲ್ಲ ಹೋರಾಟಗಳನ್ನು ______ಎಂದು ಬಿಂಬಿಸಿದರು.

ಎ) ಸ್ವಾತಂತ್ರ್ಯ ಸಮರ
ಬಿ) ಬಂಡಾಯ ಅಥವಾ ದಂಗೆ
ಸಿ) ದೇಶದ್ರೋಹದ ಚಟುವಟಿಕೆ
ಡಿ) ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ

281. ಶಾಹು ಮಹಾರಾಜ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರು ____________ ಅವರ ಬೋಧನೆಗಳಿಂದ ಪ್ರಭಾವಿತರಾಗಿದ್ದರು.

ಎ) ರಾಜಾರಾಂ ಮೋಹನ್ ರಾಯ್
ಬಿ) ವಿವೇಕಾನಂದ
ಸಿ) ಎಂ.ಜಿ.ರಾನಡೆ
ಡಿ) ಜ್ಯೋತಿಬಾ ಫುಲೆ

282. ಗಾಂಧೀಜಿ ಅಸಹಕಾರ ಚಳವಳಿಯನ್ನು _________ ನಲ್ಲಿ ನಡೆದ ಹಿಂಸಾತ್ಮಕ ಘಟನೆಯ ನಂತರ ಹಿಂಪಡೆದರು.

ಎ) ಜಲಿಯನ್ ವಾಲಾ ಬಾಗ್
ಬಿ) ಹಲಗಲಿ ಸಿ) ಚಂಪಾರಣ್ಯ
ಡಿ) ಚೌರಿ ಚೌರಾ

283. 2ನೇ ಮಹಾಯುದ್ಧದಲ್ಲಿ ಅಮೆರಿಕ ಭಾಗವಹಿಸಲು ಕಾರಣ

ಎ) ಪೋಲೆಂಡ್ ಮೇಲೆ ಹಿಟ್ಲರನ ದಾಳಿ
ಬಿ) ಮಂಚೂರಿನಾವನ್ನು ಜಪಾನ್ ವಶಪಡಿಸಿಕೊಂಡಿದ್ದು
ಸಿ) ಪರ್ಲ್ ಹಾರ್ಬರ್ ಮೇಲೆ ಜಪಾನ್ ದಾಳಿ
ಡಿ) ಬ್ರಿಟನ್ ಮತ್ತು ಫ್ರಾನ್ಸ್ ಜರ್ಮನಿಯ ಮೇಲೆ ಯುದ್ಧ ಘೋಷಿಸಿದ್ದು

284. ಭಾರತದ ಒಟ್ಟು ಭೌಗೋಳಿಕ ವಿಸ್ತಾರದ _________ ರಷ್ಟು ಅರಣ್ಯ ಪ್ರದೇಶ ಇದೆ

ಎ) ಶೇ 21.2 ಬಿ) ಶೇ 24.3
ಸಿ) ಶೇ 33.3 ಡಿ) ಶೇ 35.6

285. ಇದು ದೇಶದ ನೈಸರ್ಗಿಕ ಸಂಪತ್ತನ್ನು ತೋರಿಸುತ್ತದೆ

ಎ) ಕೈಗಾರಿಕೆಗಳು ಬಿ) ಬೆಳೆಗಳು
ಸಿ) ಅರಣ್ಯ ಡಿ) ಮಾನವ ಸಂಪತ್ತು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

**ಭಾಗ 19ರ ಉತ್ತರಗಳು**

256. ಡಿ, 257. ಡಿ, 258. ಎ, 259. ಎ, 260. ಎ, 261. ಸಿ, 262. ಬಿ, 263. ಡಿ, 264. ಎ, 265. ಬಿ, 266. ಬಿ, 267. ಡಿ, 268. ಸಿ, 269. ಎ, 270. ಡಿ



❦ ಸುಭಾಷಿತ ❦

ತಾನು ಸಾಯುವುದೇ ಇಲ್ಲವೇನೊ ಎಂಬಂತೆ ವರ್ತಿಸುವ ಮನುಷ್ಯ, ಕೊನೆಗೆ ಅರ್ಥಪೂರ್ಣವಲ್ಲದ ರೀತಿಯಲ್ಲಿ ಬದುಕಿ ಅಂತ್ಯಗೊಳ್ಳುತ್ತಾನೆ. -ದಲೈಲಾಮ

# ಆರೋಗ್ಯ ಕೇಂದ್ರಗಳೇ ರೋಗಪೀಡಿತ ಕೊರತೆ ನಿವಾರಿಸಿ, ವಿಶ್ವಾಸ ಮೂಡಿಸಿ

**ರಾಜ್ಯದ** ಗ್ರಾಮಾಂತರ ಭಾಗಗಳ ಆರೋಗ್ಯ ವ್ಯವಸ್ಥೆಯ ಹುಳುಕುಗಳೆಲ್ಲ ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಬಟಾಬಯಲಾಗಿವೆ. ಸೋಂಕುಪೀಡಿತರ ಚಿಕಿತ್ಸೆಗಾಗಲೀ ಆರೈಕೆಗಾಗಲೀ ಬೇಕಾದಂತಹ ಸಾಮರ್ಥ್ಯವೇ ಇಲ್ಲದ ಆರೋಗ್ಯ ಕೇಂದ್ರಗಳಲ್ಲಿ ಸೋಂಕು ಕೈಚೆಲ್ಲಿರುವುದು ಅಂಗೈ ಹುಣ್ಣಿನಷ್ಟೇ ಸ್ಪಷ್ಟ. ಆರೋಗ್ಯ ಸೌಕರ್ಯವನ್ನು ಕಲ್ಪಿಸುವುದು ಎಂದರೆ ಬಾರಾ ಕಮಾನಿನಂತೆ ಅಲಂಕಾರಿಕವಾಗಿ ಕಟ್ಟಡವನ್ನು ಎಬ್ಬಿಸಿ ನಿಲ್ಲಿಸುವುದಲ್ಲ. ಅಲ್ಲಿ ಚಿಕಿತ್ಸೆಗೆ ಸಾಧನ, ಸಲಕರಣೆಗಳು ಇರಬೇಕು. ರೋಗ ಪತ್ತೆಗೆ ಅಗತ್ಯ ಪರೀಕ್ಷಾ ಸೌಲಭ್ಯವನ್ನು ಆ ಕೇಂದ್ರ ಹೊಂದಿರಬೇಕು. ರೋಗಿಗಳ ಆರೈಕೆಗೆ ಒಂದಿಷ್ಟು ಹಾಸಿಗೆಗಳು, ನಾಜೂಕಿನ ಸ್ಥಿತಿ ನಿಭಾಯಿಸಲು ತೀವ್ರ ನಿಗಾ ಘಟಕ, ತುರ್ತು ಅಗತ್ಯಕ್ಕೊಂದು ಶಸ್ತ್ರಚಿಕಿತ್ಸಾ ಕೊಠಡಿ ಅಲ್ಲಿರಬೇಕು. ಪ್ರಾಣವಾಯು ಪೂರೈಕೆಗೆ ವೆಂಟಿಲೇಟರ್ ಇರಬೇಕಾದುದು ಎಷ್ಟೊಂದು ಅಗತ್ಯ ಎನ್ನುವುದನ್ನು ಕೋವಿಡ್ ಸಾವುಗಳೇ ಸಾರಿ ಹೇಳಿರುವುದು ನೆನಪಿರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಚಿಕಿತ್ಸೆ ನೀಡಲು ವೈದ್ಯರು ಬೇಕು. ಆರೈಕೆ ಮಾಡಲು ನರ್ಸ್‌ಗಳು, ಅವರ ನೆರವಿಗೆ ಪ್ರಯೋಗಾಲಯ ಸಹಾಯಕರು ಹಾಗೂ ಅರೆವೈದ್ಯಕೀಯ ಸಿಬ್ಬಂದಿ ಕೂಡ ಬೇಕು. ಆದರೆ, ನಮ್ಮ ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಒಂದು ಸೌಲಭ್ಯವಿದ್ದರೆ ಮತ್ತೊಂದು ಇರುವುದಿಲ್ಲ. ವೈದ್ಯರಿದ್ದರೆ ನರ್ಸ್‌ಗಳು ಇರುವುದಿಲ್ಲ. ನರ್ಸ್‌ಗಳಿದ್ದರೆ ವೈದ್ಯರು ಇರುವುದಿಲ್ಲ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ (ಪಿಎಚ್‌ಸಿ) ಹೀಗಿರಬೇಕು ಎಂದು ಸರ್ಕಾರವೇ ಮಾನದಂಡವೊಂದನ್ನು ರೂಪಿಸಿದೆ. ಆ ಮಾನದಂಡದ ಪ್ರಕಾರ, ನೂರಕ್ಕೆ ನೂರರಷ್ಟು ಸನ್ನದ್ಧವಾದ ಒಂದು ಪಿಎಚ್‌ಸಿಯೂ ರಾಜ್ಯದ ಗ್ರಾಮಾಂತರ ಭಾಗದಲ್ಲಿ ಸಿಗುವುದಿಲ್ಲ. ಆರೋಗ್ಯ ಕೇಂದ್ರಗಳೇ ಹೀಗೆ ಅನಾರೋಗ್ಯಪೀಡಿತವಾಗಿ ಹಾಸಿಗೆ ಹಿಡಿದಿರುವಾಗ ಕಾಯಿಲೆಯಿಂದ ಬಳಲುತ್ತಾ ಬಂದವರಿಗೆ ಹೇಗೆತಾನೇ ಅವುಗಳಿಂದ ಸಮರ್ಪಕ ಚಿಕಿತ್ಸೆ ಸಿಗಲು ಸಾಧ್ಯ?



ಕೋವಿಡ್ ನಿರ್ವಹಣೆ ಕುರಿತು ಸಂಸತ್ತಿನ ಸ್ಥಾಯಿ ಸಮಿತಿ ಕಳೆದ ನವೆಂಬರ್‌ನಲ್ಲಿ ಮಂಡಿಸಿದ ವರದಿಯಲ್ಲಿ, 'ಗ್ರಾಮಾಂತರ ಭಾಗದ ಆರೋಗ್ಯ ಸೇವಾ ವ್ಯವಸ್ಥೆಯು ಶೋಚನೀಯ ಸ್ಥಿತಿಯಲ್ಲಿದೆ, ಮೂಲಸೌಕರ್ಯ ಹೆಚ್ಚಿಸುವ ಕೆಲಸವನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕು' ಎಂದು ಶಿಫಾರಸು ಮಾಡಲಾಗಿತ್ತು. ಆಡಳಿತ ಹೊಣೆ ಹೊತ್ತವರು ಆ ವರದಿಯನ್ನು ಉಗ್ರಾಣಕ್ಕೆ ಕಳುಹಿಸಿ, ಮಲಗಿ ನಿದ್ರಿಸಿದ ಪರಿಣಾಮವನ್ನು ಗ್ರಾಮೀಣ ಭಾಗದ ಜನ ಈಗ ಅನುಭವಿಸಬೇಕಾಗಿದೆ. ಆರೋಗ್ಯ ಕೇಂದ್ರಗಳಲ್ಲಿ ಸಾಮಾನ್ಯ ಚಿಕಿತ್ಸೆಯು ಸುಲಭವಾಗಿ ಸಿಗುವಂತಾದರೆ ಎಷ್ಟೋ ಸಾವು, ನೋವುಗಳನ್ನು ತಪ್ಪಿಸಬಹುದು. ಆದರೆ, ಅವುಗಳಲ್ಲಿ ಕನಿಷ್ಠ ಚಿಕಿತ್ಸಾ ಸೌಲಭ್ಯ ಸಹ ಮರೀಚಿಕೆ ಆಗಿಬಿಟ್ಟಿದೆ. ಹೆಚ್ಚಿನ ಚಿಕಿತ್ಸೆಗೆ ನೆರವಾಗಬಲ್ಲ ತಾಲ್ಲೂಕು ಆಸ್ಪತ್ರೆಗಳ ಸಾಮರ್ಥ್ಯವನ್ನು ಮೇಲ್ದರ್ಜೆಗೆ ಏರಿಸಬೇಕಾದ ಬೇಡಿಕೆ ಕೂಡ ಬಹುದಿನಗಳಿಂದ ನನೆಗುದಿಗೆ ಬಿದ್ದಿದೆ. ಜಿಲ್ಲಾ ಆಸ್ಪತ್ರೆಯಿಂದ ಹಿಡಿದು ಉಪ ಆರೋಗ್ಯ ಕೇಂದ್ರದವರೆಗೆ ಎಲ್ಲ ಹಂತಗಳಲ್ಲೂ ವೈದ್ಯರ ಕೊರತೆ ತೀವ್ರವಾಗಿ ಬಾಧಿಸುತ್ತಿದೆ. ಪ್ರತಿ ಹತ್ತು ಸಾವಿರ ಜನರಿಗೆ ಒಂಬತ್ತು ವೈದ್ಯರ ಸೇವೆ ಲಭ್ಯವಿರುವುದು ದೇಶದ ಸರಾಸರಿ. ಆದರೆ ಕಲ್ಯಾಣ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಲ್ಲಿ ಪ್ರತಿ ಹತ್ತು ಸಾವಿರ ಜನಸಂಖ್ಯೆಗೆ ಕೇವಲ ಒಬ್ಬ ವೈದ್ಯ ಲಭ್ಯ. ಆರೋಗ್ಯ ಯೋಜನೆಗಳಿಗೆ 'ಆಯುಷ್ಮಾನ್' ಎಂದು ಹೆಸರಿಟ್ಟ ಮಾತ್ರಕ್ಕೆ ಗ್ರಾಮೀಣ ಜನಸಮುದಾಯದ ಜೀವನ ಸ್ವಸ್ಥಗೊಳ್ಳುವುದಿಲ್ಲ. ಅಲ್ಲಿನ ಜನ ನಿಜಕ್ಕೂ ಸ್ವಸ್ಥಜೀವನ ನಡೆಸುವಂತಾಗಲು ವೈದ್ಯರು ಹಾಗೂ ಮೂಲಸೌಕರ್ಯದ ಕೊರತೆಯನ್ನು ಮೊದಲು ಹೋಗಲಾಡಿಸಬೇಕು. ಸ್ವತಃ ಪಿಎಚ್‌ಸಿಗಳು ರೋಗಪೀಡಿತ ಆಗಿರುವುದರಿಂದಲೇ ಜನರಿಗೆ ಅವುಗಳ ಕುರಿತು ಭಯ ಹಾಗೂ ಅಪನಂಬಿಕೆ. ಕೋವಿಡ್ ಲಕ್ಷಣಗಳಿದ್ದರೂ ತಪಾಸಣೆ ಮಾಡಿಸಿಕೊಳ್ಳಲು ಜನ ಹಿಂದೇಟು ಹಾಕಿರುವುದು, ಅದರಿಂದ ಸಕಾಲದಲ್ಲಿ ಚಿಕಿತ್ಸೆ ಸಿಗದೆ ಸಾವಿನ ಪ್ರಮಾಣ ಹೆಚ್ಚಿರುವುದು ಒಟ್ಟಾರೆ ವ್ಯವಸ್ಥೆಯ ಕಟುಸತ್ಯ.

**ಆರೋಗ್ಯ ಕೇಂದ್ರಗಳ ಸಾಮರ್ಥ್ಯದ ಕುರಿತು ಜನಸಮುದಾಯದಲ್ಲಿ ನಂಬಿಕೆ ಬೆಳೆಯುವಂತಹ ರೀತಿಯಲ್ಲಿ ಆರೋಗ್ಯ ಸೌಲಭ್ಯಗಳನ್ನು ಮೇಲ್ದರ್ಜೆಗೆ ಏರಿಸಬೇಕಾಗಿದೆ**

ರಾಜ್ಯ ಸರ್ಕಾರಕ್ಕೆ ಗ್ರಾಮೀಣ ಭಾಗದ ಆರೋಗ್ಯ ವ್ಯವಸ್ಥೆಯನ್ನು ಸುಸ್ಥಿತಿಗೆ ತರುವ ನೈಜ ಇಚ್ಛಾಶಕ್ತಿ ಏನಾದರೂ ಇದ್ದರೆ ಮೊದಲು ಎಲ್ಲ ಗ್ರಾಮಗಳ ಆರೋಗ್ಯ ಸೌಲಭ್ಯದ ಸ್ಥಿತಿಗತಿ ಕುರಿತು ವೈಜ್ಞಾನಿಕ ಸಮೀಕ್ಷೆಯನ್ನು ನಡೆಸಬೇಕು. ಎಲ್ಲೆಲ್ಲಿ, ಏನೇನು ಅಗತ್ಯವಿದೆ ಎನ್ನುವುದನ್ನು ಪಟ್ಟಿ ಮಾಡಬೇಕು. ಆ ಕೊರತೆಗಳನ್ನು ನೀಗಿಸಲು ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಬೇಕು. ಹಾಗೆಯೇ ಸಾಮರ್ಥ್ಯವನ್ನು ಉನ್ನತೀಕರಿಸಬೇಕು. ಗುಡ್ಡಗಾಡು ಪ್ರದೇಶದ ಜನರಿಗೆ ಎಷ್ಟು ಸಾಧ್ಯವೋ ಅಷ್ಟು ಹತ್ತಿರದಲ್ಲಿ ಚಿಕಿತ್ಸಾ ಸೌಲಭ್ಯಗಳು ಸಿಗುವಂತೆ ನೋಡಿಕೊಳ್ಳಬೇಕು. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ದೃಷ್ಟಿಯಲ್ಲಿ ಅಕ್ಕಪಕ್ಕದ ತಮಿಳುನಾಡು, ಕೇರಳ, ಮಹಾರಾಷ್ಟ್ರ ರಾಜ್ಯಗಳಿಂದ ನಾವು ಕಲಿಯುವುದು ಬೇಕಾದಷ್ಟಿದೆ. ತಮಿಳುನಾಡಿನಲ್ಲಿ ಚಿಕಿತ್ಸೆ ಪಡೆಯಲು ಜನ ವಿಶ್ವಾಸದಿಂದ ಆರೋಗ್ಯ ಕೇಂದ್ರಗಳಿಗೆ ತೆರಳುತ್ತಾರೆ. ಆರೋಗ್ಯ ಕೇಂದ್ರಗಳ ಸಾಮರ್ಥ್ಯದ ಕುರಿತು ನಮ್ಮಲ್ಲೂ ಅಂತಹ ನಂಬಿಕೆ ಬೆಳೆಯುವಂತೆ ಸೌಲಭ್ಯಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಕೇರಳದಲ್ಲಿ ಪ್ರತಿ ಐದು ಸಾವಿರ ಜನರಿಗೆ ಒಂದರಂತೆ ಆರೋಗ್ಯ ಕೇಂದ್ರವಿದೆ. ರಾಜ್ಯದಲ್ಲೂ ಪಿಎಚ್‌ಸಿಗಳ ಸಂಖ್ಯೆಯನ್ನು ಹೆಚ್ಚಿಸುವತ್ತ ಗಮನಹರಿಸಬೇಕು. ಆಂಬುಲೆನ್ಸ್‌ಗಳನ್ನು ಅಗತ್ಯಕ್ಕೆ ತಕ್ಕಂತೆ ಒದಗಿಸಬೇಕು. ಟೆಲಿಮೆಡಿಸಿನ್‌ನ ಈ ಕಾಲಘಟ್ಟದಲ್ಲಿ ನರ್ಸ್‌ಗಳಿಗೆ ಸೂಕ್ತ ತರಬೇತಿ ನೀಡಿದರೆ ವೈದ್ಯರ ಕೊರತೆಯನ್ನು ತಕ್ಕಮಟ್ಟಿಗೆ ನೀಗಿಸಬಹುದು ಎನ್ನುವುದು ತಜ್ಞರ ಅಭಿಪ್ರಾಯ. ಆ ನಿಟ್ಟಿನಲ್ಲೂ ಸರ್ಕಾರ ಮುಕ್ತ ಮನಸ್ಸಿನಿಂದ ಯೋಚಿಸಬೇಕು. ಬಹುತೇಕ ಜಿಲ್ಲೆಗಳಲ್ಲಿರುವ ವೈದ್ಯಕೀಯ ಕಾಲೇಜುಗಳ ನೆರವನ್ನು ಗ್ರಾಮಾಂತರ ಭಾಗದ ಆರೋಗ್ಯ ವ್ಯವಸ್ಥೆ ಸುಧಾರಿಸುವ ದಿಸೆಯಲ್ಲಿ ಹೇಗೆಲ್ಲ ಪಡೆಯಬಹುದು ಎಂಬ ವಿಷಯವಾಗಿಯೂ ತಜ್ಞರ ಸಲಹೆಯನ್ನು ಪಡೆಯಬೇಕು.

## ದಿನದ ಟ್ವೀಟ್

### ಆರೋಗ್ಯ ಸಚಿವರೆಂದರೆ...



**ಆರೋಗ್ಯ ವ್ಯವಸ್ಥೆ ಮತ್ತು ಸಾರ್ವತ್ರಿಕ ಆರೋಗ್ಯ ಸೇವೆಯ ಪ್ರಾಮುಖ್ಯವನ್ನು ಅರ್ಥ ಮಾಡಿಕೊಳ್ಳಬಲ್ಲ ಕೇಂದ್ರ ಆರೋಗ್ಯ ಸಚಿವರ ಅಗತ್ಯ ಭಾರತಕ್ಕಿದೆ. ಆರೋಗ್ಯವು ಜನರ ಹಕ್ಕು ಎಂಬುದರಲ್ಲಿ ನಂಬಿಕೆ ಹೊಂದಿರಬೇಕು ಹಾಗೂ ಸರ್ಕಾರಿ ಆರೋಗ್ಯ ಸೌಕರ್ಯಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುವವರಾಗಿರಬೇಕು. ಈ ಮೂಲಕ ಸಿಜಿಎಚ್‌ಎಸ್ (ಕೇಂದ್ರ ಸರ್ಕಾರಿ ಆರೋಗ್ಯ ಯೋಜನೆ) ಪಟ್ಟಿಯಲ್ಲಿರುವ ಖಾಸಗಿ ಆರೋಗ್ಯ ಸಂಸ್ಥೆಗಳನ್ನು ಕೈಬಿಡಲು ಅನುವಾಗಬೇಕು.**

**ಡಾ. ಚಂದ್ರಕಾಂತ್ ಲಹರಿಯ,** ವೈದ್ಯ

## 25 ವರ್ಷಗಳ ಹಿಂದೆ

ಸೋಮವಾರ, 8-7-1996

• **ಅರೆಕಾಲಿಕ ಉಪನ್ಯಾಸಕರ ನೇಮಕ ನಿಷೇಧ**

**ಬೆಂಗಳೂರು, ಜುಲೈ 7–** 'ಅರೆಕಾಲಿಕ ಉಪನ್ಯಾಸಕರು ಮುಂದಿಟ್ಟಿರುವ ಸೇವಾ ಕಾಯಮಾತಿಯ ಕಿರಿಕಿರಿಯಿಂದ ಪಾರಾಗುವ ಉದ್ದೇಶದಿಂದ' ಅಗತ್ಯವಿರುವಲ್ಲಿ ನಿವೃತ್ತ ಉಪನ್ಯಾಸಕರನ್ನೇ ಕಾಲೇಜುಗಳು ನೇಮಕ ಮಾಡಿಕೊಳ್ಳಬೇಕು ಎಂದು ಸೂಚಿಸಿರುವ ಸರ್ಕಾರ, ಯಾವುದೇ ಕಾರಣಕ್ಕೂ ಇನ್ನು ಮುಂದೆ ಅರೆಕಾಲಿಕ (ಪಾರ್ಟ್‌ಟೈಮ್) ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಕೂಡದು ಎಂದು ನಿಷೇಧ ಹೇರಿದೆ.

ಪ್ರಥಮ ದರ್ಜೆ ಕಾಲೇಜುಗಳಿಗೆ ಶಿಕ್ಷಣ ಇಲಾಖೆ ಅಧೀನ ಕಾರ್ಯದರ್ಶಿಯವರು ಕಳಿಸಿರುವ ಆದೇಶದಲ್ಲಿ ಈ ಶೈಕ್ಷಣಿಕ ವರ್ಷದಿಂದಲೇ ಇಂತಹ ನಿಷೇಧ ಹೇರಿರುವುದಾಗಿ ಸ್ಪಷ್ಟಪಡಿಸಲಾಗಿದೆ.

## 50 ವರ್ಷಗಳ ಹಿಂದೆ

ಗುರುವಾರ, 8-7-1971

• **ಸರ್ಕಾರಗಳನ್ನು ಉರುಳಿಸುವ ಆಟ ಸಾಕು– ಇಂದಿರಾಗೆ ಜಯಪ್ರಕಾಶ್ ಬುದ್ಧಿವಾದ**

**ಪಾಟಲೀಪುರ, ಜುಲೈ 7–** ಸರ್ಕಾರಗಳನ್ನು ಉರುಳಿಸುವ ಆಟ ಇನ್ನು ಸಾಕು ಎಂದು ಸರ್ವೋದಯ ನಾಯಕ ಜಯಪ್ರಕಾಶ್ ನಾರಾಯಣ್ ಅವರು ರಾಜಕಾರಣಿಗಳಿಗೆ, ವಿಶೇಷವಾಗಿ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಬುದ್ಧಿ ಹೇಳಿದ್ದಾರೆ.

ಮಂಗಳವಾರ ಇಲ್ಲಿ ಬಾಂಗ್ಲಾ ದೇಶ ಕುರಿತ ಎರಡು ದಿನಗಳ ಬಹಿರಂಗ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಅವರು, ಅಸ್ಥಿರ ರಾಜಕೀಯ ಪರಿಸ್ಥಿತಿಯು ಬಾಂಗ್ಲಾ ದೇಶದ ವಿದ್ಯಮಾನಗಳ ಹಿನ್ನೆಲೆಯಲ್ಲಿ ರಾಷ್ಟ್ರದ ಸಮಸ್ಯೆಗಳನ್ನು ಉಲ್ಬಣಗೊಳಿಸುವ ಸಂಭವವಿದೆಯೆಂದು ನುಡಿದರು.

'ಸರ್ಕಾರಗಳನ್ನು ಉರುಳಿಸುವ ಆಟವನ್ನು ನಿಲ್ಲಿಸುವಂತೆ ನಾನು ಎಲ್ಲ ರಾಜಕೀಯ ಪಕ್ಷಗಳ ನಾಯಕರುಗಳಿಗೆ ಮನವಿ ಮಾಡಿಕೊಳ್ಳುತ್ತೇನೆ' ಎಂದರು.

### ಪ್ರಪಾತದಂಚಿನ ಪೃಥ್ವಿಯನ್ನು ನೋಡಲೆಂದು ಹೊಸ ರಿವೆಂಜ್ ಟೂರಿಸಂ ಆರಂಭವಾಗಿದೆ

# ನಿಸರ್ಗವೇ ಘೋಷಿಸುವ ಲಾಕ್‌ಡೌನ್

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

**ಅನ್‌ಲಾಕ್** ಘೋಷಣೆಯಾಗಿದ್ದೇ ತಡ, ಪುತಪುತನೆ ಜನರೆಲ್ಲ ರಸ್ತೆಗೆ ನುಗ್ಗುತ್ತಿದ್ದಾರೆ. ನಮ್ಮಲ್ಲೇನೊ ಜನರು ತಂತಮ್ಮ ಸಮೀಪದ ಮಾರುಕಟ್ಟೆ, ಮಾಲ್, ಹೊಟೆಲ್‌ಗಳಲ್ಲೇ ಜಮಾಯಿಸುತ್ತಿದ್ದಾರೆ. ಉತ್ತರ ಭಾರತದ ಜನರು ಪ್ರವಾಸಿಧಾಮಗಳ ಕಡೆಗೆ ನುಗ್ಗುತ್ತಿರುವ ಪರಿ ನೋಡಬೇಕು! ಶಿಮ್ಲಾ, ಮನಾಲಿ, ನೈನಿತಾಲ್, ಧರ್ಮಶಾಲಾ ಮುಂತಾದ ತಂಪುಹವೆಯ ತಾಣಗಳಲ್ಲಿ ಅದೆಷ್ಟು ರಷ್ ಆಗುತ್ತಿದೆ ಎಂದರೆ ಹೊಟೆಲ್‌ಗಳಲ್ಲಿ ರೂಮ್ ಸಿಗದೇ ಕಾರಿನಲ್ಲೇ ಮಲಗುತ್ತಿದ್ದಾರೆ. ಎರಡು ತಿಂಗಳ ಹಿಂದಷ್ಟೇ ಆಸ್ಪತ್ರೆಗಳಲ್ಲಿ ಜಾಗ ಸಿಗದೇ ಆಂಬುಲೆನ್ಸ್‌ಗಳಲ್ಲೇ ಏದುಸಿರು ಬಿಡುತ್ತಿದ್ದ ಸಮಾಜ ಈಗ ಹಠಾತ್ ಪುಟಿದೆದ್ದಿದೆ.

ನಮ್ಮ ದೇಶದಲ್ಲಷ್ಟೇ ಅಲ್ಲ, ಜಗತ್ತಿನ ಎಲ್ಲ ಕಡೆ ಅನುಕೂಲಸ್ಥರು ಪ್ರವಾಸಿಧಾಮಗಳ ಕಡೆಗೆ ಗುಳೆ ಹೊರಟಿದ್ದಾರೆ. ಇಂಥ ಪುಟಿನೆಗೆತಕ್ಕೆ 'ರಿವೆಂಜ್ ಟೂರಿಸಂ' (ಪ್ರತೀಕಾರ ಪ್ರವಾಸೋದ್ಯಮ) ಎಂಬ ಹೊಸ ಹೆಸರೂ ಬಂದಿದೆ. ಹಿಂದಿನ ಟೆಂಪಲ್ ಟೂರಿಸಂ, ನೇಚರ್ ಟೂರಿಸಂ ಜೊತೆಗೆ ಹೊಸದಾಗಿ ಕ್ರೀಡಾ ಟೂರಿಸಂ, ಕೃಷಿ ಟೂರಿಸಂ, ಹಿಮ ಟೂರಿಸಂ, ಮೆಡಿಕಲ್ ಟೂರಿಸಂ ಬಂತು. ಆಮೇಲೆ ಚೆರ್ನೊಬಿಲ್‌ನಂಥ ಕರಾಳ ಪ್ರದೇಶಗಳನ್ನು ತೋರಿಸುವ 'ಡಾರ್ಕ್ ಟೂರಿಸಂ' ಕೂಡ ಬಂತು. ಇನ್ನೇನು ಸ್ಪೇಸ್ ಟೂರಿಸಂ ಬರಲಿದೆ. ಈಗ ಈ ಪಟ್ಟಿಗೆ 'ರಿವೆಂಜ್ ಟೂರಿಸಂ' ಸೇರಿದೆ. ಇಲ್ಲಿ ಸೇಡು ಯಾವುದರ ವಿರುದ್ಧ? ಕೊರೊನಾ ವಿರುದ್ಧವಂತೆ. ಇಷ್ಟು ದಿನ ಈ ಕೋವಿಡ್ ಪೀಡೆ ತಮ್ಮನ್ನು ಕೈಕಾಲು ಕಟ್ಟಿ ಕೂರಿಸಿದ್ದಕ್ಕೆ ಸಿಡಿದೆದ್ದು ಅನುಕೂಲಸ್ಥರು ಕಾರು, ವಿಮಾನವೇರಿ ಹಿಂದಿಗಿಂತ ಗಡದ್ದಾಗಿ ಮಜಾ ಉಡಾಯಿಸಬಯಸಿದ್ದಾರೆ.

ಮಹಾಸಾಂಕ್ರಾಮಿಕದಿಂದಾಗಿ ಪೂರ್ತಿ ನೆಲಕಚ್ಚಿದ್ದ ಪ್ರವಾಸೋದ್ಯಮ ಮತ್ತೆ ಗೆಲುವಾಗುತ್ತಿದ್ದರೆ- ಅದು ಸಂತಸದ ಸಂಗತಿಯೇ ಹೌದಾದರೂ ಜಾಗತಿಕ ದೃಷ್ಟಿಯಲ್ಲಿ ಆತಂಕ ತರುವಂತಿದೆ. ಕೊರೊನಾ ದಾಳಿಯಿಂದಾಗಿ ಮನುಷ್ಯನ ದಾಹಕ್ಕೆ ತುಸು ಬ್ರೇಕ್ ಬಿದ್ದಂತಾಗಿ ಪೃಥ್ವಿಯ ಒಟ್ಟಾರೆ ವ್ಯವಸ್ಥೆ ಚೇತರಿಸಿಕೊಂಡೀತೇನೊ ಎಂದು ಇಕೋತ್ತಮರು ಆಶಿಸಿದ್ದರು. ಮೊದಲ ಲಾಕ್‌ಡೌನ್ ಅವಧಿಯಲ್ಲಿ ಅಂಥ ಲಕ್ಷಣಗಳು ಕಂಡಿದ್ದವು. ವಾಯುಮಂಡಲ ಸ್ವಚ್ಛವಾಗಿತ್ತು; ಕೊಳಕು ನದಿಗಳು ಹಾಗೂ ಕಡಲಂಚುಗಳು ಚೊಕ್ಕಟಗೊಂಡಿದ್ದವು. ವನ್ಯಜೀವಿಗಳು ರಸ್ತೆಗಳಲ್ಲಿ ಓಡಾಡುತ್ತಿದ್ದವು. ಹೊಂಜಿನಲ್ಲಿ ಮುಳುಗಿದ್ದ ಚೀನಾದ ನಗರಗಳನ್ನು ಬಾಹ್ಯಾಕಾಶದಿಂದ ನಿಚ್ಚಳವಾಗಿ ನೋಡಬಹುದಿತ್ತು. ಆದರೆ ಅಂಥ ಚೇತರಿಕೆ ಕ್ಷಣಿಕವಾಗಿತ್ತು. ಈ ಬಾರಿಯಂತೂ ಲಾಕ್‌ಡೌನ್ ವಿಧಾನವೇ ಜಾಳುಜಾಳಾಗಿದ್ದರಿಂದ ಜೀವಮಂಡಲದ ಚೇತರಿಕೆಯ ಅಷ್ಟಿಷ್ಟು ಲಕ್ಷಣಗಳೂ ದಾಖಲಾಗಲಿಲ್ಲ.

ಪೃಥ್ವಿಯ ಇಡೀ ಜೀವಗೋಲ ಒಂದೇ ಜೀವಿಯಂತೆ, ಒಂದು ಜೈವಿಕಯಂತ್ರದಂತೆ ವರ್ತಿಸುತ್ತದೆಂದು ಅನೇಕ ವಿಜ್ಞಾನಿಗಳು ವಾದಿಸುತ್ತಾರೆ. ಇದಕ್ಕೆ ಗೇಯಾ ಸಿದ್ಧಾಂತ ಎನ್ನುತ್ತಾರೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆರಂಭದ ವಾಕ್ಯಗಳಲ್ಲಿ ಕುವೆಂಪು ಹೇಳಿದಂತೆ, 'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ; ಯಾವುದೂ ವ್ಯರ್ಥವಲ್ಲ'. ಯಾವುದೋ ಒಂದು ಜೀವಿ ತಾನೇ ಅತಿಮುಖ್ಯ ಅಂದುಕೊಂಡು ತೀರ ಅತಿರೇಕದಿಂದ ವರ್ತಿಸತೊಡಗಿದರೆ ಅಂಥ ಜೀವಿಯನ್ನು ನಿಯಂತ್ರಿಸುವ ನಾನಾ ಸೂತ್ರಗಳು ನಿಸರ್ಗದಲ್ಲಿವೆ ಎಂಬುದಕ್ಕೆ ನೂರಾರು ಸಾಕ್ಷ್ಯಗಳಿದ್ದವು. ಆ ಸೂತ್ರಗಳ ಪ್ರಕಾರವೇ ಮನುಷ್ಯರ ಸಂಖ್ಯೆಯೂ ನಿಯಂತ್ರಣದಲ್ಲಿತ್ತು. ಆದರೆ ಇವನಿಗೆ ಫಾಸಿಲ್ ಶಕ್ತಿ ಮೂಲಗಳು ಲಭಿಸಿದ್ದೇ ತಡ, ದೂರದೂರದಲ್ಲಿದ್ದ ಚುರುಕು ಮಿದುಳುಗಳು ಒಂದಕ್ಕೊಂದು ಬೆಸುಗೆಯಾಗುತ್ತ ಮನುಷ್ಯನ ಸೂಪರ್ ಮಿದುಳು ರೂಪುಗೊಂಡಿತು. ಕೇವಲ ನೂರೈವತ್ತು ವರ್ಷಗಳಲ್ಲಿ ವೈದ್ಯಕೀಯ ಕ್ರಾಂತಿ, ಕೃಷಿ ಕ್ರಾಂತಿ, ಸಂಪರ್ಕ ಕ್ರಾಂತಿ, ಡಿಜಿಟಲ್ ಕ್ರಾಂತಿಗಳ ಕೊಡೆ ಬಿಚ್ಚುತ್ತ ಹೋದಂತೆ ಪ್ರಕೃತಿಯ ಎಲ್ಲ ಸೂತ್ರಗಳೂ ಶಿಥಿಲವಾಗುತ್ತ ತುಂಡಾಗುತ್ತ ಹೋದವು.

ವಿಜ್ಞಾನವನ್ನು ಬದಿಗಿಟ್ಟು, ಸಹಜ ಚಿಂತನೆಯೆಂಬಂತೆ ನೋಡಿದವರಿಗೂ ಗೇಯಾಶಕ್ತಿ ಈಗ ಮನುಷ್ಯನ ವಿರುದ್ಧ ಪ್ರತೀಕಾರಕ್ಕೆ ಹೊರಟಂತೆ ಕಾಣುತ್ತದೆ. ಈ ಫಾಸಿಲ್ ಶಕ್ತಿಗಳಿಂದಾಗಿಯೇ ಭೂತಾಪಮಾನ ಹೆಚ್ಚುತ್ತ ಋತುಮಾನಗಳೆಲ್ಲ ಎರ್ರಾಬಿರ್ರಿಯಾಗುತ್ತಿವೆ; ಅದು ಸಾಲದಂತೆ ಯಃಕಶ್ಚಿತ ವೈರಾಣುವೊಂದು ಮನುಷ್ಯರಿಗೂ ಕಾರ್ಖಾನೆಗಳಿಗೂ ದೇಗುಲಗಳಿಗೂ ದಿಗ್ಬಂಧನ ಹಾಕಿ ಕೂರಿಸಿತು. ನಾವು ಇದರಿಂದ ಪಾಠ ಕಲಿಯುವ ಬದಲು, ಈಗ ಕೊಂಚ ಬಿಡುಗಡೆ ಸಿಕ್ಕಿದ್ದೇ ತಡ, ಪ್ರಕೃತಿಗೇ ಸಡ್ಡು ಹೊಡೆದಂತೆ ಸೇಡಿನ ಪ್ರವಾಸೋದ್ಯಮಕ್ಕೆ ಹೊರಟೆವಲ್ಲ!

ನಮ್ಮ ದೇಶದ ವಿಲಾಸಿಗಳು ಗಿರಿಧಾಮಗಳಿಗೆ ಧಾವಿಸುತ್ತಿದ್ದರೆ ಯುರೋಪ್‌ನಲ್ಲಿ ಜನರು ಬಿಸಿಲನ್ನು ಹುಡುಕಿಕೊಂಡು ಕಡಲತೀರಕ್ಕೆ ಧಾವಿಸುತ್ತಿದ್ದಾರೆ. ಅಲ್ಲಿ ಬಿಡಿ, ಎಲ್ಲರಿಗೂ ಲಸಿಕೆ ಸಿಕ್ಕಿದೆ. ನಮ್ಮಲ್ಲಿ ಶೇ 95ರಷ್ಟು ಜನರಿಗೆ ಲಸಿಕೆ ಈಗಲೂ ಮರೀಚಿಕೆ ಆಗಿರುವಾಗ ಈ ಪ್ರವಾಸಿಗರು ಮೂರನೇ ಅಲೆಗೆ ರಣವೀಳ್ಯ ಕೊಡಲೆಂದೇ ಹೊರಟಂತೆ ಕಾಣುತ್ತದೆ. ಸುಸ್ಥಿರ ಬದುಕಿನ ಸೂತ್ರಗಳನ್ನು (ಪ್ರಯಾಣ ಕಮ್ಮಿ ಮಾಡಿ; ಸಂಚಾರಕ್ಕೆ ಸಾಧ್ಯವಿದ್ದಷ್ಟೂ ಸಾಮೂಹಿಕ ಸಾರಿಗೆಯನ್ನೇ ಬಳಸಿ; ಸ್ಥಳೀಯ ವಸ್ತುಗಳನ್ನೇ ಖರೀದಿಸಿ, ಮಾಂಸ ಭಕ್ಷಣೆ ಕಮ್ಮಿ ಮಾಡಿ, ಸೈಕ್ಲಿಂಗ್ ಮಾಡಿ, ರೀಸೈಕ್ಲಿಂಗ್ ಮಾಡಿ- ಇಂಥ ಕೆಲವನ್ನು) ಹೀಗೆ ಧಿಕ್ಕರಿಸಿ ಹೊರಟರೆ ಪ್ರಕೃತಿ ಬೇರೆ ಬಗೆಯ ಲಾಕ್‌ಡೌನ್ ಹೇರಬಹುದಲ್ಲವೆ?

ಬೇರೆಬಗೆಯ ಲಾಕ್‌ಡೌನ್ ಹೇಗಿರುತ್ತದೆ ನೋಡಲು ಉತ್ತರ ಅಮೆರಿಕಕ್ಕೆ ಬನ್ನಿ. ಕೆನಡಾದಲ್ಲಿ ಕಳೆದೆರಡು ವಾರಗಳ ಉಗ್ರ ಬೇಸಿಗೆಯಿಂದಾಗಿ ಈಗಾಗಲೇ 800ಕ್ಕೂ ಹೆಚ್ಚು ಜನರು ಸತ್ತಿದ್ದಾರೆ. ಅಮೆರಿಕದ ವಾಯವ್ಯದ ಏಳು ರಾಜ್ಯಗಳಲ್ಲಿ ಶಾಖಮಾರುತ ತೀವ್ರವಾಗಿದ್ದು ಬೇರೆ ಬೇರೆ ಊರುಗಳಲ್ಲಿ ಇದುವರೆಗೆ ಮೂರೂವರೆ ಕೋಟಿ ತುರ್ತು ಅಲರ್ಟ್‌ಗಳ ಘೋಷಣೆಯಾಗಿದೆ. ಕೆನಡಾದ ಬಿಸಿಝಳದ ವಿಪರ್ಯಾಸ ಏನೆಂದರೆ, ಜಗತ್ತಿನ ಅತಿ ವಿಶಾಲ ಹಿಮ ಸರೋವರಗಳೂ ಹಿಮದ್ವೀಪಗಳೂ ಹಿಮಟೂರಿಸಂ ಕೇಂದ್ರಗಳೂ ಅಲ್ಲಿವೆ. ಹಿಮವನ್ನೇ ಹಾಸು ಹೊದ್ದ ದೇಶಕ್ಕೆ ಈಗ 47 ಡಿಗ್ರಿ ಸೆ. ಸೆಕೆಯ ಬಿಸಿಗಂಬಳಿ ಸುತ್ತಿಕೊಂಡಿದೆ. ಶಾಲೆ-ಕಾಲೇಜುಗಳು ಬಂದ್ ಆಗಿವೆ. ಕೆನಡಾದ ವ್ಯಾಂಕೊವರ್, ಅಮೆರಿಕದ ಪೋರ್ಟ್‌ಲ್ಯಾಂಡ್ ಮತ್ತು ಸಿಯಾಟ್ಲ್ ನಗರಗಳು ಸದ್ಯಕ್ಕೆ ಜಗತ್ತಿನ ಅತಿತಾಪದ ನಗರಗಳೆನಿಸಿವೆ.

ಅಲ್ಲಿನ ಈ ವಿಲಕ್ಷಣ ಉರಿವಲಯಕ್ಕೆ 'ಶಾಖ ಗೋಪುರ' (ಹೀಟ್ ಡೋಮ್) ಕಾರಣ ಎಂದು ಹವಾಮಾನ ತಜ್ಞರು ಹೇಳಿದ್ದಾರೆ. ಈ ವಿಶಾಲ ಗೋಪುರದೊಳಕ್ಕೆ ಮೋಡವಂತೂ ನುಗ್ಗಲಾರದು; ಕಡಲತೀರದ ತಂಪುಗಾಳಿಯೂ ಅದನ್ನು ಸುತ್ತುಬಳಸಿಕೊಂಡು ಹೋಗುತ್ತದೆ. ಅಲ್ಲಿ ಬದುಕಬೇಕೆಂದರೆ ಮತ್ತಷ್ಟು ಫಾಸಿಲ್ ಇಂಧನಗಳನ್ನು ಉರಿಸಬೇಕಾಗುತ್ತದೆ. ಎರಡು ವರ್ಷಗಳ ಹಿಂದೆ ಕತಾರ್ ದೇಶದಲ್ಲಿ ಇಂಥದೇ ಉರಿವಲಯ ಸೃಷ್ಟಿಯಾದಾಗ ಅಲ್ಲಿನ ರಾಜಧಾನಿ ದೋಹಾದಲ್ಲಿ ಮತ್ತಷ್ಟು ಪೆಟ್ರೋಲ್ ಉರಿಸಿ ಫುಟ್‌ಪಾತ್, ಕ್ರೀಡಾಂಗಣ ಸೇರಿದಂತೆ ನಗರದ ಬಹುಭಾಗಕ್ಕೆ ಏರ್‌ಕಂಡೀಶನಿಂಗ್ ಮಾಡಲಾಗಿತ್ತು. ಶ್ರೀಮಂತ ಸಮಾಜದ ಇಂಥ ಹೆಜ್ಜೆಗಳೇ ಭೂಮಿಯನ್ನು ಇನ್ನಷ್ಟು ಸಂಕಷ್ಟಕ್ಕೆ ತಳ್ಳುತ್ತವೆ ಎಂಬುದಕ್ಕೆ ಉದಾಹರಣೆ ಸಿಕ್ಕಿತ್ತು.

ಶಾಖಗೋಪುರದ ಮಾದರಿಯಲ್ಲೇ ಪ್ರಕೃತಿ ಸುಂಟರಗಾಳಿ, ನೆರೆಹಾವಳಿಯನ್ನೂ ಸೃಷ್ಟಿಸಿ ಲಾಕ್‌ಡೌನ್ ಘೋಷಣೆ ಮಾಡುತ್ತದೆ. ಅದಕ್ಕೆ ಬಲಿಯಾಗುವವರು ಮಾತ್ರ ಹೆಚ್ಚಾಗಿ ದುರ್ಬಲ ಜೀವಿಗಳೇ. ಹತ್ತಾರು ದಿನಗಳ ಕಾಲ ದಟ್ಟ ನಿಶ್ಚಲ ಹೊಂಜು ಮುಸುಕಿದ್ದರಿಂದ ಐದು ವರ್ಷಗಳ ಹಿಂದೆ ದಿಲ್ಲಿ ನಗರವೇ ಬಹುತೇಕ ಲಾಕ್‌ಡೌನ್ ಆಗಿತ್ತು. ಮನೆಯಲ್ಲಿದ್ದವರೂ ಮುಖವಾಡ ಧರಿಸಬೇಕಾದ ಸ್ಥಿತಿ ಬಂದಿತ್ತು. ದಿಲ್ಲಿಯ ಒಂದೆರಡು ಬಡಾವಣೆಗಳ ಹೊಗೆಯನ್ನೆಲ್ಲ ಹೀರಿ ತೆಗೆಯಲೆಂದು ಈಗ ಕುತುಬ್ ಮಿನಾರ್ ಮಾದರಿಯ 25 ಮೀಟರ್ ಎತ್ತರದ ಎರಡು ಗೋಪುರಗಳು ಅಲ್ಲಿ ತಲೆ ಎತ್ತಿವೆ. ಭಾರೀ ಗಾತ್ರದ ಫ್ಯಾನ್‌ಗಳು ಹೊಗೆಯನ್ನು ಒಳಕ್ಕೆಳೆದು ಸೋಸಿ ಬಿಡುತ್ತ ಉಲ್ಟಾ ಶ್ವಾಸಕೋಶಗಳಂತಿರುತ್ತವೆ. ಎಲ್ಲ ಸರಿಹೋದರೆ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದಂದು ಅವು ಕೆಲಸ ಆರಂಭಿಸುತ್ತವಂತೆ.

ಶ್ವಾಸಕೋಶಕ್ಕೆ ಯಂತ್ರಗಳ ಮೂಲಕ ಆಮ್ಲಜನಕವನ್ನು ತುಂಬಿದ ನಾವು, ಈಗ ಇಡೀ ನಗರಕ್ಕೆ ಕೃತಕ ಶ್ವಾಸಕೋಶಗಳನ್ನು ಜೋಡಿಸುವ ಹೊಸಯುಗಕ್ಕೆ ಪದಾರ್ಪಣೆ ಮಾಡಲಿದ್ದೇವೆ.



## ಚುರುಮುರಿ



### ಮಂಕು ಬಡಿಯಿತು

• ಪ್ರೊ. ಎಸ್.ಬಿ.ರಂಗನಾಥ್

**ಹೊಸದಾಗಿ** ಪ್ರಾರಂಭವಾಗಿದ್ದ ಟಿ.ವಿ ಚಾನೆಲ್‌ಗೆ ರಿಪೋರ್ಟರ್ ಆಗಿ ಸೇರಿದ್ದ ಸೋಮು ಅತ್ಯುತ್ಸಾಹದಿಂದ ಕೆಲಸ ಮಾಡುತ್ತಿದ್ದ. ಕೋವಿಡ್ ಸಂಕಟದಲ್ಲಿ ಅಪಾಯವನ್ನು ಲೆಕ್ಕಿಸದೆ ಕೊರೊನಾ ಸೋಂಕಿತರ ಸಂದರ್ಶನ ಮಾಡಿದ್ದ. ಅಧಿಕಾರಿಗಳನ್ನು ಭೇಟಿ ಮಾಡಿ ಸೋಂಕಿತರು, ಬಿಡುಗಡೆಗೊಂಡವರು, ಮೃತರ ಸಂಖ್ಯೆಯನ್ನು ಕೊಡುತ್ತಿದ್ದ. ಅವನ ಚಾನೆಲ್‌ನ ಟಿಆರ್‌ಪಿ ಹೆಚ್ಚಿತ್ತು. ಅವನ ಸಂಪಾದಕರು ಸದ್ಯದಲ್ಲೇ ಅವನಿಗೆ ಬಡ್ತಿ ನೀಡುವ ಭರವಸೆಯನ್ನು ಕೊಟ್ಟಿದ್ದಾರೆಂದು ಹಿಂದಿನ ರಾತ್ರಿ ಹೆಂಡತಿಯಲ್ಲಿ ಹೆಮ್ಮೆಯಿಂದ ಹೇಳಿಕೊಂಡಿದ್ದ.

ಆದರೆ ಇವತ್ತು ಯಾಕೋ ಮಂಕು ಬಡಿದವನಂತೆ ಕುಳಿತಿದ್ದುದನ್ನು ಕಂಡು ಹೆಂಡತಿ ಕೇಳಿದಳು- 'ಕೊರೊನಾ ರೂಪಾಂತರಿ ಡೆಲ್ಟಾ ತಳಿ ನೂರು ದೇಶಗಳಲ್ಲಿ ಹರಡ್ತಿದೇಂತ ಚಿಂತೆ ಏನ್ರೀ?'

'ಬರೀ ಡೆಲ್ಟಾ ಅಷ್ಟೇ ಅಲ್ಲ– ಆಲ್ಫಾ, ಬೀಟಾ, ಗಾಮಾ ಅಂತ ಇನ್ನೂ ಹಲವಾರು ಅಪಾಯಕಾರಿ ತಳಿಗಳಿವೆ' ಎಂದ ಸೋಮು.

'ನೀವು ಟೀವಿ ರಿಪೋರ್ಟರ್, ಸರ್ವಜ್ಞರಿದ್ದಂತೆ. ಯಾವ ತಳಿ ಆದ್ರೂ ಎಲ್ಲವನ್ನೂ ಏರಿದ ದನಿಯಲ್ಲಿ ಘೋಷಿಸ್ತೀರಿ. ನಾವೆಲ್ಲ ಅದನ್ನ ಬಾಯ್ಬಿಟ್ಟುಕೊಂಡು ನೋಡಿ ನಂಬ್ತೀವಲ್ಲಾ, ಯಾಕೆ ಚಿಂತೆ?'

'ಅಲ್ಲ, ಅದಲ್ಲ'.

'ಪೆಟ್ರೋಲ್, ಡೀಸೆಲ್ ಜೊತೆಗೆ ಅಡುಗೆ ಗ್ಯಾಸ್ ಸಿಲಿಂಡರ್ ಬೆಲೇನೂ ಹೆಚ್ಚಾಗಿದ್ದಕ್ಕಾ?'

'ಉಹ್ಞೂಂ.

'ಮತ್ತೆ ಯಾವ್ದುರೀ? ಬೀದಿನಾಯಿಗಳಿಗೆ ಆಹಾರ ಕೊಡ್ಬೇಕೂಂತ ದೆಹಲಿ ಹೈಕೋರ್ಟ್ ಆದೇಶ ನೀಡಿದೆಯಂತಾನಾ?'

'ಮಹರಾಯ್ತಿ, ನಿಂಗೆ ಯಾವಾಗ್ಲೂ ತಮಾಷೇನೆ? ನೋಡಿಲ್ಲಿ...' ಎಂದ ಸೋಮು ಪತ್ರಿಕೆ ಮುಂದೆ ಹಿಡಿದ– 'ಸುದ್ದಿ ವೈಭವೀಕರಣ ಬೇಡ' ಎಂದು ಅಲಹಾಬಾದ್ ಹೈಕೋರ್ಟ್ ನೀಡಿದ ತೀರ್ಪಿನ ವಿವರಗಳಿದ್ದವು. ಲಖನೌ ಸಚಿವಾಲಯದ ಮುಂದೆ ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿಯ ರಕ್ಷಣೆಗೆ ಮುಂದಾಗದೆ, ಇಬ್ಬರು ಪತ್ರಕರ್ತರು ಅದರ ಚಿತ್ರೀಕರಣದಲ್ಲಿ ನಿರತರಾಗಿದ್ದುದನ್ನು ನ್ಯಾಯಾಲಯ ಖಂಡಿಸಿ ಅವರ ಜಾಮೀನು ಅರ್ಜಿಯನ್ನು ತಳ್ಳಿಹಾಕಿತ್ತು.

ಹೆಂಡತಿ 'ಈ ಆದೇಶ ಪಾಲಿಸಿದರೆ ಸದ್ಯಕ್ಕಂತೂ ನಿಮಗೆ ಪ್ರೊಮೋಷನ್ ಇಲ್ಲ ಬಿಡಿ' ಎಂದು ನಕ್ಕಳು.

## ಸಂಗತ

# ಕಲಿಕೆಯ ಖಾತೆಗೆ ತುಂಬಿಸಿ ನಿಮ್ಮದೇ ಹಣ

### ಪ್ರಿಯ ವಿದ್ಯಾರ್ಥಿಗಳೇ, ನೀವೀಗ ತಾಂತ್ರಿಕವಾಗಿ ಪಾಸ್ ಆಗಿರಬಹುದು. ಆದರೆ...

• ಡಾ. ನಾಗೇಶ್ ಬಿದರಗೋಡು

**'ಹೇಳಿಕೊಟ್ಟ** ಮಾತು, ಕಟ್ಟಿಕೊಟ್ಟ ಬುತ್ತಿ ಹೆಚ್ಚುಕಾಲ ಬರುವುದಿಲ್ಲ' ಅಂತ ಒಂದು ಗಾದೆ ಮಾತಿದೆ. ಅವರು ಹಾಗೆ ಕೇಳಿದರೆ ನೀನು ಹೀಗೆ ಹೇಳು, ಅವರು ಹೀಗೆ ಕೇಳಿದರೆ ನೀನು ಹಾಗೆ ಹೇಳು ಅಂತ ಒಂದಷ್ಟು ಮಾತು ಹೇಳಿಕೊಟ್ಟು ನೋಡಿ. ಅದನ್ನೇ ನಂಬಿಕೊಂಡು ಹೋದವನು ಸೋತು ಬಂದಿರುತ್ತಾನೆ. ಏಕೆಂದರೆ, ಕೇಳಬೇಕಾದವರು ಹಾಗೆ ಕೇಳದೆ ಇನ್ನು ಹೇಗೋ ಕೇಳಿದರೆ ಇವನ ಬಳಿ ಉತ್ತರವಿಲ್ಲ. ಅದೇ ರೀತಿ ಕಟ್ಟಿಕೊಟ್ಟ ಬುತ್ತಿ ಕೂಡ. ಒಂದು ಅಥವಾ ಎರಡು ಹೊತ್ತಿಗೆ ಮುಗಿದು ಹೋಗುತ್ತದೆ. ಹಾಗಾಗಿ ನಾವೇ ಮಾತನ್ನು ಅರಿತು ಆಡುವುದನ್ನು ಕಲಿಯಬೇಕು, ಬುತ್ತಿಯನ್ನು ನಾವೇ ಮಾಡುವುದನ್ನು ಕಲಿಯಬೇಕು. ಆಗ ಮಾತ್ರ ಒಂದಷ್ಟು ಕಾಲ ಉಳಿಯಬಹುದು, ಮುಂದೆ ಹೋಗಬಹುದು.

ಹೌದು, ಕೊರೊನಾ ವೈರಾಣು ಬದುಕಿನ ವ್ಯವಸ್ಥೆಯನ್ನೇ ಅಡಿಮೇಲು ಮಾಡಿದೆ. ವ್ಯಾಪಾರ ವ್ಯವಹಾರದ ಮಾತಿರಲಿ, ಆಟ ಊಟ ಪಾಠದ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿದೆ. ನಮಗೆ ನಾವೇ ಹೇರಿಕೊಂಡ ಲಾಕ್‌ಡೌನ್‌ನಿಂದಾಗಿ ಒಂದಕ್ಕೊಂದು ಪೂರಕವಾಗಿದ್ದ ಬದುಕಿನ ಬಂಧಗಳೆಲ್ಲಾ ತುಂಡಾಗಿ ಚೆಲ್ಲಾಪಿಲ್ಲಿಯಾಗಿ ಹೋಗಿವೆ. ಮತ್ತೆ ಕೂಡಿಕೊಳ್ಳಲು ಒದ್ದಾಡಬೇಕಾಗಿದೆ. ನಮಗೆ ಬೇಕೋ ಬೇಡವೋ ಈ ಎಲ್ಲಾ ವಿಪರೀತಗಳ ಫಲವನ್ನು ನಾವು ಉಣ್ಣಲೇಬೇಕಾಗಿದೆ.

ದೇವಾಲಯಗಳು ಮುಚ್ಚಿದ್ದರೂ ಮನೆಯಲ್ಲೇ ಕುಳಿತು ಪ್ರಾರ್ಥಿಸಲಾಗಿದೆ. ಆದರೆ ಶಾಲಾಕಾಲೇಜುಗಳು ಮುಚ್ಚಿದ್ದರಿಂದ ಮಕ್ಕಳು ಒಂದು ಅಮೂಲ್ಯ ಅನುಭವದಿಂದ ವಂಚಿತರಾಗಿದ್ದಾರೆ. ಇದರ ಪರಿಣಾಮವು ಭವಿತವ್ಯದ ವಿದ್ಯಮಾನಗಳನ್ನು ನಿರ್ಧರಿಸುತ್ತದೆ ಎಂಬುದು ಅನೇಕರಿಗೆ ತಿಳಿದಿದೆ. ಶಾಲೆ ಕಾಲೇಜುಗಳು ಕೇವಲ ಇಟ್ಟಿಗೆ ಮೇಲೆ ಇಟ್ಟಿಗೆ ಇಟ್ಟು ಕಟ್ಟಿದ ಕಟ್ಟಡಗಳಲ್ಲ. ಅಲ್ಲಿ ಮನಸುಗಳು ಬೆರೆಯುತ್ತವೆ, ಕನಸುಗಳು ಅರಳುತ್ತವೆ, ಅನುಭವಗಳು ತೆರೆಯುತ್ತವೆ. ಇವೆಲ್ಲವೂ ವ್ಯಕ್ತಿತ್ವವೊಂದನ್ನು ರೂಪಿಸುತ್ತವೆ.

ಪರೀಕ್ಷೆಯ ಮಾದರಿಗಳ ಬಗ್ಗೆ ನಮಗೆ ಯಾವುದೇ ತಕರಾರುಗಳಿರಲಿ. ಆದರೆ ಪರೀಕ್ಷೆಯೆಂಬುದು ಶಾಲಾ ಕಾಲೇಜು ವಿದ್ಯಾರ್ಥಿಗಳನ್ನು ಜೀವಂತವಾಗಿ ಇರಿಸಿತ್ತು. ಪಠ್ಯಗಳು ಪ್ರಶ್ನೆಗಳಾಗಿ ಬರುತ್ತವೆ ಎಂದಾದರೂ ಮತ್ತೆ ಮತ್ತೆ ತಿರುವಿಹಾಕುವುದಿತ್ತು. ಈ ವರ್ಷ ಅದೂ ಇಲ್ಲವಾಗಿದೆ. ಮಾನವಿಕ ಶಾಸ್ತ್ರದ ಪಠ್ಯಗಳಿರಲಿ, ವಿಜ್ಞಾನ ವಿಷಯದ ಪ್ರಾಯೋಗಿಕ ಪಠ್ಯಗಳು ಕೂಡ ಪರೀಕ್ಷೆಯಿಲ್ಲದೆ ಹೋಗಿವೆ. ಬೇರು ನೆಲಕ್ಕಿಳಿಯದೆ ಹೂಬಿಟ್ಟರೆ ಅದು ಎಷ್ಟುಕಾಲ ಉಳಿಯಬಹುದೋ ತಿಳಿಯದಾಗಿದೆ. ಪರೀಕ್ಷೆಯೇ ಇಲ್ಲದೆ ಪಾಸ್ ಆಗುವ ಪ್ರಕ್ರಿಯೆ ನಡೆದಿರುವ ಈ ಹೊತ್ತಲ್ಲಿ, ಈ ಬಗ್ಗೆ ಸರಿತಪ್ಪುಗಳ ಆಚೆಗೆ ನಿಂತು ನಾವೆಲ್ಲರೂ ಯೋಚಿಸಬೇಕಾಗಿದೆ.

'ಹೀಗೇ ಇದ್ರೆ ನೀನು ಈ ವರ್ಷ ಫೇಲ್ ಆಗ್ತೀಯ' ಅಂತ ಪದೇಪದೇ ಹೇಳ್ತಿದ್ದ ಉಪನ್ಯಾಸಕರಿಗೆ ಆ ವಿದ್ಯಾರ್ಥಿ 'ನೋಡಿ ಸರ್, ನಾವು ಪರೀಕ್ಷೆನೇ ಇಲ್ಲದೆ ಪಾಸ್ ಆಗಿಬಿಟ್ಟೆವು' ಅಂತ ಬಹಳ ಖುಷಿಯಿಂದ ಹೇಳುವುದನ್ನು ಕೇಳಿ ಆತಂಕವಾಗುತ್ತಿದೆ. ಪಾಸ್ ಆಗಿರುವುದೇನೋ ಆ ಹುಡುಗನಿಗೆ ಖುಷಿಯಿರಬಹುದು. ತಾಂತ್ರಿಕ ಲೆಕ್ಕಾಚಾರದಲ್ಲಿ ಅವನು ಪಾಸ್ ಆಗಿರಬಹುದು. ಇದೊಂದು ಸಂಕೀರ್ಣ ಕಾಲ. ವಿದ್ಯಾರ್ಥಿಯೊಬ್ಬ ತನ್ನ ಕಲಿಕೆಯ ಪಾತ್ರೆಯನ್ನು ತನ್ನ ವಯೋಮಾನಕ್ಕೆ ತಕ್ಕಂತೆ ತುಂಬಿಕೊಳ್ಳದೆ ಹೊರಬರುತ್ತಿದ್ದಾನೇನೋ ಎಂಬ ಗುಮಾನಿ ಸದ್ಯದ ವಿದ್ಯಾರ್ಥಿಗಳ ಕಾರ್ಯನಿರ್ವಹಣೆಯನ್ನು ಕಂಡವರಿಗೆ ಕಾಡುತ್ತಿದೆ.

ಇದನ್ನು ತುಂಬುವುದು ಯಾರು? ಹೇಗೆ ಮತ್ತು ಯಾವಾಗ? ನಮ್ಮ ವ್ಯವಸ್ಥೆಯಲ್ಲಿ ಈ ಆನ್‌ಲೈನ್ ಪಾಠ ಎನ್ನುವುದು ದಿಢೀರ್ ಬಂದಿದ್ದರಿಂದ ನಮಗದು ಒಗ್ಗಿಬರಲಿಲ್ಲ. ಅದೂ ತಾಂತ್ರಿಕ ಲೆಕ್ಕಾಚಾರದ ಭಾಗವಾಗಿ ಉಳಿಯಿತೇ ಹೊರತು ಅದರ ಫಲಶ್ರುತಿ ತೀರಾ ಕೆಳಮಟ್ಟದ್ದು ಎಂದರೆ ತಪ್ಪಾಗಲಿಕ್ಕಿಲ್ಲ. ಖಾಸಗಿ ಶಾಲಾಕಾಲೇಜು ಮಕ್ಕಳ ವಿಚಾರ ಒಂದು ಕಡೆ ಇರಲಿ. ಸರ್ಕಾರಿ ಶಾಲಾಕಾಲೇಜಿನಿಂದ ಹೊರಬರುವ ಬಹಳಷ್ಟು ಮಕ್ಕಳು ವಾಸ್ತವದ ವ್ಯಾವಹಾರಿಕ ಜಗತ್ತಿನಲ್ಲಿ ಎಷ್ಟರಮಟ್ಟಿಗೆ ಗೆಲ್ಲಬಲ್ಲವರಾಗಿದ್ದಾರೆ ಎಂದು ಎಲ್ಲರೂ ಚಿಂತಿಸುತ್ತಿದ್ದಾರೆ. ಏಕೆಂದರೆ ಪಿಯುಸಿ ನಂತರ ಆತ ಎಂಜಿನಿಯರಿಂಗ್, ಮೆಡಿಕಲ್, ಕೃಷಿವಿಜ್ಞಾನ ಅಥವಾ ಸಾಮಾನ್ಯ ಪದವಿಗೆ ಹೋಗಬೇಕಾಗಿದೆ. ಹಿಂದಣ ಹೆಜ್ಜೆಯ ಬಲದಿಂದಲೇ ಮುಂದಣ ಹೆಜ್ಜೆ ಇಡಬೇಕಾಗಿರುತ್ತದೆ. ಕಳೆದ ಎರಡು ವರ್ಷಗಳ ನಮ್ಮ ಕಲಿಕೆಯ ಹೆಜ್ಜೆಗಳು ದುರ್ಬಲವಾಗಿರುವಾಗ ಮುಂದಣ ಹೆಜ್ಜೆಯ ನಿರೀಕ್ಷೆಗಳೇನು? ಇವು ಸದ್ಯದ ಪ್ರಶ್ನೆಗಳಾಗಿವೆ.



ಪ್ರಿಯ ವಿದ್ಯಾರ್ಥಿಗಳೇ... ನೀವೀಗ ತಾಂತ್ರಿಕವಾಗಿ ಪಾಸ್ ಆಗಿರಬಹುದು. ಆದರೆ ಬದುಕಿನ ಪ್ರಶ್ನೆಪತ್ರಿಕೆಗೆ ನೀವು ಉತ್ತರಿಸಲೇಬೇಕು. ಅಲ್ಲಿ ಪ್ರಯೋಗಶಾಲೆಯ ಕಲಿಕೆಯೂ ಬೇಕು, ಪಾಠಶಾಲೆಯ ಕಲಿಕೆಯೂ ಬೇಕು. ಒಂದೊಂದು ಪ್ರಶ್ನೆಗೆ ಬಹುಮಾದರಿಯ ಉತ್ತರಗಳಿಗೆ ತಯಾರಿ ಮಾಡಿಕೊಂಡಿರಬೇಕು. ಇಷ್ಟಾದರೂ ಒಮ್ಮೊಮ್ಮೆ ಕೊನೇ ಗಳಿಗೆಯಲ್ಲಿ ಪ್ರಶ್ನೆಪತ್ರಿಕೆಯ ವಿನ್ಯಾಸವೇ ಬದಲಾಗಬಹುದು. ಆಗ ಯಾರೂ ನಿಮ್ಮ ಕೈಹಿಡಿಯುವುದಿಲ್ಲ. ಈ ಎಚ್ಚರ ನಿಮಗಿದ್ದರೆ ಪರೀಕ್ಷೆಯಿಲ್ಲದೆ ಪಾಸ್ ಆದ ಬಗ್ಗೆ ಸಂಭ್ರಮಿಸದೆ, ಯಾವುದನ್ನು ಕಲಿಯಬೇಕೋ ಅದನ್ನು ಕಲಿಯಲು ಪ್ರಯತ್ನಿಸಿ. ದ್ವಿತೀಯ ಪಿಯುಸಿಯ ಕನ್ನಡ ಪಠ್ಯದಲ್ಲಿ 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಅನ್ನುವ ಪಾಠವೊಂದಿದೆ. ಅದರ ಆಶಯದಂತೆ, ನಿಮ್ಮ ನಾಳೆಗಳಿಗಾಗಿ ನೀವೇ ಸಿದ್ಧರಾಗಬೇಕು. ಯಾರನ್ನೂ ಯಾವುದನ್ನೂ ದೂರುವ ಸ್ಥಿತಿಯಲ್ಲಿ ಯಾರೂ ಇಲ್ಲದ ಕಾಲವಿದು.

ಆಕಸ್ಮಿಕವಾಗಿ ಅಕೌಂಟಿಗೆ ಬಂದು ಬಿದ್ದ ಹಣವನ್ನೇ ನೆಚ್ಚಿಕೊಳ್ಳಬೇಡಿ. ಅದು ಇನ್ಯಾರದೋ ಆಗಿದ್ದರೆ ನಿಮ್ಮ ಜೊತೆ ಖಾತೆಯಲ್ಲಿ ಬಹಳಕಾಲ ಉಳಿಯುವುದಿಲ್ಲ. ಹೀಗಾಗಿ ನಿಮ್ಮ ಖಾತೆಗೆ ನೀವೇ ದುಡಿದು ಡೆಪಾಸಿಟ್ ಮಾಡಿಕೊಳ್ಳಿ. ಕಲಿಕೆಯೆಂದರೆ ಅರಿವಿನ ಖಾತೆಯನ್ನು ತುಂಬಿಕೊಳ್ಳುವುದೇ ಆಗಿದೆ.

ಲೇಖಕ: ಉಪನ್ಯಾಸಕ, ಸರ್ಕಾರಿ ಪದವಿಪೂರ್ವ ಕಾಲೇಜು, ಶೆಟ್ಟಿಹಳ್ಳಿ, ಶಿವಮೊಗ್ಗ ತಾಲ್ಲೂಕು

## ವಾಚಕರ ವಾಣಿ

### ಮೂರನೇ ಅಲೆ ಎದುರಿಸಲು ಸಜ್ಜಾಗಿ

'ಕೊರೊನಾ ಮೂರನೇ ಅಲೆ ಆರಂಭವಾಗುವ ಮೊದಲು ಎರಡೂ ಡೋಸ್ ಲಸಿಕೆ ಪಡೆದರೆ ಒಳ್ಳೆಯದು, ಆದರೆ ಕನಿಷ್ಠ ಒಂದು ಡೋಸ್ ಲಸಿಕೆ ಪಡೆದಿದ್ದರೂ ಕೊರೊನಾ ವಿರುದ್ಧದ ಪ್ರತಿಕಾಯ ಸೃಷ್ಟಿಯಾಗಿರುತ್ತದೆ' ಎಂದು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಹೇಳಿದ್ದಾರೆ. ದೇಶದಲ್ಲಿ ಮೂರನೇ ಅಲೆ ಆಗಸ್ಟ್‌ನಲ್ಲಿ ದಾಳಿ ಮಾಡಬಹುದೆಂದು ತಜ್ಞರು ಅಂದಾಜಿಸಿದ್ದಾರೆ. ಎರಡನೇ ಅಲೆ ತೀವ್ರವಾಗಿದ್ದ ಸಂದರ್ಭದಲ್ಲಿ 18ರಿಂದ 44 ವರ್ಷದೊಳಗಿನವರಿಗೆ ಲಸಿಕೆ ಹಾಕುವ ಕುರಿತು ಸರ್ಕಾರ ಚಿಂತನೆ ಮಾಡಿತಾದರೂ ಸೂಕ್ತ ಪ್ರಮಾಣದಲ್ಲಿ ಲಸಿಕೆಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಇದರಿಂದ ಆ ವಯೋಮಾನದ ಬಹುತೇಕರಿಗೆ ಲಸಿಕೆ ಪಡೆಯಲು ಸಾಧ್ಯವಾಗಿಲ್ಲ. ಹೀಗಾಗಿ ಮೂರನೇ ಅಲೆ ಅವರನ್ನು ಹೆಚ್ಚಾಗಿ ಬಾಧಿಸುವ ಭೀತಿಯಿದೆ.

ಸರ್ಕಾರವು ಲಸಿಕೆ ವಿಷಯದಲ್ಲಿ ಗಂಭೀರ ಚಿಂತನೆ ಮಾಡಿ, ಲಸಿಕೆ ಹಾಕಿಸಿಕೊಳ್ಳದವರಿಗೆ ಆದಷ್ಟು ಶೀಘ್ರದಲ್ಲಿ ಲಸಿಕೆ ಕೊಡುವ ವ್ಯವಸ್ಥೆ ಮಾಡಬೇಕು.

**ಬಸವರಾಜ ಹುಡೇದಗಡ್ಡಿ,** ಬೆಂಗಳೂರು

### ದಲಿತ ಮುಖ್ಯಮಂತ್ರಿ: ಈಗಲೇ ಯಾಕಾಗದು?

ಜಾತಿ ಆಧಾರಿತ ಮುಖ್ಯಮಂತ್ರಿ ಆಯ್ಕೆ ಕುರಿತು ಚರ್ಚೆ ಶುರುವಾಗಿರುವುದು ದುರಂತವೇ ಸರಿ. ಆದರೆ ಈ ಚರ್ಚೆ ಮೊದಲು ಶುರುವಾಗಿದ್ದು ರಾಜ್ಯದ ಪ್ರಬಲ ಜಾತಿಗಳ ಮುಖಂಡರು ಮತ್ತು ಪಾರ್ಟ್‌ಟೈಮ್ ಮಠಾಧೀಶ ರಾಜಕಾರಣಿಗಳಿಂದ. ಆದ್ದರಿಂದ ಪ್ರಸ್ತುತ ತಳ ಸಮುದಾಯಗಳಿಂದಲೂ ಮುಖ್ಯಮಂತ್ರಿ ಸ್ಥಾನದ ಬೇಡಿಕೆ ಬಂದಿರುವುದು ಸಹಜ ಮತ್ತು ಅಗತ್ಯ ಕೂಡ. ಆದರೆ ವಿಚಿತ್ರವೆಂದರೆ ಸಂಖ್ಯಾಬಲವೇ ಇಲ್ಲದಿರುವ, ಅಧಿಕಾರದಿಂದ ದೂರವಿರುವ ಪಕ್ಷದಿಂದ ದಲಿತ ಮುಖ್ಯಮಂತ್ರಿಯಾಗಬೇಕು ಎಂದು ಚರ್ಚೆ ಶುರುವಾಗಿರುವುದು. ಕಾಂಗ್ರೆಸ್‌ನಲ್ಲಿ ರಾಜ್ಯದ ಮುಖ್ಯಮಂತ್ರಿಯಾಗುವಷ್ಟು ಪ್ರಬಲ ಮುತ್ಸದ್ದಿ ದಲಿತ ರಾಜಕಾರಣಿಗಳು ಇದ್ದಾರೋ ಇಲ್ಲವೋ ಅದು ಬೇರೆ ಪ್ರಶ್ನೆ. ಆದರೆ ಈಗ ಆಡಳಿತ ನಡೆಸುತ್ತಿರುವ ಬಿಜೆಪಿಯಲ್ಲಿ ದಲಿತ ನಾಯಕರು ಇಲ್ಲವೇ?

ಈಗ ಹೇಗಿದ್ದರೂ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಕುರಿತು ಚರ್ಚೆ ಶುರುವಾಗಿದೆ. ಹಾಗಾಗಿ ಬಿಜೆಪಿಯಿಂದ ಯಾಕೆ ದಲಿತ ಸಮುದಾಯಕ್ಕೆ ಸೇರಿದವರೊಬ್ಬರು ಮುಖ್ಯಮಂತ್ರಿಯಾಗಬಾರದು? ಆಗ ರಾಜ್ಯದಲ್ಲಿ ದಲಿತ ಮುಖ್ಯಮಂತ್ರಿಗಾಗಿ 2023ರವರೆಗೆ ಕಾಯಬೇಕಿಲ್ಲ, 2021ರಲ್ಲೇ ಅದು ಕಾರ್ಯರೂಪಕ್ಕೆ ಬರುತ್ತದೆ.

ಮುಂದಿನ ಚುನಾವಣೆಯಲ್ಲಿ ರಾಜ್ಯದ ಮೂರು ಪ್ರಮುಖ ಪಕ್ಷಗಳೂ ದಲಿತ ಸಮುದಾಯದ ನಾಯಕರನ್ನು ಮುಖ್ಯಮಂತ್ರಿ ಅಭ್ಯರ್ಥಿಗಳನ್ನಾಗಿ ಘೋಷಿಸಿ ಚುನಾವಣೆ ಎದುರಿಸಲಿ. ಆಗ ಯಾರಿಗೆ ಬಹುಮತ ಬರುತ್ತದೋ ಆ ಪಕ್ಷದಿಂದ ದಲಿತ ಮುಖ್ಯಮಂತ್ರಿಯಾಗಲಿ.

**ನಂದನ್ ಖಂಡೇನಹಳ್ಳಿ,** ಚಿತ್ರದುರ್ಗ

### ಸದ್ದು ಕೇಳುತ್ತಿಲ್ಲ...

ಮಂಡ್ಯ ಜಿಲ್ಲೆಯಲ್ಲಿ ಅಕ್ರಮ
ಗಣಿಗಾರಿಕೆಯ ಬಗೆಗೆ ನಿತ್ಯವೂ
ನಾಯಕರ ಆರೋಪ- ಪ್ರತ್ಯಾರೋಪ,
ಆದರೆ ಬಾನೆತ್ತರದ ಬೆಟ್ಟಗಳು ಮಾತ್ರ
ಕಣ್ಣೆದುರೇ ಕರಗಿಹೋಗುತ್ತಿರುವುದು
ಮಾತ್ರ ನಿಂತಿಲ್ಲ!
ಮನ್‌ಮುಲ್ ಬಗೆಗೆ ನಾಯಕರಲ್ಲೇ
ವಾದ- ಅಪವಾದ...
ಆದರಿನ್ನೂ ಹಾಲಿಗೆ ನೀರು ಬೆರೆಸುತ್ತಿರುವ
ಯಾರೊಬ್ಬರದೂ ಬಂಧನವಾಗಿಲ್ಲ!
ಕೆಆರ್‌ಎಸ್ ಅಣೆ ಸುರಕ್ಷತೆ ವಿಚಾರದಲ್ಲಂತೂ
ಶುರುವಾಗಿರುವ ಕೆಸರೆರಚಾಟದ ಗಲಾಟೆಯಲಿ
ಕಟ್ಟೆ ಸುತ್ತಮುತ್ತ ಸಿಡಿಯುತ್ತಿರುವ
ಮದ್ದಿನ ಸದ್ದು ಯಾರಿಗೂ ಕೇಳುತ್ತಲೇ ಇಲ್ಲ!

**ಜೆ.ಬಿ.ಮಂಜುನಾಥ,** ಪಾಂಡವಪುರ

### ಗಂಭೀರವಾಗಿ ಪರಿಗಣಿಸಿ ಸೋಮಿ...

'ಹಳ್ಳಿ ಆಸ್ಪತ್ರೆಗಳು ಹಾಸಿಗೆ ಹಿಡಿದಿವೆ ಸೋಮಿ...!' ಎಂಬ ಲೇಖನ (ಪ್ರ.ವಾ., ಜುಲೈ 7) ಸಮಯೋಚಿತವಾಗಿದೆ. ಕೊರೊನಾ ಸಾಂಕ್ರಾಮಿಕವು ಭಾರತದಲ್ಲಿನ, ವಿಶೇಷವಾಗಿ ಕರ್ನಾಟಕದಲ್ಲಿನ ಆರೋಗ್ಯ ಕೇಂದ್ರಗಳ ಸ್ಥಿತಿಗತಿಗೆ ಕನ್ನಡಿ ಹಿಡಿದಿದೆ. ಆರೋಗ್ಯ ವ್ಯವಸ್ಥೆಯ ವಿಷಯದಲ್ಲಿ ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡಿದೆ. ವಿಶ್ವ ಆರೋಗ್ಯ ಸಂಸ್ಥೆ ವರದಿಯ ಪ್ರಕಾರ, ಚೀನಾ ಪ್ರತೀ 10,000 ರೋಗಿಗಳಿಗೆ ಕನಿಷ್ಠ 43.1ರಷ್ಟು ಹಾಸಿಗೆಗಳನ್ನು ಹೊಂದಿದ್ದರೆ, ಭಾರತವು ಕೇವಲ 5.3ರಷ್ಟು ಹಾಸಿಗೆಗಳನ್ನು ಹೊಂದಿದೆ. ಇದು ಚಿಂತಿಸಬೇಕಾದ ವಿಷಯ. ಭಾರತವು ಜಾಗತಿಕ ಶಕ್ತಿಯಾಗಿ ತನ್ನನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿರುವ ರಾಷ್ಟ್ರವಾಗಿದೆ. ಈ ಕನಸನ್ನು ಸಾಕಾರಗೊಳಿಸಲು ಆರೋಗ್ಯ ವ್ಯವಸ್ಥೆಗೆ ಬಜೆಟ್‌ನಲ್ಲಿ ಹೆಚ್ಚಿನ ಹಣ ಮೀಸಲಿಡುವುದು ಮತ್ತು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಬಲವರ್ಧನೆ ಮಾಡಬೇಕಾದುದು ಅತ್ಯಗತ್ಯ. ಲೇಖಕರು ನೀಡಿರುವ ಗರ್ಭಿಣಿಯೊಬ್ಬರ ಉದಾಹರಣೆಯು ಸರ್ಕಾರವು ಆರೋಗ್ಯ ವ್ಯವಸ್ಥೆಗೆ ನೀಡಿದ ಪ್ರಾಮುಖ್ಯತೆಯ ಬಗೆಗೆ ಬೆಳಕು ಚೆಲ್ಲುತ್ತದೆ.


**ರಮೇಶ್ ಪುಟ್ಟರಾಜು,** ಬೆಂಗಳೂರು

### ಪೂರ್ವಗ್ರಹಪೀಡಿತ ಹೇಳಿಕೆ ನಿಲ್ಲಿಸಿ

ಮಂಡ್ಯ ಜಿಲ್ಲೆಯ ಜೀವನಾಡಿಯಾಗಿರುವ ಕೃಷ್ಣರಾಜಸಾಗರ ಅಣೆಕಟ್ಟಿನ ಸುರಕ್ಷತೆಯ ವಿಷಯದಲ್ಲಿನ ಊಹಾಪೋಹದ ವರದಿಗಳಿಗೆ ಸಂಬಂಧಪಟ್ಟಂತೆ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಸಂಸದೆ ಸುಮಲತಾ ಅಂಬರೀಷ್ ಅವರ ವಿರುದ್ಧ ಬಳಸಿರುವ ಭಾಷೆ ಅತ್ಯಂತ ಕೀಳು ಮಟ್ಟದ್ದು ಎಂದು ವಿಷಾದಪೂರ್ವಕವಾಗಿ ಹೇಳಬೇಕಾಗಿದೆ. ಮುಖ್ಯಮಂತ್ರಿಯಂತಹ ಉನ್ನತ ಹುದ್ದೆಯನ್ನು ಅಲಂಕರಿಸಿದ್ದ ವ್ಯಕ್ತಿ ಇಂತಹ ಹೇಳಿಕೆ ನೀಡುತ್ತಾರೆಂದು ಯಾರೂ ಊಹಿಸಿರಲಿಲ್ಲ. ಕೆಆರ್‌ಎಸ್ ಬಿರುಕು ಬಿಟ್ಟಿದೆ ಎಂಬರ್ಥದ ಸುಮಲತಾ ಅವರ ಹೇಳಿಕೆಗೆ ಉತ್ತರ ನೀಡುವ ಭರದಲ್ಲಿ 'ಕೆಆರ್‌ಎಸ್‌ನಲ್ಲಿ ಲೀಕೇಜ್ ಆಗುತ್ತಿದ್ದರೆ, ಅದನ್ನು ತಡೆಯಲು ಸುಮಲತಾ ಅವರನ್ನೇ ಅಡ್ಡಲಾಗಿ ಮಲಗಿಸಿ' ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಒಬ್ಬ ಲೋಕಸಭಾ ಸದಸ್ಯೆಯ ಬಗ್ಗೆ ಹೀಗೆ ಅಗೌರವಯುತವಾದ ಹೇಳಿಕೆ ನೀಡುವುದು ತೀವ್ರ ಖಂಡನಾರ್ಹ. ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಸುಮಲತಾ ಅವರ ವಿರುದ್ಧ ತಮ್ಮ ಮಗ ನಿಖಿಲ್ ಅನುಭವಿಸಿದ ಸೋಲಿನಿಂದ ಹತಾಶರಾಗಿರುವ ಕುಮಾರಸ್ವಾಮಿ, ಸುಮಲತಾ ವಿರುದ್ಧ ನಿರಂತರವಾಗಿ ಪೂರ್ವಗ್ರಹಪೀಡಿತ ಹೇಳಿಕೆಗಳನ್ನು ನೀಡುತ್ತಿರುವುದನ್ನು ಜನಸಾಮಾನ್ಯರು, ವಿಶೇಷವಾಗಿ ಮಂಡ್ಯದ ಜನ ಗಮನಿಸುತ್ತಾ ಬಂದಿದ್ದಾರೆ. ಇನ್ನು ಮುಂದಾದರೂ ಅವರು ಇಂತಹ ಹೇಳಿಕೆಗಳನ್ನು ನೀಡುವುದನ್ನು ನಿಲ್ಲಿಸಲಿ.

**ಕೆ.ವಿ.ವಾಸು,** ಮೈಸೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 


ಲತಾ ಮಂಗೇಶ್ಕರ್, ಅಮಿತಾಭ್ ಬಚ್ಚನ್ ಜೊತೆ...



ಪಾರ್ಥಿವ ಶರೀರಕ್ಕೆ ತ್ರಿವರ್ಣ ಧ್ವಜ ಹೊದಿಸಲಾಯಿತು


ಸಾಯಿರಾ ಬಾನು ಅವರನ್ನು ಸಂತೈಸುತ್ತಿರುವ ಶಾರುಖ್ ಖಾನ್



ಮೇಣದ ಬತ್ತಿ ಹಚ್ಚಿ ಅಭಿಮಾನಿಗಳಿಂದ ಅಂತಿಮ ನಮನ

# ತಾರಾಪಟ್ಟ, ಪ್ರತಿಭೆ ಸಂಗಮಿಸಿದ ದೈತ್ಯ ನಟ



## ವರ್ಣರಂಜಿತ ಬದುಕಿನ ಹಿನ್ನೋಟ

**1922:** ಡಿಸೆಂಬರ್ 11ರಂದು ಪಾಕಿಸ್ತಾನದ ಪೆಶಾವರದಲ್ಲಿ ಜನನ. 12 ಮಕ್ಕಳಲ್ಲಿ ಇವರೂ ಒಬ್ಬರು. ತಂದೆ ಹಣ್ಣು ವ್ಯಾಪಾರಿ ಲಾಲ್ ಗುಲಾಮ್ ಸರ್ವಾರ್, ತಾಯಿ ಆಯಿಷಾ ಬೇಗಂ. ಮೊದಲ ಹೆಸರು ಮೊಹಮ್ಮದ್ ಯೂಸುಫ್ ಖಾನ್. ಮುಂಬೈಗೆ ವಲಸೆ, ಬ್ರಿಟಿಷ್ ಸೇನಾ ಕ್ಯಾಂಟೀನ್‌ನಲ್ಲಿ ಕೆಲಸ

**1943:** ನಟಿ ದೇವಿಕಾ ರಾಣಿ ಹಾಗೂ ಅವರ ಪತಿ ಹಿಮಾಂಶು ರಾಯ್ ಭೇಟಿ. ಇವರ ಒಡೆತನದ ಬಾಂಬೆ ಟಾಕೀಸ್‌ನಲ್ಲಿ ಅಭಿನಯ ಮಾಡಲು ಅವಕಾಶ. 'ದಿಲೀಪ್ ಕುಮಾರ್' ಎಂದು ಹೆಸರು ಬದಲಿಸಿಕೊಳ್ಳಲು ದೇವಿಕಾರಾಣಿ ಸಲಹೆ. ಮೊದಲ ಚಿತ್ರ 'ಜ್ವರ್ ಭಾಟಾ'ದಲ್ಲಿ ಅಭಿನಯ

**1947:** ಅಪಾರ ಜನಮನ್ನಣೆ ಗಳಿಸಿದ 'ಜುಗ್ನು' ಚಿತ್ರದಲ್ಲಿ ಅಭಿನಯ

**1949:** ತಾರಾಪಟ್ಟ ತಂದುಕೊಟ್ಟ ಮೆಹಬೂಬ್ ಖಾನ್ ಅವರ 'ಅಂದಾಜ್' ಚಿತ್ರ. ರಾಜ್ ಕಪೂರ್ ಜೊತೆ ನಟನೆ

**1952:** ಅತ್ಯುತ್ತಮ ನಟನೆಗೆ ಮೊದಲ ಫಿಲ್ಮ್‌ಫೇರ್ ಪ್ರಶಸ್ತಿ ತಂದುಕೊಟ್ಟ 'ದಾಗ್' ಚಿತ್ರ. ಒಟ್ಟು 8 ಫಿಲ್ಮ್‌ಫೇರ್ ಪ್ರಶಸ್ತಿ ಪಡೆದು ಗಿನ್ನಿಸ್ ದಾಖಲೆಗೆ ಸೇರ್ಪಡೆ

**1955-1960:** ಆಜಾದ್, ಇನ್ಸಾನಿಯತ್, ಕೊಹಿನೂರ್, ಮೊಘಲ್–ಎ ಆಜಮ್‌ನಂತ ಹಿಟ್ ಚಿತ್ರಗಳಲ್ಲಿ ಅಭಿನಯ

**1966:** ತಮಗಿಂತ 20 ವರ್ಷ ಚಿಕ್ಕವರಾದ ನಟಿ ಸಾಯಿರಾ ಬಾನು ಜೊತೆ ಅಕ್ಟೋಬರ್ 11ರಂದು ವಿವಾಹ

**1980:** ಅಸ್ಮಾ ರೆಹಮಾನ್ ಎಂಬುವರ ಜೊತೆ ಎರಡನೇ ಮದುವೆ

**1981:** ಕೆಲಕಾಲದ ವಿರಾಮದ ಬಳಿಕ 'ಕ್ರಾಂತಿ' ಸಿನಿಮಾದ ಮೂಲಕ ಮತ್ತೆ ತೆರೆಗೆ. 1982ರಲ್ಲಿ ವಿಧಾತಾ, ಶಕ್ತಿ, 1986ರಲ್ಲಿ ಕರ್ಮ, 1991ರಲ್ಲಿ ಸೌದಾಗರ್ ಸಿನಿಮಾಗಳಲ್ಲಿ ಅಭಿನಯ

**1991:** ಪದ್ಮಭೂಷಣ ಪ್ರಶಸ್ತಿ

**1994:** ಜೀವಮಾನದ ಸಾಧನೆಗಾಗಿ 'ಫಿಲ್ಮ್‌ಫೇರ್ ಪ್ರಶಸ್ತಿ'

**1995:** ಚಿತ್ರರಂಗದ ಅತ್ಯುನ್ನತ 'ದಾದಾಸಾಹೇಬ್ ಫಾಲ್ಕೆ' ಪ್ರಶಸ್ತಿ

**1998:** ಕೊನೆಯ ಚಿತ್ರ 'ಖಿಲಾ'

**1998:** ಪಾಕಿಸ್ತಾನದ ಅತ್ಯುನ್ನತ ಪ್ರಶಸ್ತಿ 'ನಿಶಾನ್–ಎ–ಇಮ್ತಿಯಾಜ್' ಗೌರವ. ಈ ಗೌರವ ಪಡೆದ ಎರಡನೇ ಭಾರತೀಯ

**2000-2006:** ರಾಜ್ಯಸಭೆ ಸದಸ್ಯತ್ವ

**2021:** ಜುಲೈ 7ರಂದು ಮುಂಬೈನ ಹಿಂದುಜಾ ಆಸ್ಪತ್ರೆಯಲ್ಲಿ ತಮ್ಮ 98ನೇ ವಯಸ್ಸಿನಲ್ಲಿ ನಿಧನ

• ಬಿ.ಎಂ. ಹನೀಫ್


**1943**ರ ಒಂದು ಮಧ್ಯಾಹ್ನ. ಪುಣೆಯಲ್ಲಿ ಓಡಾಡುತ್ತಿದ್ದ 'ಬಾಂಬೆ ಟಾಕೀಸ್' ಮಾಲೀಕರಾದ ಹಿಮಾಂಶು ರಾಯ್ ಮತ್ತು ದೇವಿಕಾ ರಾಣಿ, ಔಂಧ್ ಮಿಲಿಟರಿ ಕ್ಯಾಂಟೀನ್‌ನಲ್ಲಿ 21 ಹರೆಯದ ಸ್ಫುರದ್ರೂಪಿ ಹುಡುಗನೊಬ್ಬನನ್ನು ನೋಡಿದರು. ಪಠಾಣ್ ನಿಲುವಿನ ದೃಢಕಾಯದ ಆ ತರುಣನನ್ನು 'ಯಾರು ನೀನು?' ಎಂದು ವಿಚಾರಿಸಿದಾಗ, 'ನಾನು ಮೊಹಮ್ಮದ್ ಯೂಸುಫ್ ಖಾನ್. ಇಲ್ಲೊಂದು ಕ್ಯಾಂಟೀನ್ ನಡೆಸುತ್ತಿದ್ದೇನೆ. ಜೊತೆಗೆ ಡ್ರೈಫ್ರುಟ್ಸ್ ವ್ಯಾಪಾರವನ್ನೂ ಮಾಡುತ್ತಿದ್ದೇನೆ' ಎಂದನಾತ. 'ಸಿನಿಮಾ ಹೀರೋ ತರಹ ಇದ್ದೀಯಲ್ಲಪ್ಪಾ.. ಮುಂಬೈಗೆ ಬರ್ತೀಯಾ?' ಎಂದು ದೇವಿಕಾರಾಣಿ ಕೇಳಿದಾಗ, 'ನಾನು ಮುಂಬೈಯಿಂದಲೇ ಇಲ್ಲಿಗೆ ಬಂದಿದ್ದೇನೆ. ನಮ್ಮಪ್ಪನಿಗೆ ಪೆಶಾವರದಲ್ಲಿ ಮತ್ತು ಮಹಾರಾಷ್ಟ್ರದ ದೇವಲಾಲಿ ಬಳಿ ಹಣ್ಣಿನ ತೋಟಗಳಿವೆ' ಎಂದು ಆತ ಉತ್ತರಿಸಿದ.

ಅವತ್ತಿನದು ಒಂದು ಆಕಸ್ಮಿಕ ಭೇಟಿ. ಮುಂದೊಂದು ದಿನ ಈ ಭೇಟಿಯೇ ಮಹಾನಟನೊಬ್ಬನನ್ನು ಬಾಲಿವುಡ್‌ಗೆ ಕೊಡುಗೆಯಾಗಿಸಲಿದೆ ಎನ್ನುವುದು ಇಬ್ಬರಿಗೂ ಗೊತ್ತಿರಲಿಲ್ಲ. ತರುಣನಿಗೆ ಸಿನಿಮಾ ಬಯಕೆಯಿದೆ ಎನ್ನುವುದು ಮಾತ್ರ ಖಚಿತವಾಗಿತ್ತು. ಹಾಗೆ ಮುಂಬೈಗೆ ಮರಳಿದ ಯೂಸುಫ್ ಖಾನ್, 1944 ರಲ್ಲಿ ಬಾಂಬೆ ಟಾಕೀಸ್ ನಿರ್ಮಿಸಿದ 'ಜ್ವಾರ್ ಭಾಟಾ' ಎಂಬ ಸಿನಿಮಾದಲ್ಲಿ ಹೀರೋ ಆದ. ಬೆಳ್ಳಿತೆರೆಯ ಮೇಲೆ ಆಗ ಮೂಡಿಬಂದ ಆತನ ಹೆಸರು ದಿಲೀಪ್ ಕುಮಾರ್.

ಮೊದಲ ಸಿನಿಮಾ ಥಿಯೇಟರಿನಲ್ಲಿ ಹೆಚ್ಚು ಜನರ ಕಣ್ಣಿಗೆ ಬೀಳಲಿಲ್ಲ. ಆದರೆ ಇನ್ನೊಂದು ಸಿನಿಮಾದಲ್ಲಿ ಅವಕಾಶ ಸಿಕ್ಕಿತು. 'ಪ್ರತಿಮಾ' ಎನ್ನುವುದು ಆ ಸಿನಿಮಾದ ಹೆಸರು. ಮರುವರ್ಷ ಬಿಡುಗಡೆಯಾದ ಆ ಚಿತ್ರವೂ ಥಿಯೇಟರ್‌ನಲ್ಲಿ ಮಕಾಡೆ ಮಲಗಿತು. ಈ ಹುಡುಗನ ಚಿತ್ರಪಯಣದ ಆರಂಭವೇ ಸರಿಯಿಲ್ಲ ಎಂದು ಬಾಲಿವುಡ್ ಮಂದಿ ಆಡಿಕೊಂಡರು. ಅದಕ್ಕೆ ತಕ್ಕಂತೆ ಮುಂದಿನ ವರ್ಷ ಆತ ನಟಿಸಿದ ಯಾವ ಸಿನಿಮಾವೂ ಬರಲಿಲ್ಲ.

1947ರಲ್ಲಿ ತೆರೆಗೆ ಬಂದದ್ದು 'ಜುಗ್ನು'. ಪ್ರೇಕ್ಷಕರು ಸಾಲುಗಟ್ಟಿ ಥಿಯೇಟರಿಗೆ ಬಂದರು. ದಿಲೀಪ್ ಕುಮಾರ್‌ಗೆ ನೂರ್‌ಜಹಾನ್ ಜೋಡಿ. ಪ್ರೇಕ್ಷಕರ ಮನಸೂರೆಗೊಂಡ ಚಿತ್ರ ಸೂಪರ್ ಹಿಟ್ ಆಯಿತು. 'ಯಹಾಂ ಬದ್ಲಾ ವಫಾ ಕಾ ಬೇವಫಾಯಿ ಕೆ ಶಿವಾ ಔರ್ ಕ್ಯಾ ಹೈ...' - ಮೊಹಮ್ಮದ್ ರಫಿ ಮತ್ತು ನೂರ್‌ಜಹಾನ್ ಕಂಠಸಿರಿ! ಅಲ್ಲಿಂದ ಶುರುವಾಯಿತು ಬಾಲಿವುಡ್‌ನಲ್ಲಿ ಯಶಸ್ಸಿನ ಪಯಣ. 48ರಲ್ಲಿ 'ಶಹೀದ್' ಬಂತು. 49ರಲ್ಲಿ 'ಅಂದಾಜ್'. ಎರಡೂ ಪ್ರೇಕ್ಷಕರ ಮನ ಗೆದ್ದವು. 'ಅಂದಾಜ್'ನಲ್ಲಿ ರಾಜ್ ಕಪೂರ್ ಮತ್ತು ನರ್ಗಿಸ್ ದತ್ ಜೊತೆಗೆ ತ್ರಿಕೋನ ಪ್ರೇಮಕಥೆ. ಮಹಾಪ್ರತಿಭೆಗಳ ಮುಖಾಮುಖಿ. ಆ ವರ್ಷ ಹಿಂದಿ ಚಿತ್ರರಂಗದಲ್ಲಿ ಅತ್ಯಧಿಕ ಹಣ ಬಾಚಿದ ಚಿತ್ರವದು. ಅಲ್ಲಿಂದಾಚೆಗೆ ಆನೆ ನಡೆದದ್ದೇ ದಾರಿ. 50ರ ದಶಕದಲ್ಲಿ ಬಂದ ಜೋಗನ್, ದೀದಾರ್, ದಾಗ್, ದೇವದಾಸ್, ಯೆಹೂದಿ- ಎಲ್ಲವೂ ಹಿಟ್ ಚಿತ್ರಗಳೇ. ನರ್ಗಿಸ್, ಕಾಮಿನಿ ಕೌಶಲ್, ಮೀನಾ ಕುಮಾರಿ, ಮಧುಬಾಲಾ, ವೈಜಯಂತಿಮಾಲಾ- ಹೀಗೆ ಬಾಲಿವುಡ್‌ನ ಸಾಲು ಸಾಲು ಸುಂದರಿಯರಿಗೆ ದಿಲೀಪ್ ಕುಮಾರ್ ನಾಯಕ. ಪ್ರೇಮ- ತ್ಯಾಗದ ಅಮರ ಕಥಾನಕಗಳಲ್ಲಿ ಲಕ್ಷಾಂತರ ಪ್ರೇಕ್ಷಕರ ಮನಸೂರೆಗೊಂಡ ದಿಲೀಪ್ ಕುಮಾರ್‌ಗೆ ಬಾಲಿವುಡ್‌ನ 'ಟ್ರ್ಯಾಜಿಡಿ ಕಿಂಗ್' ಎಂಬ ಬಿರುದೂ ಅಂಟಿಕೊಂಡಿತು.

'ದಾಗ್' ಚಿತ್ರದ ನಟನೆಗಾಗಿ ಮೊತ್ತಮೊದಲ ಫಿಲಂಫೇರ್ ಪ್ರಶಸ್ತಿ ಗೆದ್ದುಕೊಂಡ ದಿಲೀಪ್ ಕುಮಾರ್, ಬಳಿಕ ನಿರಂತರವಾಗಿ ಎಂಟು ವರ್ಷ ಅದೇ ಪ್ರಶಸ್ತಿಯನ್ನು ಗೆದ್ದುಕೊಂಡು ದಾಖಲೆ ನಿರ್ಮಿಸಿದರು. ಆನ್, ಆಜಾದ್, ನಯಾದೌರ್, ಕೊಹಿನೂರ್, ಮೊಘಲ್ ಎ ಆಜಮ್, ರಾಮ್ ಔರ್ ಶಾಮ್- ಹೀಗೆ ಸಾಲು ಸಾಲು ಸೂಪರ್‌ಹಿಟ್ ಚಿತ್ರಗಳು ದಿಲೀಪ್ ಸಾಹೇಬ್‌ರನ್ನು ಬಾಲಿವುಡ್‌ನ 'ಅನಭಿಷಿಕ್ತ ದೊರೆ'ಯಾಗಿಸಿದವು.


**ಒಂದು ಅಪರೂಪದ ಚಿತ್ರ...**
'ಗುರು ಶಿಷ್ಯರು' ಚಿತ್ರದ ಚಿತ್ರೀಕರಣದ ವೇಳೆ ಸೆಟ್‌ಗೆ ಭೇಟಿ ನೀಡಿದ್ದ ದಿಲೀಪ್ ಕುಮಾರ್ ಚಿತ್ರದ ನಿರ್ದೇಶಕ ಭಾರ್ಗವ, ನಿರ್ಮಾಪಕ ದ್ವಾರಕೀಶ್, ಛಾಯಾಗ್ರಾಹಕ ಡಿ.ವಿ.ರಾಜಾರಾಂ ಜೊತೆಗಿದ್ದರು.
ಚಿತ್ರ: ಪ್ರಗತಿ ಅಶ್ವತ್ಥನಾರಾಯಣ


ಪಾಕಿಸ್ತಾನದ ಪೆಶಾವರದಲ್ಲಿರುವ ದಿಲೀಪ್ ಕುಮಾರ್ ಅವರ ಪೂರ್ವಜರ ಮನೆ ಎದುರು ಬುಧವಾರ ಗೌರವ ಸಮರ್ಪಿಸಿದ ಸ್ಥಳೀಯರು–ಎಎಫ್‌ಪಿ ಚಿತ್ರ

'ಮೊಘಲ್ ಎ ಆಜಮ್' ಅಂತೂ 'ಕಲ್ಟ್ ಸಿನಿಮಾ' ಎಂದೇ ಚಿರಸ್ಥಾಯಿಯಾಯಿತು. 1960ರಲ್ಲಿ ತೆರೆಗೆ ಬಂದ ಕೆ.ಆಸಿಫ್ ಅವರ ಬಿಗ್‌ಬಜೆಟ್ ಚಿತ್ರವದು. ಅಪ್ಪ, ಚಕ್ರವರ್ತಿ ಅಕ್ಬರನ ಮಾತನ್ನು ಮೀರಿ ಆಸ್ಥಾನ ನರ್ತಕಿ ಅನಾರ್ಕಲಿಯ ಪ್ರೇಮಪಾಶದಲ್ಲಿ ಬಿದ್ದು ದಂಗೆಯೇಳುವ ರಾಜಕುವರ ಸಲೀಂನ ಪಾತ್ರ. ಪೃಥ್ವಿರಾಜ್ ಕಪೂರ್ ಮತ್ತು ಮಧುಬಾಲ ಎಂಬ ಆ ಕಾಲದ ಮಹಾನ್ ಪ್ರತಿಭಾವಂತರ ಮಧ್ಯೆ ದಿಲೀಪ್ ಕುಮಾರ್ ಪ್ರೇಕ್ಷಕರ ಹೃದಯ ಗೆಲ್ಲುವಲ್ಲಿ ಯಶಸ್ವಿಯಾದರು. ಅರ್ಧ ಕಪ್ಪು ಬಿಳುಪು ಮತ್ತು ಅರ್ಧ ಕಲರ್‌ನಲ್ಲಿ ತಯಾರಾದ ಆ ಚಿತ್ರ ಆ ವರ್ಷದ ಅತ್ಯಧಿಕ ಬಾಕ್ಸಾಫೀಸ್ ಕಲೆಕ್ಷನ್ ಕಂಡ ಎರಡನೇ ಚಿತ್ರ. ಈ ಸಿನಿಮಾ ಭಾರತೀಯ ಪ್ರೇಕ್ಷಕರಿಗೆ ಎಂತಹ ಹುಚ್ಚು ಹಿಡಿಸಿತೆಂದರೆ 2004ರಲ್ಲಿ ಮತ್ತೆ ಪೂರ್ಣ ವರ್ಣದಲ್ಲಿ ಚಿತ್ರ ತೆರೆ ಕಂಡು ಇತಿಹಾಸ ನಿರ್ಮಿಸಿತು.

ಎರಡು ದಶಕಗಳ ಕಾಲ ಹೀಗೆ ಚಕ್ರವರ್ತಿಯಂತೆ ಬಾಲಿವುಡ್ ಅನ್ನು ಆಳಿದ ದಿಲೀಪ್, 1970ರ ದಶಕದಲ್ಲಿ ನಟಿಸಿದ ಮುಖ್ಯ ಚಿತ್ರಗಳೆಲ್ಲ ಗೋತಾ ಹೊಡೆದದ್ದೂ ನಡೆಯಿತು! ದಾಸ್ತಾನ್, ಬೈರಾಗ್, ಗೋಪಿ ಮತ್ತಿತರ ಚಿತ್ರಗಳು ಸಾಲಾಗಿ ಸೋಲುಂಡವು. 1976ರಿಂದ 1981ರವರೆಗೆ ಐದು ವರ್ಷಗಳ ಕಾಲ ದಿಲೀಪ್ ಕುಮಾರ್ ಬೆಳ್ಳಿತೆರೆಯಿಂದ ದೂರವೇ ಉಳಿದರು.

ಒಂದೆಡೆ ರಾಜ್ ಕಪೂರ್ ಮತ್ತು ದೇವಾನಂದ್ ಅವರ ವಿಭಿನ್ನ ಶೈಲಿ; ಇನ್ನೊಂದೆಡೆ ಸ್ವಲ್ಪ ಜೂನಿಯರ್ ಎನ್ನಬಹುದಾದ ರಾಜೇಂದ್ರ ಕುಮಾರ್, ಮನೋಜ್ ಕುಮಾರ್ ಮತ್ತು ಧರ್ಮೇಂದ್ರ ಅವರ ಚಿತ್ರಗಳ ದಾಳಿ. ಎರಡರ ಮಧ್ಯೆಯೂ ದಿಲೀಪ್ ಕುಮಾರ್ ತಮ್ಮದೇ ಆದ ನೈಸರ್ಗಿಕ ನಟನೆಯ ಅವಿಚ್ಛಿನ್ನ ಛಾಪೊಂದನ್ನು ಮೂಡಿಸಿದ್ದರು. 1982ರಲ್ಲಿ ತೆರೆಗೆ ಬಂದ 'ಕ್ರಾಂತಿ' ಈ ಛಾಪು ಮರೆಯಾಗಿಲ್ಲ ಎಂದು ಸಾಬೀತು ಪಡಿಸಿತು. ಮನೋಜ್ ಕುಮಾರ್, ಶಶಿಕಪೂರ್, ಹೇಮಮಾಲಿನಿ, ಶತ್ರುಘ್ನ ಸಿನ್ಹಾ ಅವರಿದ್ದ ಈ ಮಲ್ಟಿಸ್ಟಾರ್ ಚಿತ್ರದಲ್ಲಿ ದಿಲೀಪ್ ಕುಮಾರ್ ಅವರ ಎರಡನೇ ಇನಿಂಗ್ಸ್ ಭರ್ಜರಿಯಾಗಿ ಆರಂಭಗೊಂಡಿತು. ಆ ಬಳಿಕ ಸುಭಾಷ್ ಘಾಯ್ ನಿರ್ದೇಶಿಸಿದ ವಿಧಾತಾ, ಸೌದಾಗರ್ ಮತ್ತು ರಮೇಶ್ ಸಿಪ್ಪಿಯವರ ಶಕ್ತಿ ಚಿತ್ರಗಳಲ್ಲಿ ಮಿಂಚಿದರು ದಿಲೀಪ್ ಕುಮಾರ್. ಶಕ್ತಿ ಚಿತ್ರದಲ್ಲಿ ದಿಲೀಪ್ ಕುಮಾರ್ ಅವರ ಮಗನ ಪಾತ್ರದಲ್ಲಿ ನಟಿಸಿದವರು ಅಮಿತಾಭ್ ಬಚ್ಚನ್. 'ಸೌದಾಗರ್'ನಲ್ಲಿ ಎಷ್ಟೋ ದಶಕಗಳ ಬಳಿಕ ಚರಿತ್ರನಟ ರಾಜ್‌ಕುಮಾರ್ ಜೊತೆಗೆ ದಿಲೀಪ್ ಕುಮಾರ್ ನಟಿಸಿದ್ದು ಚಿತ್ರದ ಡೈಲಾಗ್‌ಗಳು ಸಿನಿಪ್ರೇಕ್ಷಕರನ್ನು ಹುಚ್ಚೆಬ್ಬಿಸಿದ್ದು ಸುಳ್ಳಲ್ಲ.

ದಿಲೀಪ್ ಕುಮಾರ್ ಅವರ ಅಭಿನಯದ ಕುರಿತು ಭಾರತೀಯ ಚಿತ್ರರಂಗದ ಶ್ರೇಷ್ಠ ನಿರ್ದೇಶಕ ಸತ್ಯಜಿತ್ ರೇ ಹೇಳಿದ ಮಾತೊಂದು ಇಲ್ಲಿ ಸ್ಮರಣಾರ್ಹ. 'ವೈಧಾನಿಕ ನಟನೆಯಲ್ಲಿ ಮೇರುಶಿಖರ ತಲುಪಿದ ಏಕೈಕ ವ್ಯಕ್ತಿ ದಿಲೀಪ್ ಕುಮಾರ್' ಎಂದಿದ್ದರು ಅವರು. ದಿಲೀಪ್ ಕುಮಾರ್‌ರಂತೆಯೇ ಎಂಟು ಸಲ ಫಿಲಂಫೇರ್ ಪ್ರಶಸ್ತಿ ಗೆದ್ದ ಶಾರೂಕ್ ಖಾನ್ ಸಂದರ್ಶನವೊಂದರಲ್ಲಿ 'ದಿಲೀಪ್ ಸಾಹೇಬರ ನಟನೆಯನ್ನು ಅನುಕರಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೂ ನನ್ನಂತಹ ಮೂರ್ಖರು ಪದೇ ಪದೇ ಆ ಪ್ರಯತ್ನವನ್ನು ಮಾಡುತ್ತಾರೆ' ಎಂದದ್ದುಂಟು.

ಸ್ಫುರದ್ರೂಪಿ ದಿಲೀಪ್ ಸುತ್ತ ಹಬ್ಬಿದ ಪ್ರೇಮಕಥೆಗಳಿಗೂ ಲೆಕ್ಕವಿಲ್ಲ. ಆ ಕಾಲದ ಹಿಂದಿ ಚಿತ್ರರಂಗದ ಜನಪ್ರಿಯ ಜೋಡಿ ದಿಲೀಪ್ ಮತ್ತು ಮಧುಬಾಲಾ. ಇಬ್ಬರ ಪ್ರೇಮ ಗುಟ್ಟಾಗಿ ಉಳಿಯಲಿಲ್ಲ. ಆದರೆ ಮದುವೆಯಲ್ಲಿ ಪರ್ಯವಸಾನಗೊಳ್ಳಲು ಮಧುಬಾಲಾ ಅವರ ಮನೆಯವರು ಒಪ್ಪಲಿಲ್ಲವಂತೆ. ಏಳು ಚಿತ್ರಗಳಲ್ಲಿ ಜೊತೆಗೆ ನಟಿಸಿದ್ದ ವೈಜಯಂತಿ ಮಾಲಾ ಜೊತೆಗೂ ಪ್ರೇಮ ಕುದುರಿದ್ದ ಕಥೆಗಳಿವೆ. ಕೊನೆಗೆ 1966ರಲ್ಲಿ ದಿಲೀಪ್ ಕುಮಾರ್ ಅವರು ಮದುವೆಯಾದದ್ದು ತನಗಿಂತ 22 ವರ್ಷ ಚಿಕ್ಕವರಾಗಿದ್ದ ಸಾಯಿರಾ ಬಾನು ಅವರನ್ನು. ಇದೊಂದು ಯಶಸ್ವಿ ದಾಂಪತ್ಯ. ಹಾಗಿದ್ದೂ 1980ರಲ್ಲಿ ದಿಲೀಪ್ ಕುಮಾರ್ ಅವರು ಆಸ್ಮಾ ಎಂಬ ಇನ್ನೊಬ್ಬ ಯುವತಿಯನ್ನು ಮದುವೆಯಾಗಿ ತ್ಯಜಿಸಿದ್ದೂ ನಡೆಯಿತು.

98ರ ಇಳಿವಯಸ್ಸಿನಲ್ಲಿ ಈಗ ಕಣ್ಮರೆಯಾಗಿರುವ ದಿಲೀಪ್ ಕುಮಾರ್ ಅವರ ಹೆಚ್ಚುಗಾರಿಕೆಯೇನು ಎನ್ನುವುದನ್ನು ಕುರಿತು ಆಲೋಚಿಸಿದಾಗ ಹೊಳೆಯುವುದು ಒಂದೇ ಅಂಶ. ಬಾಲಿವುಡ್‌ನ ಮಹಾಗೋಡೆಯ ಮೇಲೆ ಹತ್ತಾರು ಸೂಪರ್‌ಸ್ಟಾರ್‌ಗಳು ಬಂದು ಹೋಗಿದ್ದಾರೆ. ಆದರೆ ಸೂಪರ್‌ಸ್ಟಾರ್ ಮತ್ತು ಅಭಿಜಾತ ನಟನೆಂಬ ಎರಡೂ ಪಟ್ಟಗಳನ್ನು ಏಕಕಾಲಕ್ಕೆ ಯಶಸ್ವಿಯಾಗಿ ನಿಭಾಯಿಸಿದ ಮಹಾಪ್ರತಿಭೆ ದಿಲೀಪ್ ಕುಮಾರ್.

## ಬಾಲಿವುಡ್ ಮುನ್ನಡೆಸಿದ್ದ ತ್ರಿಮೂರ್ತಿಗಳು

ಮುಂಬೈ: ಹಿರಿಯ ನಟ ದಿಲೀಪ್ ಕುಮಾರ್ ಅವರ ನಿಧನದೊಂದಿಗೆ ಬಾಲಿವುಡ್ ಸುವರ್ಣ ತ್ರಿಮೂರ್ತಿಗಳ ಕೊನೆಯ ಕೊಂಡಿಯೂ ಕಳಚಿಹೋಗಿದೆ. ದಿಲೀಪ್ ಕುಮಾರ್, ದೇವಾನಂದ್ ಮತ್ತು ರಾಜ್ ಕಪೂರ್ ಅವರು ಒಂದೇ ವಯಸ್ಸಿನವರು 1950 ಮತ್ತು 60ರ ದಶಕದಲ್ಲಿ ಹಿಂದಿ ಚಿತ್ರೋದ್ಯಮವನ್ನು ಜತೆಯಾಗಿ ಮುನ್ನಡೆಸಿದವರು.

ಈ ಮೂವರೂ ವೃತ್ತಿಯಲ್ಲಿ ಪ್ರತಿಸ್ಪರ್ಧಿಗಳಾಗಿದ್ದರು. ಆದರೆ ತೆರೆಯ ಆಚೆಗೆ ಮೂವರೂ ಉತ್ತಮ ಸ್ನೇಹಿತರು. ಮೂವರ ಚಿತ್ರಗಳೂ ಜನಸಾಮಾನ್ಯರ ಸಮಸ್ಯೆಗಳನ್ನು ಮುನ್ನೆಲೆಗೆ ತಂದವು. ತಲೆಮಾರುಗಳವರೆಗೆ ಜನಮಾನಸದಲ್ಲಿದ್ದವು.

ದಿಲೀಪ್ ಕುಮಾರ್ ಅವರ 'ಮುಘಲ್ ಎ ಆಜಂ', ರಾಜ್ ಕಪೂರ್ ಅವರ 'ಆವಾರ' ಮತ್ತು ದೇವಾನಂದ್ ಅವರ 'ಗೈಡ್' ಸಿನಿಮಾಗಳು ಕಥೆ, ಪರಿಕಲ್ಪನೆ ಮತ್ತು ನಿರ್ಮಾಣದ ವಿಚಾರದಲ್ಲಿ ತಮ್ಮ ಕಾಲದ ಇತರ ಚಿತ್ರಗಳಿಗಿಂತ ಬಹಳ ಮುಂದಿದ್ದವು.


ಸ್ವಾತಂತ್ರ್ಯಪೂರ್ವದಲ್ಲಿ ಅವಿಭಜಿತ ಪಂಜಾಬ್‌ನಲ್ಲಿಯೇ ಈ ಮೂವರೂ ಜನಿಸಿದ್ದು ವಿಶೇಷ. ಈಗಿನ ಪಾಕಿಸ್ತಾನದಲ್ಲಿರುವ ಪೆಶಾವರದಲ್ಲಿ ದಿಲೀಪ್ ಕುಮಾರ್ (1922ರ ಜುಲೈ 6) ಮತ್ತು ರಾಜ್ ಕಪೂರ್ (1924ರ ಜೂನ್ 2) ಅವರು ಜನಿಸಿದ್ದರು. ದೇವಾನಂದ್ ಅವರು ಗುರುದಾಸ್‌ಪುರದಲ್ಲಿ (1923ರ ಸೆಪ್ಟೆಂಬರ್ 26) ಜನಿಸಿದ್ದರು.

ಕುಂದನ್ ಲಾಲ್ ಸೈಗಲ್ ಅವರನ್ನು ಭಾರತದ ಮೊದಲ ಸೂಪರ್‌ಸ್ಟಾರ್ ಎಂದು ಗುರುತಿಸಲಾಗಿತ್ತು. ಅವರ ನಂತರ ಆ ಸ್ಥಾನವನ್ನು ಅಶೋಕ್ ಕುಮಾರ್ ಗಳಿಸಿಕೊಂಡಿದ್ದರು. ಇವರಿಬ್ಬರ ನಂತರ ಈ ತ್ರಿಮೂರ್ತಿಗಳು ಎರಡು ದಶಕಗಳಿಗೂ ಹೆಚ್ಚು ಕಾಲ ಭಾರತದ ಸೂಪರ್ ಸ್ಟಾರ್‌ಗಳಾಗಿ ಮೆರೆದಿದ್ದರು. ಆನಂತರವೇ ರಾಜೇಶ್ ಖನ್ನಾ ಸೂಪರ್‌ಸ್ಟಾರ್ ಎನಿಸಿಕೊಂಡಿದ್ದು. ಅಮಿತಾಬ್ ಬಚ್ಚನ್, ಧರ್ಮೇಂದ್ರ, ಜಿತೇಂದ್ರ, ವಿನೋದ್ ಖನ್ನಾ, ಶತ್ರುಘ್ನ ಸಿನ್ಹಾ ಅವರು ಬಾಲಿವುಡ್ ತಾರೆಗಳಾಗಿದ್ದು ದಶಕಗಳ ನಂತರ.

ರಾಜ್ ಕಪೂರ್ ಮತ್ತು ದೇವಾನಂದ್ ಅವರು ಎಂದಿಗೂ ಯಾವ ಚಿತ್ರದಲ್ಲೂ ಒಟ್ಟಿಗೆ ಕೆಲಸ ಮಾಡಿಲ್ಲ. ಆದರೆ ದಿಲೀಪ್ ಕುಮಾರ್ ಅವರು ರಾಜ್ ಕಪೂರ್ ಅವರ ಜತೆ ಅಂದಾಜ್ ಮತ್ತು ದೇವಾನಂದ್ ಅವರ ಜತೆ ಇನ್ಸಾನಿಯತ್ ಚಿತ್ರಗಳಲ್ಲಿ ತೆರೆಯನ್ನು ಹಂಚಿಕೊಂಡಿದ್ದರು.

ಒಂದು ಕಾಲದಲ್ಲಿ ಹಿಂದಿ ಚಿತ್ರೋದ್ಯಮವನ್ನು ಮುನ್ನಡೆಸಿದ್ದ ಈ ಮೂವರ ಜೋಡಿ ಈಗ ಸಂಪೂರ್ಣವಾಗಿ ಮರೆಯಾಗಿದೆ. ಆದರೆ ಅವರ ಹಲವು ಚಲನಚಿತ್ರಗಳು ಇನ್ನೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿವೆ.

## ಗುಂಡಣ್ಣ




## ದಿನ ಭವಿಷ್ಯ

ಗುರುವಾರ ಜುಲೈ 8, 2021

**ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುನರ್ವಸು ಚತುರ್ದಶೀ ಗಂ. 54-44 (ರಾ. 4-01) ಗುರುವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 36-25 (ರಾ 8-41) ವೃದ್ಧಿ ನಾಮ ಯೋಗ ಗಂ. 26-49 ಭದ್ರೆ ಕರಣ ಗಂ. 22-34 ವಿಷ ಗಂ. 59-23 ಅಮೃತ ಗಂ. 11-55 ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ:** 6-03 **ಸೂರ್ಯಾಸ್ತ:** 6-46 **ಅದೃಷ್ಟ ಸಂಖ್ಯೆ** 2 6 7

**ಮೇಷ:** ಮನಸ್ಸು ಚಂಚಲತೆಯಿಂದ ಕೂಡಿರುವುದು ಯಡಬಿಡಂಗಿತನಕ್ಕೆ ಆಸ್ಪದವಾದೀತು. ಉದ್ಯೋಗರಂಗದಲ್ಲಿ ಉತ್ತಮ ಸಾಧನೆಗಳು ಸಾಧ್ಯತೆ. ಆರೋಗ್ಯದಲ್ಲಿ ಉತ್ತಮ ಫಲ ನಿರೀಕ್ಷೆ. ವಿಷ್ಣುವಿನ ಆರಾಧನೆ ಒಳ್ಳೆಯದು.

**ವೃಷಭ:** ಉದ್ಯೋಗದಲ್ಲಿ ಏರಿಳಿತಗಳು ಕಂಡುಬರುತ್ತವೆ. ಆರ್ಥಿಕವಾಗಿ ಉತ್ತಮ ಫಲ ಪ್ರಾಪ್ತಿ. ಭೂಮಿಯಿಂದ ಅಧಿಕ ಲಾಭ ನಿರೀಕ್ಷೆ. ರೈತಾಪಿ ವರ್ಗಕ್ಕೆ ಅಡಚಣೆಗಳ ಸಾಧ್ಯತೆ. ಶಿವನ ಆರಾಧನೆ ಮಾಡಿ.

**ಮಿಥುನ:** ರಾಜಕೀಯ ವಿಷಯಗಳಲ್ಲಿ ಅತಿಯಾದ ಆಸಕ್ತಿ. ವ್ಯಾಪರಸ್ಥರಿಗೆ ಉತ್ತಮ ಲಾಭ ಸಾಧ್ಯತೆ. ಸಾಮಾಜಿಕ ಕಾರ್ಯಗಳಲ್ಲಿ ಆಸಕ್ತಿ ಜೊತೆಯಲ್ಲಿ ತೊಡಗುವಿಕೆಯಿಂದ ಅನುಕೂಲಕರ ವಾತಾವರಣ.

**ಕರ್ಕಾಟಕ:** ಕೆಲಸದಲ್ಲಿ ಒತ್ತಡಗಳು ಕಂಡುಬರುವುದು. ಆರ್ಥಿಕ ಮಿತವ್ಯಯ-ವನ್ನು ಮಾಡುವುದು ಉತ್ತಮ. ಉದ್ಯೋಗ ನಿಮಿತ್ತ ದೂರ ಪ್ರಯಾಣದಿಂದ ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಯ. ದೇವಿ ಆರಾಧನೆ ಮಾಡಿ.

**ಸಿಂಹ:** ಕಮಿಷನ್ ಏಜೆಂಟರುಗಳಿಗೆ ಹೆಚ್ಚಿನ ಆದಾಯ ಪ್ರಾಪ್ತಿ. ಸರ್ಕಾರಿ ಉದ್ಯೋಗಿಗಳಿಗೆ ಶಾಂತಿಯ ವಾತಾವರಣ. ಹಿರಿಯರ ಪ್ರಶಂಸೆಗಳು, ಉನ್ನತ ಸ್ಥಾನವನ್ನು ಹೊಂದುವ ಸಾಧ್ಯತೆಗಳು ಕಂಡುಬರುತ್ತವೆ. ದೇವಿ ಆರಾಧಿಸಿ.

**ಕನ್ಯಾ:** ವಿದ್ಯಾರ್ಥಿಗಳಿಗೆ ಅತಿಯಾದ ಶ್ರಮದಿಂದ ಉತ್ತಮ ಫಲ ಪ್ರಾಪ್ತಿ. ಆಲಸ್ಯದಿಂದ ದೂರವಿರುವುದು ಉತ್ತಮ. ಆರೋಗ್ಯದಲ್ಲಿ ವ್ಯತ್ಯಯ. ಹಿರಿಯರ ಅನುಗ್ರಹದಿಂದ ಕಾರ್ಯಗಳಲ್ಲಿ ಯಶಸ್ಸು. ಗುರುವಿನ ಆರಾಧನೆ ಮಾಡಿ.

**ತುಲಾ:** ತಂದೆ ತಾಯಿ ಸಹೋದರಿ ಈ ವರ್ಗಗಳಿಂದ ಸಂತೋಷ ಪ್ರಾಪ್ತಿ. ಪತ್ನಿಯಿಂದಲೂ ಪ್ರೋತ್ಸಾಹ ದೊರೆಯಲಿದೆ. ಕೌಟುಂಬಿಕವಾಗಿ ಎಲ್ಲಾ ವಿಧಗಳಲ್ಲೂ ನೆಮ್ಮದಿ ಉಂಟಾಗಲಿದೆ. ದೂರ ಪ್ರಯಾಣ ಸಾಧ್ಯತೆ.

**ವೃಶ್ಚಿಕ:** ಸಹೋದ್ಯೋಗಿಗಳಿಂದ ಮತ್ತು ಆತ್ಮೀಯರಿಂದ ಸೂಕ್ತ ಸಲಹೆ ದೊರಕಿ ಉತ್ತಮ ಲಾಭ. ಆರೋಗ್ಯ ಉತ್ತಮಗೊಳ್ಳುವುದು ಆರ್ಥಿಕ ಸ್ಥಿತಿಯಲ್ಲಿ ಉನ್ನತಿ ಕಂಡುಬರುತ್ತಿದೆ. ಗೃಹೋಪಯೋಗಿ ಸಾಮಗ್ರಿ ಖರೀದಿ. ಶಿವನನ್ನು ಆರಾಧಿಸಿ.

**ಧನು:** ಕೋರ್ಟು ಕಚೇರಿ ಸಂಬಂಧದ ಕಲಹಗಳಲ್ಲಿ ಜಯಪ್ರಾಪ್ತಿ. ಕೃಷಿರಂ-ಗದಲ್ಲಿರುವವರಿಗೆ ಉತ್ತಮ ಫಲಪ್ರಾಪ್ತಿ. ನೂತನ ಕೃಷಿಯಲ್ಲಿ ತೊಡಗುವಿಕೆ ಕಂಡುಬರುತ್ತಿದೆ. ಆರ್ಥಿಕ ಉನ್ನತಿ ಕಾಣುವಿರಿ. ವಿಷ್ಣುವಿನ ಆರಾಧನೆ ಮಾಡಿ.

**ಮಕರ:** ವಾಹನ ಮಾರಾಟಗಾರರಿಗೆ ಮತ್ತು ವಾಹನ ಉದ್ಯಮದಲ್ಲಿರುವವರಿಗೆ ಅಧಿಕ ಲಾಭ. ಷೇರು ಮಧ್ಯವರ್ತಿಗಳಿಗೆ ಉತ್ತಮ ಲಾಭ ದೊರಕುವುದು. ಷೇರು ವ್ಯವಹಾರದಲ್ಲಿ ಹೊಸ ಅನುಭವ ಪಡೆಯುವಿರಿ. ಗುರು ಆರಾಧನೆ ಮಾಡಿ.

**ಕುಂಭ:** ಕಲಾವಿದರಿಗೆ ಪುರಸ್ಕಾರ ದೊರೆಯುವುದು. ಕಲಾರಂಗದಲ್ಲಿ ಯಶಸ್ಸು ಕಾಣುವಿರಿ. ಆರ್ಥಿಕವಾಗಿ ಬಲಗೊಳ್ಳುವಿರಿ. ಸಾಂಸಾರಿಕ ಸಂತೋಷ, ಹಿರಿಯರ ಪ್ರಶಂಸೆಗಳು ದೊರಕುವವು. ಸುಬ್ರಹ್ಮಣ್ಯ ಆರಾಧನೆ ಶ್ರೇಯಸ್ಕರ.

**ಮೀನ:** ಮಧ್ಯವರ್ತಿ ಕೆಲಸ ನಿರ್ವಾಹಕರಿಗೆ ಜಯ ಪ್ರಾಪ್ತಿ. ವಸ್ತ್ರ, ಉಡುಪುಗಳ ವ್ಯಾಪಾರಸ್ಥರಿಗೆ ವಿಶೇಷ ಲಾಭವಾಗಲಿದೆ. ನೆರೆಹೊರೆಯವರೊಂದಿಗೆ ಸಂಯಮ ತೋರುವುದು ಉತ್ತಮ. ಶಿವನ ಆರಾಧನೆಯಿಂದ ಉತ್ತಮ ಫಲ.

**ನಿಮ್ಮ ಜನ್ಮದಿನ 8-ಜುಲೈ** ಇಂದು ಅತ್ಯಂತ ಶುಭದಾಯಕವಾಗಿದ್ದು, ಉದ್ಯೋಗದಲ್ಲಿ ಪ್ರಗತಿ ಕಂಡುಬರುವುದು. ಆರ್ಥಿಕವಾಗಿ ಅಭಿವೃದ್ಧಿ, ಕೌಟುಂಬಿಕ ಸಂತೋಷದ ವಾತಾವರಣ. ದೂರ ಪ್ರಯಾಣ ಸಾಧ್ಯತೆಗಳು. ವಾಹನಗಳಿಂದ ಜಾಗೃತೆ. ಹೊಸ ವಿಷಯದ ನಿರ್ಣಯ ತೆಗೆದುಕೊಳ್ಳುವಾಗ ಮತ್ತೊಮ್ಮೆ ಯೋಚಿಸಿ ನಿರ್ಧಾರಕ್ಕೆ ಬರುವುದು ಉತ್ತಮ.

## ಬೆರಗಿನ ಬೆಳಕು
ಗುರುರಾಜ ಕರಜಗಿ

### ತರುಣಿ ಹೆಂಡತಿಯ ಅಪೇಕ್ಷೆ

**ಊರಲ್ಲಿ** ತರುಣಿಯ ಕೊಂಕು ಮಾತುಗಳು ವಿಪರೀತವಾದಾಗ ಅಮಿತ್ರತಾಪನಳು ಮನೆಗೆ ಅಳುತ್ತ ಬಂದಳು. ನೀರಿನ ಕೊಡವನ್ನು ನೆಲಕ್ಕೆ ಕುಕ್ಕಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಮನೆಗೆ ಬಂದ ಮುದುಕ ಬ್ರಾಹ್ಮಣ ಆತಂಕದಿಂದ, 'ಯಾಕೆ ಅಳುತ್ತೀ? ಏನು ತೊಂದರೆ?' ಎಂದು ಕೇಳಿದ. ಆಕೆ ತನ್ನ ದುಃಖವನ್ನು ಹೇಳಿಕೊಂಡಳು. 'ಬ್ರಾಹ್ಮಣ, ನಾನು ಇನ್ನು ನೀರು ತರಲು ನದಿಗೆ ಹಾಗೂ ದೇವಾಲಯಕ್ಕೆ ಹೋಗುವುದಿಲ್ಲ. ನಿನ್ನ ಮುದಿತನದ ಬಗ್ಗೆ ಮಾತನಾಡಿ ಗ್ರಾಮದ ಹೆಂಗಳೆಯರು ನನ್ನ ಬಗ್ಗೆ ಹಾಸ್ಯ ಮಾಡುತ್ತಾರೆ'. ಬ್ರಾಹ್ಮಣ ಹೇಳಿದ, 'ಹೋಗಲಿ ಬಿಡು, ಅವರ ಮಾತಿನಿಂದೇನು? ಆಯಿತು, ನೀನು ನೀರು ತರುವುದು ಬೇಡ. ನಾನೇ ನೀರು ತರುತ್ತೇನೆ. ನೀನು ಕೋಪ ಮಾಡಿಕೊಳ್ಳಬೇಡ'. ಆಕೆ ಅಳುತ್ತಲೇ ಹೇಳಿದಳು, 'ನಾನು ಗಂಡನಿಂದ ನೀರು ತರಿಸುವಂಥ ಕುಲದಲ್ಲಿ ಹುಟ್ಟಿಲ್ಲ. ನನಗೆ ನನ್ನ ತಂದೆ-ತಾಯಿಯರು ಸರಿಯಾದ ಸಂಸ್ಕಾರ ಕೊಟ್ಟಿದ್ದಾರೆ. ಗಂಡನಿಂದ ಇಂಥ ಕೆಲಸ ಮಾಡಿಸುವುದು ಪಾಪ ಎಂದು ನನಗೆ ತಿಳಿದಿದೆ. ಇನ್ನು ಮೇಲೆ ನಾನೂ ನೀರು ತರುವುದಿಲ್ಲ, ನೀನೂ ತರುವುದು ಬೇಡ'. 'ಹಾಗಾದರೆ ಏನು ಮಾಡಲಿ?' ಎಂದು ಗಾಬರಿಯಿಂದ ಬ್ರಾಹ್ಮಣ ಕೇಳಿದ.


ಆಕೆ ಕಣ್ಣೊರೆಸಿಕೊಂಡು, 'ಅದಕ್ಕೊಂದು ಉಪಾಯವಿದೆ. ಮನೆಯ ಕೆಲಸಗಳಿಗೆ ಒಬ್ಬ ದಾಸಿಯನ್ನೋ, ದಾಸನನ್ನೋ ಗೊತ್ತು ಮಾಡು. ಅವರು ನೀರು ತರುವ ಮತ್ತು ಉಳಿದ ಕೆಲಸಗಳನ್ನು ಮಾಡಲಿ' ಎಂದಳು. ಬ್ರಾಹ್ಮಣ ಹೌಹಾರಿದ. 'ದೇವೀ, ನಾನು ಎಷ್ಟು ಬಡವ ಎಂಬುದು ನನಗೆ ಗೊತ್ತಿದೆ. ನನ್ನ ಬದುಕು ನಡೆಯುವುದೇ ಭಿಕ್ಷೆಯಿಂದ. ನನ್ನ ಬಳಿ ಬೇರೆ ಉದ್ಯೋಗವಾಗಲೀ, ಹಣವಾಗಲೀ, ಧಾನ್ಯವಾಗಲಿ ಇಲ್ಲ. ಇನ್ನು ದಾಸ, ದಾಸಿಯರಿಗೆ ಹಣವನ್ನು ಎಲ್ಲಿಂದ ತರಲಿ? ದಯವಿಟ್ಟು ಕೋಪ ಮಾಡಿಕೊಳ್ಳಬೇಡ. ನಾನು ನೀರು ತರುವುದು ಮಾತ್ರವಲ್ಲ, ಮನೆಯ ಎಲ್ಲ ಕೆಲಸಗಳನ್ನು ಮತ್ತು ನಿನ್ನ ಸೇವೆಯನ್ನು ಮಾಡುತ್ತೇನೆ' ಎಂದು ಅಲವತ್ತುಕೊಂಡ. ಆದರೆ ಅಮಿತ್ರತಾಪನಳ ಮನಸ್ಸು ಕರಗಲಿಲ್ಲ. ಆಕೆ ಉಗ್ರವಾಗಿಯೇ ನುಡಿದಳು. 'ಬ್ರಾಹ್ಮಣ, ನೀನು ಏನು ಮಾಡುತ್ತೀಯೋ ಗೊತ್ತಿಲ್ಲ. ನೀನು ಮನೆಗೆ ದಾಸಿ ಅಥವಾ ದಾಸನನ್ನು ಕರೆತರದಿದ್ದರೆ ನಾನು ಈ ಮನೆಯನ್ನು ಬಿಟ್ಟು ಹೋಗುತ್ತೇನೆ' ಎಂದು ಅಬ್ಬರಿಸಿದಳು. ಆತ ಬರಸಿಡಿಲು ಬಡಿದಂತೆ ಕುಳಿತಾಗ ಆಕೆಯೇ ಅವನಿಗೆ ಒಂದು ಉಪಾಯವನ್ನು ಸೂಚಿಸಿದಳು. 'ಬ್ರಾಹ್ಮಣ, ನಾನು ಹೇಳಿದಂತೆ ಕೇಳು. ಬೋಧಿಸತ್ವ ವೆಸ್ಸಂತರ ಬಹು ದೊಡ್ಡ ದಾನಿ. ಯಾರೂ ಅವನ ಬಳಿ ಹೋಗಿ ದಾನ ಪಡೆಯದೆ ಬಂದದ್ದಿಲ್ಲ. ಆತ ಈಗ ವಂಕಪ-ರ್ವತದಲ್ಲಿ ಇದ್ದಾನಂತೆ. ನೀನು ಅಲ್ಲಿಗೆ ಹೋಗಿ ದಾಸ, ದಾಸಿಯರನ್ನು ಬೇಡು. ಆತ ಖಂಡಿತವಾಗಿಯೂ ಕೊಡುತ್ತಾನೆ'.

ಬ್ರಾಹ್ಮಣ ಹೇಳಿದ, 'ದೇವಿ ಉಪಾಯವೇನೋ ಚೆನ್ನಾಗಿದೆ. ಆದರೆ ನಾನು ಮುದುಕ, ದುರ್ಬಲ. ವಂಕಪರ್ವತದ ಹಾದಿ ದೂರ ಹಾಗೂ ಕಷ್ಟವಾದದ್ದು'. ಆಕೆ ಕೋಪದಿಂದ, 'ನೀನು ಹೇಡಿ. ಯುದ್ಧಕ್ಕೆ ಮೊದಲೇ ಸೋತು ಹೋದೆ. ಕಷ್ಟವೋ, ಸುಖವೋ ನೀನು ಹೋಗಿ ಕೇಳಲೇಬೇಕು. ಇಲ್ಲದಿದ್ದರೆ ನಾನು ಮನೆಯಲ್ಲಿ ಇರುವುದಿಲ್ಲ. ಇದ್ದರೂ ನಿನ್ನನ್ನು ನಿರ್ಲಕ್ಷಮಾಡಿ, ಉತ್ಸವ ಕಾಲದಲ್ಲಿ ಅಲಂಕೃತಳಾಗಿ ಮತ್ತೊಬ್ಬ ತರುಣನ ಜೊತೆಗೆ ರಮಿಸುತ್ತೇನೆ. ಅದನ್ನು ಕಂಡ ನಿನಗೆ ಬದುಕೇ ಬೇಸ-ರವಾಗುತ್ತದೆ. ನಿನಗೆ ಬಹುಬೇಗ ಮತ್ತಷ್ಟು ಮುದಿತನ ಮತ್ತು ಸಾವು ಬರುತ್ತದೆ' ಎಂದಳು. ಹೆಂಗಸರ ಚುಚ್ಚುಮಾತು ಹರಿತವಾದ ಆಯುಧದಂತೆ. ಮುದಿಬ್ರಾಹ್ಮಣ ಪ್ರಯಾಣಕ್ಕೆ ಸಿದ್ಧನಾದ. ❖

## ಪದಬಂಧ 4651
– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಸಂದೇಶ ಹರಡಿದ್ದಕ್ಕೇ ಈ ಅನುಮಾನ! (3)
4.ನಿತ್ಯ ನಿಜವನ್ನೇ ನುಡಿಯುವವ (4)
6. ನಡುವೆ ಪ್ರವೇಶಿಸಿ ಸಂಧಾನ ನಡೆಸುವಿಕೆ (4)
8.ಉಚಿತ ಎಂದಿದ್ದು ಖಂಡಿತವಾಗಿ ನಿಶ್ಚಿತ! (3)
11.ಗಮನಿಸಿ!ವೇದ ಕಾಣುತ್ತದೆ! (3)
13.ಹಸುವಿನ ಹತ್ತಿರವಿರುವ ಎಳೆಮಗು (4)
17.ಪರಾಕು ಹೇಳಿದ್ದಕ್ಕೇ ಈ ಕಪಾಳಮೋಕ್ಷ (4)
18.ಗುಲಾಮನು ಕಡಿವಾಣ ಹಿಡಿದಿದ್ದಾನಲ್ಲಾ? (3)

**ಮೇಲಿಂದ ಕೆಳಕ್ಕೆ**
1.ಕ್ಷಿಪ್ರವಾಗಿ ಮೊಟಕುಗೊಳಿಸಿದ್ದು (3)
2.ಸಖನದ್ದು ಈ ನಗುಮೊಗ (4)
3.ಶಾಶ್ವತವಾದ ಸ್ವತ್ತು (3)
5.ತರತಮ ತೋರಿದಾತನ ಅಜ್ಞಾನ! (2)
7.ಕೆಲಸಗಾರರು ಸಿಡಿಸಿರುವ ರಾಡಿ (3)
9.ತರ್ಜುಮೆಗಾರನ ತೋರುಬೆರಳಿದು (3)
10.ಹಸನಾದ ಬಾಳು ನಡೆಸಲು ಈ ಸಿದ್ಧತೆ (3)
12.ಮನಕಲುಕುವ ಸ್ವಭಾವದ ಮನುಷ್ಯ ಜಾತಿ (4)
14.ಸೂಫಿಗೆ ಸಂತೃಪ್ತಿ ನೀಡಿದ ಗಾಢನಿದ್ರೆ (3)
15.ಹರಸುತಲಿದ್ದಾಗ ನುಸುಳಿದ ಪುತ್ರ (2)
16.ಮುಲುಗುತ್ತಿರುವವನ ಗಾಯಕ್ಕೆ ಲೇಪಿಸಿದ ಔಷಧಿ (3)



### 4650ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಪ್ರಭಾವಲಯ 4.ಕುಕ್ಕುಟ 5.ಮಲರು 6.ಹುತಾತ್ಮ 8.ಮಣಿ 9.ಬಾಕು 10.ಸುದಿನ 14.ವಿಷಾದ 15.ತಿಕ್ಕಲು 16.ನಿರಾಕರಣ

**ಮೇಲಿಂದ ಕೆಳಕ್ಕೆ:** 1.ಪ್ರತಿಭೆ 2.ವರದಕ್ಷಿಣೆ 3.ಯಮಳ 4.ಕುರುಹು 7.ತಾರೀಕು 8.ಮಡದಿ 9.ಬಾಲಬಡಿಕ 11.ನವಿಲು 12.ರದನಿ 13.ಸ್ಫುರಣ

## ಸುಡೊಕು 5037

| | | | | | | | | |
|---|---|---|---|---|---|---|---|---|
| | | | | 7 | | | 4 | |
| | | 4 | 6 | 2 | 8 | | | 9 |
| 7 | | | | 1 | | | | |
| | | | | | | 6 | 7 | |
| 6 | | 1 | 7 | | 2 | | | 4 |
| | | | | | | | | 1 |
| 9 | | | | 6 | | 5 | | |
| | 3 | 6 | 2 | | 5 | | | 7 |
| 8 | | 5 | | 4 | | | 6 | 3 |


### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5036 ಸುಡೊಕು

| | | | | | | | | |
|---|---|---|---|---|---|---|---|---|
| 4 | 8 | 1 | 6 | 9 | 7 | 5 | 2 | 3 |
| 6 | 7 | 5 | 3 | 2 | 4 | 9 | 1 | 8 |
| 3 | 9 | 2 | 1 | 8 | 5 | 4 | 7 | 6 |
| 9 | 6 | 4 | 8 | 1 | 3 | 2 | 5 | 7 |
| 7 | 5 | 3 | 4 | 6 | 2 | 1 | 8 | 9 |
| 2 | 1 | 8 | 7 | 5 | 9 | 3 | 6 | 4 |
| 1 | 2 | 7 | 9 | 4 | 6 | 8 | 3 | 5 |
| 5 | 3 | 9 | 2 | 7 | 8 | 6 | 4 | 1 |
| 8 | 4 | 6 | 5 | 3 | 1 | 7 | 9 | 2 |

### ಷೇರುಪೇಟೆ ವಹಿವಾಟು ▲193




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 15,818 |
| ಇಂದಿನ ಅಂತ್ಯ | 15,879 |
| ▲ | 61 |
| ದಿನದ ಗರಿಷ್ಠ | 15,893 |

### ವಿನಿಮಯ ದರ

| | |
|---|---|
| $ ಡಾಲರ್ | 74.65 |
| £ ಪೌಂಡ್ | 103.03 |
| € ಯುರೊ | 88.25 |
| ¥ ಯೆನ್ (100ಕ್ಕೆ) | 67 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹500 |
| 12 ಮೊಟ್ಟೆಗೆ | ₹70 |
| ಮೈಸೂರು | |
| 100 ಮೊಟ್ಟೆಗೆ | ₹500 |

### ಖಾದ್ಯ ತೈಲ ಮುಂಬೈ (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1415 (1435) |
| ಸೋಯಾ (ರಿಫೈನ್ಡ್) | ₹1325 (1330) |
| ಸೂರ್ಯಕಾಂತಿ (ರಿಫೈನ್ಡ್) | ₹1350(1360) |
| ಪಾಮೋಲಿನ್ | ₹1165 (1175) |

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚುತ್ತಿರುವ ಕಚ್ಚಾತೈಲ ದರದ ಪರಿಣಾಮ


# ಇನ್ನಷ್ಟು ಕೈಸುಟ್ಟೀತು ತೈಲ ಬೆಲೆ

• ವಿಶ್ವನಾಥ ಎಸ್.

**ಬೆಂಗಳೂರು:** ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯು ಇನ್ನಷ್ಟು ಹೆಚ್ಚಳವಾದರೆ, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯು ಲೀಟರಿಗೆ ಗರಿಷ್ಠ ₹ 15ರವರೆಗೆ ಏರಿಕೆ ಕಾಣುವ ಸಾಧ್ಯತೆ ಇದೆ!

ಬ್ರೆಂಟ್ ಕಚ್ಚಾತೈಲದ ದರವು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಈಗ ಪ್ರತಿ ಬ್ಯಾರಲ್‌ಗೆ 75.75 ಡಾಲರ್ ಇದೆ. ಇದು ಬ್ಯಾರಲ್‌ಗೆ 80 ಡಾಲರ್ ಅಥವಾ 100 ಡಾಲರ್‌ಗೆ ಏರಿಕೆ ಆಗಬಹುದು ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ. 'ಕಚ್ಚಾ ತೈಲದ ದರವು ಈ ಮಟ್ಟಕ್ಕೆ ಏರಿದರೆ, ರಾಜ್ಯದಲ್ಲಿ ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್ ಬೆಲೆಯು ₹ 10ರಿಂದ ₹ 15ರವರೆಗೆ ಏರಿಕೆ ಆಗಬಹುದು' ಎಂದು ಕರ್ನಾಟಕ ರಾಜ್ಯ ಪೆಟ್ರೋಲಿಯಂ ವಿತರಕರ ಒಕ್ಕೂಟದ ಅಧ್ಯಕ್ಷ ಎಚ್.ಎಸ್. ಮಂಜಪ್ಪ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಪೆಟ್ರೋಲ್, ಡೀಸೆಲ್ ದರ ಏರಿಕೆಯಿಂದ ಸರಕು ಸಾಗಣೆ ವೆಚ್ಚ ಹೆಚ್ಚಾಗುತ್ತಿದೆ. ಕೋವಿಡ್‌ನಿಂದಾಗಿ ಈಗಾಗಲೇ ಆದಾಯಕ್ಕೆ ಕತ್ತರಿ ಬಿದ್ದಿದೆ. ಹೀಗಿರುವಾಗ ಪೆಟ್ರೋಲ್, ಡೀಸೆಲ್ ದರ ಏರಿಕೆ ಇನ್ನಷ್ಟು ಹೆಚ್ಚಾದರೆ ಮಾರಾಟ ಮತ್ತಷ್ಟು ಕಡಿಮೆ ಆಗಲಿದ್ದು, ಆರ್ಥಿಕ ಚೇತರಿಕೆಗೆ ಹೊಡೆತ ಬೀಳಲಿದೆ. ಇಂಧನ ದರ ತಗ್ಗಿಸುವ ನಿರ್ಧಾರವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೈಯಲ್ಲೇ ಇದ್ದು, ಜನರ ಮೇಲಿನ ಹೊರೆ ತಗ್ಗಿಸುವ ಮನಸ್ಸನ್ನು ಅವು ಮಾಡಬೇಕಿದೆ' ಎಂದು ಬೆಂಗಳೂರು ವಾಣಿಜ್ಯ ವರ್ತಕರ ಒಕ್ಕೂಟದ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಹೇಳಿದರು.



**ಬೆಲೆ ಏರಿಕೆ:** ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಬುಧವಾರವೂ ದೇಶದಾದ್ಯಂತ ಇಂಧನ ದರ ಹೆಚ್ಚಿಸಿವೆ. ಇದರಿಂದಾಗಿ ದೆಹಲಿಯಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 100ರ ಗಡಿ ದಾಟಿದ್ದು, ₹ 100.21ಕ್ಕೆ ತಲುಪಿದೆ. ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬುಧವಾರ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 103.62ರಷ್ಟು ಹಾಗೂ ಡೀಸೆಲ್ ದರ ಲೀಟರಿಗೆ ₹ 94.95ರಷ್ಟಾಗಿದೆ.

**'ಶೇ 8ಕ್ಕೆ ಹಣದುಬ್ಬರ'**

'ಕಚ್ಚಾತೈಲ ದರ ಏರಿಕೆಯಿಂದಾಗಿ ಪೆಟ್ರೋಲ್, ಡೀಸೆಲ್ ದರವೂ ಏರಿದರೆ, ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 8ರವರೆಗೂ ಏರಿಕೆ ಆಗುವ ಸಾಧ್ಯತೆ ಇದೆ' ಎಂದು ಬೆಂಗಳೂರಿನ ಐಸೆಕ್‌ನಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕ ಪ್ರೊ. ಕೃಷ್ಣರಾಜ್ ಹೇಳಿದರು.

'ಅಗತ್ಯ ವಸ್ತುಗಳ ಬೆಲೆಯನ್ನು ನಿಯಂತ್ರಿಸುವುದು, ತೆರಿಗೆಯನ್ನು ಹೆಚ್ಚು ಹೊರ ಆಗದಂತೆ ನಿಗದಿ ಮಾಡುವುದು ಹಾಗೂ ಮಾರುಕಟ್ಟೆಯಲ್ಲಿ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಇರುವಂತೆ ನೋಡಿಕೊಳ್ಳುವ ವಿಷಯದಲ್ಲಿ ಸರ್ಕಾರಗಳು ಎಡವಿವೆ. ಹೀಗಾಗಿ [illegible] ಪರಿಣಾಮ ಉಂಟಾಗಿದೆ' ಎಂದು ಅವರು ಅಭಿಪ್ರಾಯಪಟ್ಟರು.

## ಬಜಾಜ್ ಅಲಯನ್ಸ್ ಲೈಫ್‌ನಿಂದ ಹೊಸ ಪಿಂಚಣಿ ಯೋಜನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಜಾಜ್ ಅಲಯನ್ಸ್ ಲೈಫ್ ಕಂಪನಿಯು 'ಬಜಾಜ್ ಅಲಯನ್ಸ್ ಲೈಫ್ ಗ್ಯಾರಂಟೀಡ್ ಪೆನ್ಶನ್ ಗೋಲ್' ಎನ್ನುವ ವಾರ್ಷಿಕ ಪಿಂಚಣಿ ಯೋಜನೆ ಆರಂಭಿಸಿದೆ.

ವಿವಿಧ ರೀತಿಯ ಗ್ರಾಹಕರ ಪಿಂಚಣಿ ಅಗತ್ಯಗಳನ್ನು ಈಡೇರಿಸುವ ಉದ್ದೇಶದಿಂದ ಈ ಯೋಜನೆ ರೂಪಿಸಿದ್ದು, ಒಂಭತ್ತು ಬಗೆಯ ವಾರ್ಷಿಕ ಪಿಂಚಣಿ ಆಯ್ಕೆಗಳನ್ನು ನೀಡಲಾಗಿದೆ. ಇದು ಪಾಲಿಸಿದಾರರಿಗೆ ನಿವೃತ್ತಿ ಸಮಯದಲ್ಲಿ ತಮ್ಮ ಪಿಂಚಣಿ ಮೊತ್ತವನ್ನು ಖಾತರಿಪಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ ಎಂದು ಕಂಪನಿ ಹೇಳಿದೆ.

ಪಾಲಿಸಿದಾರರ ಸಂಗಾತಿಗೆ ತನ್ನ ಜೀವಿತಾವಧಿವರೆಗೆ ನಿಶ್ಚಿತ ಆದಾಯ ಪಡೆಯುವುದನ್ನು ಮುಂದುವರಿಸುವ ಆಯ್ಕೆಯನ್ನೂ ಈ ಯೋಜನೆಯು ನೀಡುತ್ತದೆ. ಪ್ರೀಮಿಯಂ ಪಾವತಿ ಅವಧಿಯು 5ರಿಂದ 10 ವರ್ಷಗಳಾಗಿದ್ದು, ಒಂದೇ ಪ್ರೀಮಿಯಂ ಮೂಲಕ ಪಾವತಿಸುವ ಆಯ್ಕೆಯೂ ಲಭ್ಯವಿದೆ.

**₹ 1,156 ಕೋಟಿ ಬೋನಸ್:** ಬಜಾಜ್ ಅಲಯನ್ಸ್ ಲೈಫ್ ಕಂಪನಿಯು ತನ್ನ ಪಾಲಿಸಿದಾರರಿಗೆ ₹ 1,156 ಕೋಟಿ ಮೊತ್ತದ ಬೋನಸ್ ಘೋಷಿಸಿದೆ. ₹ 315 ಕೋಟಿ ಮೊತ್ತದ ಒಂದು ಅವಧಿಯ ವಿಶೇಷ ಬೋನಸ್ ಅನ್ನೂ ಇದು ಒಳಗೊಂಡಿದೆ. ಇದರಿಂದಾಗಿ 12 ಲಕ್ಷ ಪಾಲಿಸಿದಾರರಿಗೆ ಪ್ರಯೋಜನ ಆಗುವ ನಿರೀಕ್ಷೆ ಮಾಡಲಾಗಿದೆ. ಕಂಪನಿಯು ಸತತ 20ನೇ ವರ್ಷವೂ ತನ್ನ ಪಾಲಿಸಿದಾರರಿಗೆ ಬೋನಸ್ ಘೋಷಣೆ ಮಾಡಿದೆ.

## ಪೇಟಿಎಂ ಆಡಳಿತ ಮಂಡಳಿಯಿಂದ ಹೊರಬಂದ ಚೀನಾ ಪ್ರಜೆಗಳು

**ನವದೆಹಲಿ (ಪಿಟಿಐ):** ಡಿಜಿಟಲ್ ಪಾವತಿ ಸೇವಾ ಕಂಪನಿ ಪೇಟಿಎಂ ಆಡಳಿತ ಮಂಡಳಿಯಲ್ಲಿ ಇದ್ದ ಚೀನಾ ಪ್ರಜೆಗಳೆಲ್ಲ ತಮ್ಮ ಸ್ಥಾನ ತೊರೆದಿದ್ದಾರೆ. ಅವರು ಹೊಂದಿದ್ದ ಸ್ಥಾನಗಳಿಗೆ ಭಾರತ ಹಾಗೂ ಅಮೆರಿಕದ ಪ್ರಜೆಗಳನ್ನು ನೇಮಿಸಲಾಗಿದೆ.

ಅಲಿಪೇ ಪ್ರತಿನಿಧಿ ಜಿಂಗ್ ಷಿಯಾನ್ ಡಾಂಗ್, ಆ್ಯಂಟ್ ಫೈನಾನ್ಶಿಯಲ್ಸ್‌ನ ಗುವೊಮಿಂಗ್ ಚೆಂಗ್, ಅಲಿಬಾಬಾ ಪ್ರತಿನಿಧಿಗಳಾದ ಮೈಕೇಲ್ ಯುವೆನ್ ಜೆನ್ ಯಾವೊ ಮತ್ತು ಟಿಂಗ್ ಹಾಂಗ್ ಕೆನ್ನಿ ಹೊ ಅವರು ಆಡಳಿತ ಮಂಡಳಿಯಿಂದ ಹೊರಬಂದಿದ್ದಾರೆ ಎಂದು ಕಂಪನಿ ತಿಳಿಸಿದೆ. ಇಷ್ಟು ಜನರ ಪೈಕಿ ಯಾವೊ ಅವರು ಅಮೆರಿಕದ ಪ್ರಜೆ.

ಆ್ಯಂಟ್ ಸಮೂಹದ ಪರವಾಗಿ ಅಮೆರಿಕದ ಪ್ರಜೆ ಡಗ್ಲಾಸ್ ಫೀಜಿನ್ ಅವರು ಆಡಳಿತ ಮಂಡಳಿಗೆ ಪ್ರವೇಶ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸಾಮ ಕ್ಯಾಪಿಟಲ್ಸ್‌ನ ಅಶಿತ್ ರಂಜಿತ್ ಲಿಲಾನಿ, ಸಾಫ್ಟ್‌ಬ್ಯಾಂಕ್ ಪ್ರತಿನಿಧಿ ವಿಕಾಸ್ ಅಗ್ನಿಹೋತ್ರಿ ಅವರು ಆಡಳಿತ ಮಂಡಳಿಯಲ್ಲಿ ಸ್ಥಾನ ಪಡೆದಿದ್ದಾರೆ.

ಪೇಟಿಎಂ, ತನ್ನ ಷೇರುಗಳನ್ನು ಖರೀದಿಸಲು ಸಾರ್ವಜನಿಕರಿಗೆ ಅವಕಾಶ ಮಾಡಿಕೊಡುವ ಪ್ರಕ್ರಿಯೆ ನಡೆಸಿರುವ ಸಂದರ್ಭದಲ್ಲೇ ಈ ಬದಲಾವಣೆಗಳು ಆಗಿವೆ. ₹ 16,600 ಕೋಟಿ ಬಂಡವಾಳ ಸಂಗ್ರಹಿಸಲು ಕಂಪನಿಯು ತನ್ನ ಷೇರುದಾರರಿಂದ ಜುಲೈ 12ರಂದು ಅನುಮತಿ ಕೋರುವ ನಿರೀಕ್ಷೆ ಇದೆ.

**ಪೇಟಿಎಂನಲ್ಲಿ ಯಾರ ಷೇರು ಎಷ್ಟಿದೆ?** ಪ್ರಮಾಣ (%)

| | |
|---|---|
| ಅಲಿಬಾಬಾದ ಆ್ಯಂಟ್ ಸಮೂಹ | 29.71 |
| ಸಾಫ್ಟ್‌ಬ್ಯಾಂಕ್ ವಿಷನ್ ಫಂಡ್ | 19.63 |
| ಎಸ್‌ಎಐಎಫ್ ಪಾರ್ಟ್ನರ್ಸ್ | 18.56 |
| ವಿಜಯ್ ಶೇಖರ್ ಶರ್ಮ | 14.67 |

ಎಜಿಎಚ್ ಹೋಲ್ಡಿಂಗ್, ಟಿ ರೋವ್ ಪ್ರೈಸ್, ಡಿಸ್ಕವರಿ ಕ್ಯಾಪಿಟಲ್ ಮತ್ತು ಬರ್ಕ್‌ಶೈರ್ ಹಾತ್‌ವೇ ಕಂಪನಿಗಳು ತಲಾ ಶೇಕಡ 10ರಷ್ಟಕ್ಕಿಂತ ಕಡಿಮೆ ಷೇರುಪಾಲು ಹೊಂದಿವೆ.

## 53 ಸಾವಿರದ ಗಡಿ ದಾಟಿ ವಹಿವಾಟು ಮುಗಿಸಿದ ಸೆನ್ಸೆಕ್ಸ್

**ಮುಂಬೈ (ಪಿಟಿಐ):** ಮುಂಬೈ ಷೇರುಪೇಟೆ (ಬಿಎಸ್‌ಇ) ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಬುಧವಾರದ ವಹಿವಾಟಿನಲ್ಲಿ 193 ಅಂಶ ಏರಿಕೆ ಕಂಡಿತು. ದಿನದ ಕೊನೆಯಲ್ಲಿ 53 ಸಾವಿರ ಅಂಶಗಳ ಗಡಿ ದಾಟಿ ವಹಿವಾಟು ಮುಗಿಸಿತು. ದಿನದ ವಹಿವಾಟಿನ ಅಂತ್ಯಕ್ಕೆ ಸೆನ್ಸೆಕ್ಸ್ 53 ಸಾವಿರದ ಗಡಿ ದಾಟಿರುವುದು ಇದೇ ಮೊದಲು.

ಲೋಹ, ಹಣಕಾಸು ಮತ್ತು ಬ್ಯಾಂಕಿಂಗ್ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರು. ಆದರೆ ರೂಪಾಯಿ ಮೌಲ್ಯ ಇಳಿಕೆಯಾಗಿದ್ದು ಹಾಗೂ ಜಾಗತಿಕ ಮಾರುಕಟ್ಟೆಗಳಲ್ಲಿ ಹೆಚ್ಚಿನ ಉತ್ಸಾಹ ಇರದಿದ್ದುದು ದೇಶಿ ಸೂಚ್ಯಂಕಗಳ ಜಿಗಿತದ ಪ್ರಮಾಣವನ್ನು ತುಸು ತಗ್ಗಿಸಿದವು ಎಂದು ವರ್ತಕರು ಹೇಳಿದ್ದಾರೆ.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕವು 61 ಅಂಶ ಏರಿಕೆ ಕಂಡಿತು.

### ಮುಂಬೈ ಧಾರಣೆ

**ಶೇಂಗಾ** 7-7-2021

| | |
|---|---|
| ಜಾವಾ 70/80(ಹೊಸ) | 9650-9700 |
| ಜಾವಾ 80/90(ಹೊಸ) | 9100-9150 |
| ದಪ್ಪ ಮಧ್ಯಪ್ರದೇಶ(ಹೊಸ) | 9700-9800 |
| ದಪ್ಪ ಗುಜರಾತ್(ಹೊಸ) | 9200-9300 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1445 (1445) |
| ಒಂದು ವಾರದ ಡೆಲಿವರಿ | 1415 (1440) |
| ಸೋಯಾ ಕಚ್ಚಾ | 1270 (1290) |
| ಪಾಮ್ ವಾರದ ಡೆಲಿವರಿ | 1163 (1173) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1270 (1280) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ 47,750 (47,700)
ಬೆಳ್ಳಿ ಕೆ.ಜಿ 69,400 (69,800)

ಆವರಣದಲ್ಲಿ ಹಿಂದಿ ದಿನದ ಧಾರಣೆ

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 700-800 |
| ನಡುಗೋಲು | 850-900 |
| ರಾಶಿ | 950-1000 |
| ರಾಶಿ ಉತ್ತಮ | 1000-1050 |
| ಜರಡಿ | 1150-1200 |
| ಹೆರಕಿದ್ದು | 1500-1600 |
| ಹಸಿರು ಸಾಧಾರಣ | 900-1000 |
| ಹಸಿರು ಉತ್ತಮ | 1100-1200 |
| ಹಸಿರು ಅತಿ ಉತ್ತಮ | 1400-1500 |
| ಕಾಳು ಮೆಣಸು | 385 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-43000 |
| ಹಳತು | 42500-52000 |
| **ಕುಮಟ** | |
| ಚಿಪ್ಪು | 30019-33019 |
| ಕೋಕ | 19869-30399 |
| ಫ್ಯಾಕ್ಟರಿ | 14709-18169 |
| ಹಳೆಚಾಲಿ | 41019-42679 |
| ಹೊಸಚಾಲಿ | 36899-39100 |
| **ಸಿದ್ದಾಪುರ** | |
| ಬಿಳಿಗೋಟು | 26699-33099 |
| ಚಾಲಿ | 35050-38509 |
| ಕೋಕ | 23099-31699 |
| ಕೆಂಪುಗೋಟು | 24699-31499 |
| ರಾಶಿ | 37489-40599 |
| ತಟ್ಟಿಬೆಟ್ಟೆ | 32589-37189 |
| **ಶಿವಮೊಗ್ಗ (ಎಪಿಎಂಸಿ)** | |
| ಬೆಟ್ಟೆ | 42439-44700 |
| ಗೊರಬಲು | 18509-33869 |
| ರಾಶಿ | 36069-42100 |
| ಸರಕು | 48000-73300 |
| **ಚನ್ನಗಿರಿ (ತುಮ್ಕೋಸ್)** | |
| ರಾಶಿ | 41509-42349 |
| ಬೆಟ್ಟೆ | 36401-36401 |
| **ರಾಮನಗರ ರೇಷ್ಮೆ** | |
| ಮಿಶ್ರತಳಿ | 235-400 |
| ದ್ವಿತಳಿ | 338-493 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 11400 | 10800 | 10600 | 148.10 ಸೆಂಟ್ಸ್ |
| ಎಸಿ | 4510 | 4400 | 4200 | |
| ಆರ್‌ಪಿ | 5500 | 5500 | 5700 | ಲಂಡನ್ |
| ಆರ್‌ಸಿ | 3300 | 3150 | 3350 | 1694 ಡಾಲರ್ಸ್ |

ವಿಂಬಲ್ಡನ್ ಟೆನಿಸ್ ಟೂರ್ನಿ: ರೋಜರ್ ಫೆಡರರ್‌ಗೆ ಸೋಲು

# ಸೆಮಿಗೆ ಜೊಕೊವಿಚ್; ಡೆನಿಸ್ ಎದುರಾಳಿ

**ಲಂಡನ್ (ಎಎಫ್‌ಪಿ):** ಅಮೋಘ ಆಟವಾಡಿದ ವಿಶ್ವದ ಅಗ್ರ ರ‍್ಯಾಂಕಿನ ಆಟಗಾರ ನೊವಾಕ್ ಜೊಕೊವಿಚ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ತಲುಪಿದರು. ಆದರೆ ದಿಗ್ಗಜ ಆಟಗಾರ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಸೋತು ಹೊರನಡೆದರು.

ಬುಧವಾರ ಇಲ್ಲಿ ನಡೆದ ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಸರ್ಬಿಯದ ಜೊಕೊವಿಚ್ 6-3, 6-4, 6-4ರಿಂದ ಹಂಗರಿಯ ಮಾರ್ಟನ್ ಫುಕ್ಸೊವಿಕ್ಸ್ ಅವರನ್ನು ಪರಾಭವಗೊಳಿಸಿದರು. ಇದರೊಂದಿಗೆ 10ನೇ ಬಾರಿ ಅವರು ಈ ಟೂರ್ನಿಯ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟಿದ್ದಾರೆ.



ನೊವಾಕ್ ಜೊಕೊವಿಚ್ ಆಟದ ವೈಖರಿ– ಎಎಫ್‌ಪಿ ಚಿತ್ರ

34ರ ಹರಯದ ಜೊಕೊವಿಚ್‌ಗೆ ಹುಲ್ಲಿನಂಗಣದಲ್ಲಿ ಒಲಿದ 100ನೇ ಜಯವಿದು. ಸೆಮಿಫೈನಲ್‌ನಲ್ಲಿ ಅವರಿಗೆ ಕೆನಡಾದ ಡೆನಿಸ್ ಶಪೊವಲೊವ್ ಸವಾಲು ಎದುರಾಗಿದೆ. ಎಂಟರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಶಪೊವಲೊವ್ 3-6, 5-7, 6-1, 6-4ರಿಂದ ರಷ್ಯಾದ ಕರೆನ್ ಕಚನೊವ್ ಸವಾಲು ಮೀರಿದರು.

**ಫೆಡರರ್‌ಗೆ ಸೋಲು:** ಎಂಟು ಬಾರಿಯ ವಿಂಬಲ್ಡನ್ ಚಾಂಪಿಯನ್ ರೋಜರ್ ಫೆಡರರ್ ಅವರ ಮತ್ತೊಂದು ಪ್ರಶಸ್ತಿಯ ಕನಸು ನನಸಾಗಲಿಲ್ಲ. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅವರು 3-6, 6-7, 0-6ರಿಂದ ಪೋಲೆಂಡ್‌ನ ಹುಬರ್ಟ್ ಹರ್ಕಾಜ್ ಎದುರು ಎಡವಿದರು.

**ಸಾನಿಯಾ -ಬೋಪಣ್ಣ ಪರಾಭವ:** ಮಿಶ್ರ ಡಬಲ್ಸ್‌ನಲ್ಲಿ ಕಣಕ್ಕಿಳಿದಿದ್ದ ಭಾರತದ ಸಾನಿಯಾ ಮಿರ್ಜಾ– ರೋಹನ್ ಬೋಪಣ್ಣ ಜೋಡಿಯು ಮೂರನೇ ಸುತ್ತಿನ ಹಣಾಹಣಿಯಲ್ಲಿ 3-6, 6-3, 9-11ರಿಂದ ನೆದರ್ಲೆಂಡ್ಸ್‌ನ ಜೀನ್ ಜೂಲಿಯನ್ ರೋಜರ್– ಆ್ಯಂಡ್ರೆಜಾ ಕ್ಲೆಪಾಕ್ ಎದುರು ನಿರಾಸೆ ಅನುಭವಿಸಿತು.

## ಬ್ಯಾಸ್ಕೆಟ್‌ಬಾಲ್: ಎಎಸ್‌ಸಿ ಜಯಭೇರಿ

**ಬೆಂಗಳೂರು:** ಎಎಸ್‌ಸಿ ತಂಡವು ಇಲ್ಲಿ ನಡೆಯುತ್ತಿರುವ ಪ್ರೊ. ಪರಪ್ಪ ಸ್ಮಾರಕ ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಭರ್ಜರಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಎಸ್‌ಸಿ ತಂಡವು 109–39ರಿಂದ ಬಿಎಸ್‌ಎನ್‌ಎಲ್ ಎದುರು ಗೆದ್ದಿತು.

ಇತರ ಪಂದ್ಯಗಳಲ್ಲಿ ಜೆಎಸ್‌ಸಿ ತಂಡವು 86–29ರಿಂದ ರಾಜ್‌ಮಹಲ್ ಬಿಸಿ ಎದುರು, ಯಂಗ್ ಒರಿಯನ್ಸ್ 81–59ರಿಂದ ಇಂದಿರಾನಗರ ಬ್ಯಾಸ್ಕೆಟ್‌ಬಾಲ್ ಕ್ಲಬ್‌ಅನ್ನು ಪರಾಭವಗೊಳಿಸಿತು. ಸಿಎಂಪಿ ತಂಡವು 91–40ರಿಂದ ಕಸ್ಟಮ್ಸ್ ಆ್ಯಂಡ್ ಜಿಎಸ್‌ಟಿ ಎದುರು, ಬ್ಯಾಂಕ್ ಆಫ್ ಬರೋಡಾ 77–38ರಿಂದ ಬೀಗಲ್ಸ್ ಬಿಸಿ ಎದುರು ಜಯ ಸಾಧಿಸಿದವು.

## ಐಸಿಸಿ ತಿಂಗಳ ಆಟಗಾರ್ತಿ: ಶಫಾಲಿ, ಸ್ನೇಹ್ ನಾಮನಿರ್ದೇಶನ

**ದುಬೈ (ಪಿಟಿಐ):** ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ಉತ್ತಮ ಸಾಮರ್ಥ್ಯ ತೋರುತ್ತಿರುವ ಭಾರತ ಮಹಿಳಾ ಕ್ರಿಕೆಟ್ ತಂಡದ ಶಫಾಲಿ ವರ್ಮಾ ಹಾಗೂ ಸ್ನೇಹ್ ರಾಣಾ ಅವರು 'ಐಸಿಸಿಯ ತಿಂಗಳ ಆಟಗಾರ್ತಿ' ಪುರಸ್ಕಾರಕ್ಕೆ ನಾಮನಿರ್ದೇಶನಗೊಂಡಿದ್ದಾರೆ.

ಬ್ಯಾಟರ್ ಶಫಾಲಿ, ಆಲ್‌ರೌಂಡರ್ ಸ್ನೇಹ್ ಅವರಲ್ಲದೆ ಇಂಗ್ಲೆಂಡ್‌ನ ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಕೂಡ ಈ ಪಟ್ಟಿಯಲ್ಲಿದ್ದಾರೆ.



ಶಫಾಲಿ ವರ್ಮಾ

'ತಿಂಗಳ ಆಟಗಾರ' ವಿಭಾಗಕ್ಕೆ ನ್ಯೂಜಿಲೆಂಡ್ ಬ್ಯಾಟ್ಸ್‌ಮನ್ ಡೆವೊನ್ ಕಾನ್ವೆ, ವೇಗಿ ಕೈಲ್ ಜೆಮಿಸನ್ ಮತ್ತು ದಕ್ಷಿಣ ಆಫ್ರಿಕಾದ ವಿಕೆಟ್ ಕೀಪರ್ ಕ್ವಿಂಟನ್ ಡಿಕಾಕ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ. ಶಫಾಲಿ, ಇಂಗ್ಲೆಂಡ್ ಎದುರು ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು.

## ಮೆಸ್ಸಿ–ನೇಮರ್ ಮುಖಾಮುಖಿ

**ಬ್ರೆಜಿಲಿಯಾ, ಬ್ರೆಜಿಲ್ (ಎಪಿ):** ವಿಶ್ವದ ಪ್ರಮುಖ ಆಟಗಾರರಾದ ಲಯೊನೆಲ್ ಮೆಸ್ಸಿ ಹಾಗೂ ನೇಮರ್ ಅವರ ಮುಖಾಮುಖಿಗೆ ವೇದಿಕೆ ಸಜ್ಜಾಗಿದೆ. ಕೋಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯಲ್ಲಿ ಅರ್ಜೆಂಟೀನಾ ಹಾಗೂ ಬ್ರೆಜಿಲ್ ತಂಡಗಳು ಫೈನಲ್ ತಲುಪಿದ್ದು, ರಿಯೊ ಡಿ ಜನೈರೊದ ಐತಿಹಾಸಿಕ ಮರಕಾನ ಕ್ರೀಡಾಂಗಣದಲ್ಲಿ ಶನಿವಾರ ಪ್ರಶಸ್ತಿಗಾಗಿ ಸೆಣಸಲಿವೆ.

ಮಂಗಳವಾರ ರಾತ್ರಿ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ತಂಡವು 3–2ರಿಂದ ಕೊಲಂಬಿಯಾ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಮಣಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು 1–1 ಸಮಬಲ ಸಾಧಿಸಿದ್ದರಿಂದ ಶೂಟೌಟ್ ಮೊರೆ ಹೋಗಲಾಗಿತ್ತು.

ಸೋಮವಾರ ನಡೆದ ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಬ್ರೆಜಿಲ್ 1–0ಯಿಂದ ಪೆರು ಎದುರು ಗೆಲುವು ಸಾಧಿಸಿತ್ತು.

## ಇಂಗ್ಲೆಂಡ್‌ಗೆ ತೆರಳಲ್ಲ ಪೃಥ್ವಿ, ಪಡಿಕ್ಕಲ್

**ನವದೆಹಲಿ (ಪಿಟಿಐ):** ಇಂಗ್ಲೆಂಡ್‌ನಲ್ಲಿರುವ ಭಾರತ ತಂಡದಲ್ಲಿ ಆಡಲು ಕರ್ನಾಟಕದ ದೇವದತ್ತ ಪಡಿಕ್ಕಲ್ ಮತ್ತು ಮುಂಬೈನ ಪೃಥ್ವಿ ಶಾ ಅವರನ್ನು ಕಳಿಸುತ್ತಿಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮೂಲಗಳು ತಿಳಿಸಿವೆ.

ಅವರಿಬ್ಬರೂ ಶ್ರೀಲಂಕಾದಲ್ಲಿ ಏಕದಿನ ಸರಣಿಯಲ್ಲಿ ಆಡಲಿರುವ ಭಾರತ ತಂಡದಲ್ಲಿಯೇ ಉಳಿಯಲಿದ್ದಾರೆ.

ಇಂಗ್ಲೆಂಡ್‌ನಲ್ಲಿ ಮುಂದಿನ ತಿಂಗಳು ಟೆಸ್ಟ್ ಸರಣಿ ನಡೆಯಲಿದೆ. ಈಚೆಗೆ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಶುಭಮನ್ ಗಿಲ್ ಅವರು ಗಾಯಗೊಂಡಿದ್ದರು. ಅವರ ಸ್ಥಾನಕ್ಕೆ ಪೃಥ್ವಿ ಶಾ ಅಥವಾ ದೇವದತ್ತ ಪಡಿಕ್ಕಲ್ ಅವರನ್ನು ಇಂಗ್ಲೆಂಡ್‌ಗೆ ಕಳಿಸಿಕೊಡುವಂತೆ ಜೂನ್ 28ರಂದು ತಂಡದ ಆಡಳಿತ ವ್ಯವಸ್ಥಾಪಕ ಗಿರೀಶ ಡೋಂಗ್ರೆಯವರು ಮನವಿ ಮಾಡಿದ್ದರು.

ಆದರೆ ರಾಷ್ಟ್ರೀಯ ತಂಡದ ಆಯ್ಕೆ ಸಮಿತಿ ಮುಖ್ಯಸ್ಥ ಚೇತನ್ ಶರ್ಮಾ ಅವರು ಇವರಿಬ್ಬರನ್ನು ಕಳಿಸುವ ಕುರಿತು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಇಂಗ್ಲೆಂಡ್‌ನಲ್ಲಿ ಈಗಾಗಲೇ ನಾಲ್ವರು ಆರಂಭಿಕ ಬ್ಯಾಟ್ಸ್‌ಮನ್‌ಗಳು ಇರುವುದರಿಂದ ಶರ್ಮಾ ಪ್ರತಿಕ್ರಿಯೆ ನೀಡಲಿಲ್ಲವೆಂದು ಹೇಳಲಾಗುತ್ತಿದೆ.

ಸದ್ಯ ಇಂಗ್ಲೆಂಡ್‌ನಲ್ಲಿರುವ ಅಭಿಮನ್ಯು ಈಶ್ವರನ್ ಅವರ ಬ್ಯಾಟಿಂಗ್ ತಾಂತ್ರಿಕವಾಗಿ ಉತ್ಕೃಷ್ಟವಾಗಿಲ್ಲ. ಅಲ್ಲದೇ ತಂಡದ ಥ್ರೋಡೌನ್ ಪರಿಣತ ರಘು (ರಾಘವೇಂದ್ರ) ಅವರ ಎಸೆತಗಳನ್ನು ಎದುರಿಸುವಲ್ಲಿಯೂ ವೈಫಲ್ಯ ಅನುಭವಿಸುತ್ತಿದ್ದಾರೆನ್ನಲಾಗಿದೆ.



ದೇವದತ್ತ ಪಡಿಕ್ಕಲ್



ಪೃಥ್ವಿ ಶಾ

'ಕೆ.ಎಲ್. ರಾಹುಲ್ ಅವರನ್ನು ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಎಂದು ಪರಿಗಣಿಸುವುದು ಏಕೆ? ಅವರು ಹಲವು ಪಂದ್ಯಗಳಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಆಗಿ ಆಡಿದ್ದಾರೆ. ಇಂಗ್ಲೆಂಡ್‌ನಲ್ಲಿ ಯಾರೇ ಬ್ಯಾಟಿಂಗ್ ಆರಂಭಿಸಿದರೂ ಸಮಾನವಾದ ಸವಾಲು ಎದುರಿಸಬೇಕು' ಎಂದು ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಜಿಮ್ಮಿ ಆ್ಯಂಡರ್ಸನ್ ಅವರನ್ನು ಎದುರಿಸಲು ರಾಹುಲ್ ಅವರಂತಹ ಅನುಭವಿಗೆ ಸಾಧ್ಯವಿದೆ. ಆದರೆ, ಪೃಥ್ವಿ ಶಾ ಅವರು ಬಹಳ ದಿನಗಳಿಂದ ದೀರ್ಘ ಮಾದರಿಯಲ್ಲಿ ಆಡಿಲ್ಲ. ಇನ್ನು ಈಶ್ವರನ್ ಅವರು ಟ್ರೇನಿಂಗ್ ನಲ್ಲಿ ಆಡುವುದನ್ನು ನೋಡಿ ನಿರ್ಧರಿಸುವುದು ಸರಿಯಲ್ಲ. ಥ್ರೋಡೌನ್ ಎದುರಿಸಲು ವಿಫಲರಾದರೆ ಪಂದ್ಯದಲ್ಲಿಯೂ ಸಫಲರಾಗುವುದಿಲ್ಲ ಎಂದರ್ಥವಲ್ಲ' ಎಂದರು.

ಕೇಂದ್ರ ಸಚಿವ ಸಂಪುಟ ಪುನರ್‌ರಚನೆ • ಉತ್ತರ ಪ್ರದೇಶಕ್ಕೆ ಒಟ್ಟು 14 ಸ್ಥಾನ • ಹೊಸದಾಗಿ ಏಳು ಮಂದಿ ಸೇರ್ಪಡೆ

# ಚುನಾವಣೆಯತ್ತ ದೃಷ್ಟಿ ನೆಟ್ಟ ಪುನರ್‌ರಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ವರ್ಷ ಉತ್ತರ ಪ್ರದೇಶದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿ ಇರಿಸಿಕೊಂಡು ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ಇನ್ನೂ 7 ಮಂದಿಗೆ ಸಚಿವ ಸ್ಥಾನ ನೀಡಿದ್ದಾರೆ. ಕೇಂದ್ರ ಮಂತ್ರಿಮಂಡಲದಲ್ಲಿ ಉತ್ತರ ಪ್ರದೇಶದಿಂದ ಸಚಿವರಾದವರ ಸಂಖ್ಯೆ ಈ ಮೂಲಕ ದುಪ್ಪಟ್ಟಾಗಿದೆ.

ರಾಜನಾಥ್ ಸಿಂಗ್, ಮಹೇಂದ್ರನಾಥ್ ಪಾಂಡೆ, ವಿ.ಕೆ. ಸಿಂಗ್, ಕೃಷ್ಣ ಪಾಲ್, ಸಾಧ್ವಿ ನಿರಂಜನ ಜ್ಯೋತಿ ಮತ್ತು ಸಂಜೀವ್ ಬಾಲ್ಯನ್ ಅವರು ಮೋದಿ ಅವರ ನೇತೃತ್ವದ ಎರಡನೇ ಅವಧಿಯ ಸರ್ಕಾರದ ಸಚಿವ ಸಂಪುಟದಲ್ಲಿ ಉತ್ತರ ಪ್ರದೇಶವನ್ನು ಪ್ರತಿನಿಧಿಸುತ್ತಿದ್ದಾರೆ. ಬುಧವಾರ ಪ್ರಮಾಣವಚನ ಸ್ವೀಕರಿಸಿದ ಅನುಪ್ರಿಯಾ ಪಟೇಲ್, ಪಂಕಜ್ ಚೌಧರಿ, ಸತ್ಯಪಾಲ್ ಸಿಂಗ್ ಬಘೇಲ್, ಭಾನು ಪ್ರತಾಪ್ ಸಿಂಗ್ ವರ್ಮಾ, ಕೌಶಲ್ ಕಿಶೋರ್, ಬಿ.ಎಲ್. ವರ್ಮಾ ಮತ್ತು ಅಜಯ್ ಕುಮಾರ್ ತೇಣಿ ಅವರನ್ನು ಸೇರಿಸಿಕೊಂಡರೆ ಕೇಂದ್ರ ಮಂತ್ರಿಮಂಡಲದಲ್ಲಿ ಉತ್ತರ ಪ್ರದೇಶದವರ ಸಂಖ್ಯೆ 13ಕ್ಕೆ ಏರುತ್ತದೆ. ಗುಜರಾತ್‌ನವರಾದರೂ ಲೋಕಸಭೆಯಲ್ಲಿ ಉತ್ತರ ಪ್ರದೇಶದ ವಾರಾಣಸಿಯನ್ನು ಪ್ರತಿನಿಧಿಸುವ ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಗಣನೆಗೆ ತೆಗೆದುಕೊಂಡರೆ ಈ ಸಂಖ್ಯೆ 14ಕ್ಕೆ ಏರುತ್ತದೆ.

ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯನ್ನು ಕೇಂದ್ರವಾಗಿರಿಸಿಕೊಂಡೇ ಮಂತ್ರಿಮಂಡಲವನ್ನು ಪುನರ್ ರಚಿಸಲಾಗಿದೆ ಎನ್ನಲಾಗಿದೆ. ಹೊಸದಾಗಿ ಮಂತ್ರಿಮಂಡಲ ಸೇರಿದ ರಾಜ್ಯದ ಏಳು ಜನರಲ್ಲಿ ಸತ್ಯಪಾಲ್ ಸಿಂಗ್ ಬಘೇಲ್, ಭಾನು ಪ್ರತಾಪ್ ಸಿಂಗ್ ವರ್ಮಾ ಮತ್ತು ಕೌಶಲ್ ಕಿಶೋರ್ ಅವರು ದಲಿತ ಸಮುದಾಯದವರು. ದಲಿತ ಸಮುದಾಯವನ್ನು ಕಡೆಗಣಿಸಿಲ್ಲ ಎಂಬ ಸಂದೇಶ ನೀಡಲೆಂದೇ ಪ್ರಧಾನಿ, ಇವರಿಗೆ ಚುನಾವಣೆ ಹೊಸ್ತಿಲಲ್ಲಿ ಸಚಿವ ಸ್ಥಾನ ನೀಡಿದ್ದಾರೆ.

ಅಪ್ನಾ ದಳದ ಅನುಪ್ರಿಯಾ ಪಟೇಲ್ ಅವರು ಕುರ್ಮಿ ಸಮುದಾಯದವರು. ಹಲವು ಕ್ಷೇತ್ರಗಳಲ್ಲಿ ಈ ಸಮುದಾಯದ ಮತದಾರರು ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಕುರ್ಮಿ ಜನರನ್ನು ಕಡೆಗಣಿಸಲಾಗಿದೆ ಎಂಬ ಸಂದೇಶ ಹೋಗಬಾರದು ಎಂಬ ಕಾರಣದಿಂದ ಅನುಪ್ರಿಯಾ ಅವರಿಗೆ ಸಚಿವ ಸ್ಥಾನ ನೀಡಲಾಗಿದೆ, ಅದೂ ಸರ್ಕಾರ ರಚನೆಯಾಗಿ ಬರೋಬ್ಬರಿ ಎರಡು ವರ್ಷದ ನಂತರ ಎಂದು ವಿಶ್ಲೇಷಿಸಲಾಗಿದೆ.

ಬುಧವಾರ ಪ್ರಮಾಣವಚನ ಸ್ವೀಕರಿಸಿದ ನೂತನ ಸಚಿವರಲ್ಲಿ ಏಳು ಮಂದಿ ಉತ್ತರ ಪ್ರದೇಶದವರಾಗಿದ್ದರೆ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಕರ್ನಾಟಕದ ತಲಾ ನಾಲ್ಕು ಮಂದಿಗೆ ಮಂತ್ರಿಮಂಡಲದಲ್ಲಿ ಸ್ಥಾನ ನೀಡಲಾಗಿದೆ. ಗುಜರಾತ್‌ನ ಮೂವರು, ಮಧ್ಯಪ್ರದೇಶ ಮತ್ತು ಬಿಹಾರದ ತಲಾ ಇಬ್ಬರಿಗೆ ಅವಕಾಶ ದೊರೆತಿದೆ. ಇನ್ನು ರಾಜಸ್ಥಾನ ಮತ್ತು ಅಸ್ಸಾಂನ ಒಬ್ಬರಿಗೆ ಮಂತ್ರಿಮಂಡಲದಲ್ಲಿ ಸ್ಥಾನ ದೊರೆತಿದೆ.

ಅಸ್ಸಾಂನಲ್ಲಿ ಸತತ ಎರಡನೇ ಬಾರಿಗೆ ಗೆಲ್ಲುವಲ್ಲಿ ಯಶಸ್ವಿಯಾದರೂ ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿದ ಸರ್ಬಾನಂದ ಸೋನೊವಾಲ್ ಅವರಿಗೆ ಕೇಂದ್ರ ಮಂತ್ರಿಮಂಡಲದಲ್ಲಿ ಸಚಿವ ಸ್ಥಾನ ನೀಡಲಾಗಿದೆ.

## ಮೋದಿಯ ನೂತನ ಟೀಂ

**78** ಕೇಂದ್ರ ಮಂತ್ರಿಮಂಡಲದಲ್ಲಿ ಈಗ ಇರುವ ಸದಸ್ಯರ ಸಂಖ್ಯೆ

**12** ಕೇಂದ್ರ ಮಂತ್ರಿಮಂಡಲದಲ್ಲಿ ದಲಿತ ಸಮುದಾಯದ ನಾಯಕರ ಸಂಖ್ಯೆ. ಚಮಾರ್-ರಾಮದಾಸಿಯಾ, ಖಾತಿಕ್, ಪಾಸಿ, ಕೋರಿ, ಮಾದಿಗ, ಮಹರ್, ಅರುಂಧತಿಯಾರ್, ಮೇಘ್ವಾಲ್, ರಾಜಬೋಂಶಿ, ಮಥುವಾ-ನಾಮಶೂದ್ರಾ, ಧನಗಾರ್ ಮತ್ತು ದುಶದ್ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ


**8** ಕೇಂದ್ರ ಮಂತ್ರಿಮಂಡಲದಲ್ಲಿರುವ ಪರಿಶಿಷ್ಟ ಪಂಗಡಗಳ ನಾಯಕರ ಸಂಖ್ಯೆ. ಅರುಣಾಚಲ ಪ್ರದೇಶ, ಅಸ್ಸಾಂ, ಜಾರ್ಖಂಡ್, ಛತ್ತೀಸಗಡ, ಪಶ್ಚಿಮ ಬಂಗಾಳ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಒಡಿಶಾ ಮತ್ತು ಅಸ್ಸಾಂ ಪರಿಶಿಷ್ಟ ಪಂಗಡಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ. ಗೊಂಡ, ಸಂತಾಲ್, ಮಿಜಿ, ಮುಂಡಾ, ಟೀ ಟ್ರೈಬ್, ಕೋಕನ ಮತ್ತು ಸೋನೊವಾಲ್-ಕಚಾರಿ ಪಂಗಡಗಳಿಗೆ ಅವಕಾಶ ದೊರೆತಿದೆ

**27** ಕೇಂದ್ರ ಮಂತ್ರಿಮಂಡಲದಲ್ಲಿರುವ ಇತರೆ ಹಿಂದುಳಿದ ವರ್ಗಗಳ ನಾಯಕರ ಸಂಖ್ಯೆ

**58** ಕೇಂದ್ರ ಮಂತ್ರಿಮಂಡಲದ ಸದಸ್ಯರ ಸರಾಸರಿ ವಯಸ್ಸು

- **4** ಮಾಜಿ ಮುಖ್ಯಮಂತ್ರಿಗಳು
- **18** ಮಾಜಿ ರಾಜ್ಯ ಸಚಿವರು
- **39** ಮಾಜಿ ಶಾಸಕರು
- **13** ವಕೀಲರು
- **6** ವೈದ್ಯರು
- **5** ಎಂಜಿನಿಯರ್‌ಗಳು
- **7** ಮಾಜಿ ನಾಗರಿಕ ಸೇವಾ ಅಧಿಕಾರಿಗಳು
- **7** ಪಿಎಚ್‌.ಡಿ ಪಡೆದವರು
- **3** ಎಂಬಿಎ ಪದವಿ ಪಡೆದವರು
- **68** ಪದವೀಧರರು

## ಉದ್ಯಮಿಗೆ ಅರಸಿ ಬಂದ ಅವಕಾಶ


ರಾಜೀವ್ ಚಂದ್ರಶೇಖರ್

ಬೆಂಗಳೂರು: ಉದ್ಯಮಿ ರಾಜೀವ್ ಚಂದ್ರಶೇಖರ್ ಅವರು ಮೂರು ಬಾರಿ ರಾಜ್ಯಸಭಾ ಸದಸ್ಯರಾಗಿ ಕರ್ನಾಟಕದಿಂದ ಆಯ್ಕೆಯಾಗಿದ್ದಾರೆ. ಕೇರಳ ಮೂಲದವರಾದರೂ ಬೆಂಗಳೂರು ವಾಸಿ. ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ (ಬಿ.ಇ), ಅಮೆರಿಕಾದ ಇಲಿನಾಯ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಕಂಪ್ಯೂಟರ್ ವಿಜ್ಞಾನದಲ್ಲಿ ಎಂಎಸ್ ಪದವಿ ಪಡೆದಿದ್ದಾರೆ. ಇಂಟೆಲ್ ಕಂಪನಿಯ ಅಮೆರಿಕ ಕಚೇರಿಯಲ್ಲಿ ಮೈಕ್ರೋ ಪ್ರೊಸೆಸರ್ ತಂಡದಲ್ಲಿ ಎಂಜಿನಿಯರ್ ಆಗಿ ವೃತ್ತಿಯನ್ನು ಆರಂಭಿಸಿದರು. 1991ರಲ್ಲಿ ಭಾರತಕ್ಕೆ ಮರಳಿದ ಅವರು, 1994 ರಲ್ಲಿ ಭಾರತದಲ್ಲಿ ಬಿಪಿಎಲ್ ಮೊಬೈಲ್ ಕಂಪನಿ ಆರಂಭಿಸಿದರು. ಟೆಲಿಕಾಂ ಕ್ಷೇತ್ರದಲ್ಲಿ ಹೂಡಿಕೆಯ ಜತೆಗೆ ವಿವಿಧ ಉದ್ಯಮಗಳನ್ನು ಆರಂಭಿಸಿದರು. ಏಷ್ಯಾ ನೆಟ್ ಮಾಧ್ಯಮ ಗುಂಪಿನ ಮಾಲೀಕರೂ ಆಗಿದ್ದಾರೆ.

2009-10 ರಲ್ಲಿ ಬೆಂಗಳೂರಿನ ದೀರ್ಘಕಾಲೀನ ಅಭಿವೃದ್ಧಿ ಯೋಜನೆಗಾಗಿ ಕೆಲಸ ಮಾಡಿದ್ದು, ಬೆಂಗಳೂರು ಮೂಲಸೌಕರ್ಯ ಮತ್ತು ಅಭಿವೃದ್ಧಿ ಕಾರ್ಯಪಡೆ ಸಮನ್ವಯಕಾರರಾಗಿ 'ಪ್ಲಾನ್ ಬೆಂಗಳೂರು-2020 ಮುನ್ನೋಟ ಬೆಂಗಳೂರು' ರೂಪಿಸಿದರು. ಬೆಂಗಳೂರು ಫೌಂಡೇಶನ್ ಮೂಲಕ ಕೆರೆ ಒತ್ತುವರಿ ತೆರವು ಚಟುವಟಿಕೆ, ವಸತಿ ಪ್ರದೇಶಗಳ ರಕ್ಷಣೆ, ಪರಿಸರ ಸಂರಕ್ಷಣೆ ಕೆಲಸಗಳನ್ನೂ ಮಾಡುತ್ತಾ ಬಂದಿದ್ದಾರೆ.

## ಮೊದಲ ಅವಧಿಯಲ್ಲೇ ಸಚಿವ ಸ್ಥಾನ


ಎ. ನಾರಾಯಣ ಸ್ವಾಮಿ

ಚಿತ್ರದುರ್ಗ: ಸಂಸದರಾಗಿ ಆಯ್ಕೆಯಾದ ಮೊದಲ ಅವಧಿಯಲ್ಲೇ ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನ ಪಡೆದ ಹೆಗ್ಗಳಿಕೆ ಎ. ನಾರಾಯಣಸ್ವಾಮಿ ಅವರದು. ಈ ಅವಕಾಶ ಅವರನ್ನು ಅನಿರೀಕ್ಷಿತವಾಗಿ ಅರಸಿ ಬಂದಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ನಿವಾಸಿಯಾದ ಇವರು ಕೃಷಿ, ಉದ್ಯಮದಲ್ಲಿ ತೊಡಗಿಕೊಂಡಿದ್ದಾರೆ. 2019ರಲ್ಲಿ ಮೀಸಲು ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಲೋಕಸಭಾ ಚುನಾವಣೆಯಲ್ಲಿ ಭಾರಿ ಮತಗಳ ಅಂತರದಿಂದ ಗೆಲುವು ಸಾಧಿಸಿದರು. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಸಂಘಟನೆಯಲ್ಲಿ ಸಕ್ರಿಯರಾಗಿದ್ದ ಇವರು ಸಂಘ ಪರಿವಾರದ ನಾಯಕರಿಗೂ ಆಪ್ತರು. ರಾಜ್ಯ ಕಿಸಾನ್ ಮೋರ್ಚಾದ ಸದಸ್ಯರಾಗಿ ಕೆಲಸ ಮಾಡಿದ್ದಾರೆ. 1996ರಲ್ಲಿ ಆನೇಕಲ್ ಪುರಸಭೆ ಚುನಾವಣೆಯಲ್ಲಿ ಸದಸ್ಯರಾಗಿ ಆಯ್ಕೆಯಾದರು. ಮರು ವರ್ಷವೇ ವಿಧಾನಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿದರು. ಆನೇಕಲ್ ವಿಧಾನಸಭಾ ಕ್ಷೇತ್ರವನ್ನು ನಾಲ್ಕು ಬಾರಿ ಪ್ರತಿನಿಧಿಸಿದ್ದಾರೆ. 2010ರಿಂದ 2013ರ ವರೆಗೆ ಸಮಾಜ ಕಲ್ಯಾಣ ಸಚಿವರಾಗಿ ಕೆಲಸ ಮಾಡಿದ್ದಾರೆ. 64 ವರ್ಷದ ನಾರಾಯಣಸ್ವಾಮಿ ಬಿ.ಎ ಪದವೀಧರರು. ಇವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರು ಇದ್ದಾರೆ.

## ಅದೃಷ್ಟಶಾಲಿ ರಾಜಕಾರಣಿ ಭಗವಂತ ಖೂಬಾ


ಭಗವಂತ ಖೂಬಾ

ಬೀದರ್: ಬೀದರ್ ಕ್ಷೇತ್ರದಿಂದ ಎರಡನೇ ಬಾರಿ ಲೋಕಸಭೆಗೆ ಆಯ್ಕೆಯಾಗಿರುವ ಭಗವಂತ ಖೂಬಾ (54) ಅವರಿಗೆ ಕೇಂದ್ರ ಸಚಿವ ಸ್ಥಾನ ಒಲಿದು ಬಂದಿದೆ.

ಖೂಬಾ ಅವರು 2014ರ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಎನ್. ಧರ್ಮಸಿಂಗ್ ಅವರನ್ನು ಸೋಲಿಸಿ ಮೊದಲ ಬಾರಿಗೆ ಲೋಕಸಭೆ ಮೆಟ್ಟಿಲು ಹತ್ತಿದ್ದರು. ಎರಡನೇ ಬಾರಿ ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಅವರನ್ನು ಪರಾಭವಗೊಳಿಸಿ ಗೆದ್ದಿದ್ದಾರೆ.

ಜಿಲ್ಲೆಯ ರಾಜಕಾರಣದಲ್ಲಿ ಖೂಬಾ 'ಅದೃಷ್ಟಶಾಲಿ ರಾಜಕಾರಣಿ' ಎಂದೇ ಗುರುತಿಸಿಕೊಂಡಿದ್ದಾರೆ. ನೇರವಾಗಿ ಲೋಕಸಭೆ ಚುನಾವಣೆಗೇ ಸ್ಪರ್ಧಿಸಿ ಆಯ್ಕೆಯಾದ ಹಿರಿಮೆ ಅವರದ್ದು. ಇದೀಗ ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನ ಪಡೆದ ಜಿಲ್ಲೆಯ ಮೊದಲಿಗ ಎನಿಸಿಕೊಂಡಿದ್ದಾರೆ. ಅವರಿಗೆ ಪತ್ನಿ ಮತ್ತು ಮೂವರು ಮಕ್ಕಳಿದ್ದಾರೆ.

ಔರಾದ್‌ನ ಮಹಾದೇವಿ ಹಾಗೂ ಗುರುಬಸಪ್ಪ ಖೂಬಾ ಅವರ ಪುತ್ರರಾಗಿ 1968ರ ಜೂನ್ 1ರಂದು ಜನಿಸಿದ ಭಗವಂತ ಖೂಬಾ, ತುಮಕೂರಿನ ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಗುತ್ತಿಗೆದಾರರಾಗಿದ್ದ ಅವರು, 1991ರಲ್ಲಿ ಲಾಲಕೃಷ್ಣ ಅಡ್ವಾಣಿ ಅವರು ಬೀದರ್‌ಗೆ ಬಂದಿದ್ದ ವೇಳೆ ಅವರ ಸಮ್ಮುಖದಲ್ಲಿ ಬಿಜೆಪಿ ಸೇರಿದ್ದರು. ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ಪರಿಣಾಮಕಾರಿ ಅನುಷ್ಠಾನ, ಹಲವು ಹೊಸ ರೈಲುಗಳು, ರಾಷ್ಟ್ರೀಯ ಹೆದ್ದಾರಿಗಳ ಮಂಜೂರಾತಿ ಪಡೆಯುವುದು ಸೇರಿದಂತೆ ವಿವಿಧ ಕಾರ್ಯಗಳ ಮೂಲಕ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ಕೊಟ್ಟಿದ್ದಾರೆ. ಈಚೆಗೆ ನಡೆದ ಬಸವಕಲ್ಯಾಣ ವಿಧಾನಸಭಾ ಉಪ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿ, ಪಕ್ಷದ ಅಭ್ಯರ್ಥಿಯಾಗಿದ್ದ ಶರಣು ಸಲಗರ ಅವರ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.



# ಕೇಂದ್ರ ಸಂಪುಟಕ್ಕೆ ಭಾರಿ ಸರ್ಜರಿ

ಒಂದನೇ ಪುಟದಿಂದ...

ಯುವ ಮತ್ತು ಚಲನಶೀಲ ಸಂಪುಟ ಎಂಬ ವರ್ಚಸ್ಸನ್ನು ಪಡೆದುಕೊಳ್ಳುವುದು ಕೂಡ ಭಾರಿ ಪುನರ್‌ರಚನೆಯ ಹಿಂದಿನ ಉದ್ದೇಶವಾಗಿತ್ತು ಎಂದೂ ಹೇಳಲಾಗಿದೆ. ಜತೆಗೆ, ಎರಡು ಮತ್ತು ಮೂರನೇ ಹಂತದ ಮುಖಂಡರನ್ನು ಮುನ್ನೆಲೆಗೆ ತಂದು ಬಿಜೆಪಿಯ ಮುಂದಿನ ತಲೆಮಾರಿನ ನಾಯಕರನ್ನು ರೂಪಿಸುವ ಗುರಿಯನ್ನೂ ಹೊಂದಿದೆ ಎನ್ನಲಾಗಿದೆ.

ಪ್ರತಿಭೆಯ ಕೊರತೆ ಇದೆ ಎಂಬ ಆರೋಪ ಹೊತ್ತಿದ್ದ ಸಂಪುಟಕ್ಕೆ ವೃತ್ತಿಪರ ನೈಪುಣ್ಯವನ್ನು ಒದಗಿಸುವ ಪ್ರಯತ್ನವೂ ಪುನರ್‌ರಚನೆಯ ಹಿಂದೆ ಅಡಗಿದೆ ಎಂದು ಹೇಳಲಾಗಿದೆ. ಹೊಸ ತಂಡದಲ್ಲಿ 13 ವಕೀಲರು, ಆರು ವೈದ್ಯರು, ಐವರು ಎಂಜಿನಿಯರ್‌ಗಳು, ಏಳು ಮಾಜಿ ಅಧಿಕಾರಿಗಳು ಇದ್ದಾರೆ. ಏಳು ಸಚಿವರು ಪಿಎಚ್‌.ಡಿ ಪದವಿ ಹೊಂದಿದ್ದರೆ, ಮೂವರು ಎಂಬಿಎ ಓದಿದವರು.

ಗೃಹ, ರಕ್ಷಣೆ, ಹಣಕಾಸು ಮತ್ತು ವಿದೇಶಾಂಗ ಸಚಿವರನ್ನು ಬಿಟ್ಟರೆ ಬೇರೆಲ್ಲ ಸಚಿವರು ಬದಲಾಗುವ ಸಾಧ್ಯತೆ ಇದೆ. ಕೋವಿಡ್ ನಿರ್ವಹಣೆಯಲ್ಲಿ ಆಗಿದೆ ಎನ್ನಲಾದ ವೈಫಲ್ಯವು ಸರ್ಕಾರದ ಜತೆಗೆ ಪ್ರಧಾನಿ ಮೋದಿ ಅವರ ವರ್ಚಸ್ಸಿಗೂ ಏಟು ಕೊಟ್ಟಿದೆ. ಹಾಗಾಗಿ ಹೊಸ ತಂಡವು ಶಿಕ್ಷಣ, ಆರೋಗ್ಯ, ಮೂಲಸೌಕರ್ಯ ಅಭಿವೃದ್ಧಿಗೆ ಪುನಶ್ಚೇತನ ಕೊಟ್ಟು, ಆರ್ಥಿಕತೆಯನ್ನು ಮತ್ತೆ ಹಳಿಗೆ ತರಲಿದೆಯೇ ಎಂಬ ಕುತೂಹಲ ಇದೆ.

ಉತ್ತರ ಪ್ರದೇಶ ಸೇರಿ ಆರು ರಾಜ್ಯಗಳಲ್ಲಿ 2021ರಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಅದನ್ನು ಗಮನದಲ್ಲಿ ಇರಿಸಿಕೊಂಡೇ ಪುನರ್‌ರಚನೆ ನಡೆದಿದೆ. ಜಾತಿ ಪ್ರಾತಿನಿಧ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಉತ್ತರ ಪ್ರದೇಶದ ಏಳು ಮಂದಿ ಹೊಸದಾಗಿ ಸಚಿವರಾಗಿದ್ದಾರೆ.

ಕಾಂಗ್ರೆಸ್‌ನಿಂದ ಬಿಜೆಪಿಗೆ ಪಕ್ಷಾಂತರ ಮಾಡಿ, ಮಧ್ಯಪ್ರದೇಶವನ್ನು ಬಿಜೆಪಿಗೆ ಮರಳಿ ದೊರೆಯುವಂತೆ ಮಾಡಿದ ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ಕೇಂದ್ರ ಸಂಪುಟದಲ್ಲಿ ಸ್ಥಾನ ದೊರೆಯುತ್ತದೆ ಎಂದು ಖಚಿತವಾಗಿತ್ತು. ರಾಜ್ಯಸಭಾ ಸದಸ್ಯರಾಗಿರುವ ಸಿಂಧಿಯಾ ಅವರು ಪ್ರಬಲ ಖಾತೆಯನ್ನು ಎದುರು ನೋಡುತ್ತಿದ್ದಾರೆ.

ಅಸ್ಸಾಂನ ಬಿಜೆಪಿಯ ಮೊದಲ ಮುಖ್ಯಮಂತ್ರಿಯಾಗಿದ್ದ ಸರ್ಬಾನಂದ ಸೋನೊವಾಲ್ ಅವರು ಹಿಮಂತ ಬಿಸ್ವ ಶರ್ಮಾ ಅವರಿಗಾಗಿ ತಮ್ಮ ಪದವಿ ತ್ಯಾಗ ಮಾಡಿದ್ದರು. ಮಹಾರಾಷ್ಟ್ರದಲ್ಲಿ ಈಗ ವಿರೋಧ ಪಕ್ಷಗಳ ಮೈತ್ರಿ ಸರ್ಕಾರ ಇದೆ. ಅಲ್ಲಿ ಅಧಿಕಾರಕ್ಕೆ ಮರಳುವ ತಂತ್ರವಾಗಿಯೇ ಹಿರಿಯ ನಾಯಕ ನಾರಾಯಣ ರಾಣೆ ಅವರಿಗೆ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ.

ಎರಡು ವರ್ಷಗಳಲ್ಲಿ ಬಿಜೆಪಿಯು ಶಿವಸೇನಾ ಮತ್ತು ಶಿರೋಮಣಿ ಅಕಾಲಿ ದಳದಂತಹ ಪ್ರಮುಖ ಮಿತ್ರಪಕ್ಷಗಳನ್ನು ಕಳೆದುಕೊಂಡಿದೆ. ಹೀಗಾಗಿ ಈಗಿನ ಮಿತ್ರಪಕ್ಷಗಳ ಜತೆಗಿನ ಸಖ್ಯ ಗಟ್ಟಿಗೊಳಿಸಿಕೊಳ್ಳುವ ಸಲುವಾಗಿಯೇ ಅಪ್ನಾದಳದ ಅನುಪ್ರಿಯಾ ಪಟೇಲ್, ಜೆಡಿಯು ನಾಯಕ ಆರ್.ಸಿ.ಪಿ.ಸಿಂಗ್ ಮತ್ತು ಎಲ್‌ಜೆಪಿಯ ಪಶುಪತಿ ಪಾರಸ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ.

ಬಿಜೆಪಿ ಪ್ರಧಾನ ಕಾರ್ಯದರ್ಶಿ ಭೂಪೆಂದರ್ ಯಾದವ್, ಮಧ್ಯಪ್ರದೇಶದ ಟೀಕಾಮಾರ್ಗ್ ಸಂಸದ ವೀರೇಂದ್ರ ಕುಮಾರ್, ಒಡಿಶಾದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದ ಅಶ್ವಿನಿ ವಿಶ್ವಾಸ್, ಕರ್ನಾಟಕದ ಶೋಭಾ ಕರಂದ್ಲಾಜೆ ಮತ್ತು ರಾಜೀವ್ ಚಂದ್ರಶೇಖರ್, ಅಜಯ್ ಭಟ್, ಸುನಿಲ್ ದುಗ್ಗಾಲ್, ಮೀನಾಕ್ಷಿ ಲೇಖಿ, ಭಾರತಿ ಪವಾರ್, ಸಂತನಿ ಠಾಕೂರ್ ಮತ್ತು ಕಪಿಲ್ ಪಾಟೀಲ್ ಅವರು ಮಂತ್ರಿಮಂಡಲ ಸೇರಿರುವ ಪ್ರಮುಖರು.

ಸಂಪುಟ ವಿಸ್ತರಣೆ ಮತ್ತು ಸರ್ಜರಿಯು ಶಕ್ತಿ, ಅನುಭವ, ಪರಿಣತಿ ಮತ್ತು ಚುನಾವಣೆ ಆದ್ಯತೆಗಳ ಮಿಶ್ರಣವಾಗಿದೆ. ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಬಿಜೆಪಿ ಮುಕ್ತವಾಗಿದೆ ಎಂಬ ಸಂದೇಶವನ್ನು ಈ ಸಂಪುಟ ವಿಸ್ತರಣೆಯ ಮೂಲಕ ರವಾನಿಸಲಾಗಿದೆ. ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ ಮತ್ತು ಇತರ ಹಿಂದುಳಿದ ವರ್ಗಗಳ ಜನರನ್ನು ನೀತಿ ರೂಪಿಸುವ ಅಧಿಕಾರಕ್ಕೆ ತರುವ ಪ್ರಕ್ರಿಯೆಯಾಗಿ ಈ ಸಂಪುಟ ವಿಸ್ತರಣೆಯನ್ನು ವಿಶ್ಲೇಷಿಸಬಹುದಾಗಿದೆ. ಮೇಲ್ಜಾತಿಗಳ ಪಕ್ಷ ಎಂಬುದನ್ನು ಬದಲಿಸಿ, ತನ್ನ ಸಾಮಾಜಿಕ ಬೆಂಬಲವನ್ನು ಬದಲಿಸಿಕೊಳ್ಳಲು ಮೋದಿ ನೇತೃತ್ವದ ಬಿಜೆಪಿ ಮುಂದಾಗಿದೆ.ಸಂಪುಟ ವಿಸ್ತರಣೆಯಲ್ಲಿ ಪ್ರಾದೇಶಿಕ ಸಮತೋಲನವನ್ನೂ ಕಾಯ್ದುಕೊಳ್ಳಲಾಗಿದೆ.

## ಶೋಭಾ ಕರಂದ್ಲಾಜೆಗೆ ಒಲಿದ ಕೇಂದ್ರ ಮಂತ್ರಿಗಿರಿ



ಉಡುಪಿ: ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಸತತ ಎರಡು ಬಾರಿ ಗೆಲುವು ಸಾಧಿಸಿರುವ ಶೋಭಾ ಕರಂದ್ಲಾಜೆ ಅವರಿಗೆ ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನ ಸಿಕ್ಕಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಅಕ್ಟೋಬರ್ 23, 1966ರಂದು ಜನಿಸಿದ ಶೋಭಾ ಕರಂದ್ಲಾಜೆ, ಸಮಾಜಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಚಿಕ್ಕಂದಿನಲ್ಲೇ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಸೇರ್ಪಡೆಗೊಂಡು ಪೂರ್ಣಾವಧಿ ಸ್ವಯಂಸೇವಕರಾಗಿದ್ದರು

2004ರಿಂದ 2008ರವರೆಗೆ ವಿಧಾನ ಪರಿಷತ್ ಸದಸ್ಯೆಯಾಗಿದ್ದ ಅವರು, 2008ರಲ್ಲಿ ಯಶವಂತಪುರ ಕ್ಷೇತ್ರದಿಂದ ಗೆದ್ದು ವಿಧಾನಸಭೆ ಪ್ರವೇಶಿಸಿದ್ದರು. ಈ ಅವಧಿಯಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್, ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರ ಹಾಗೂ ಇಂಧನ ಸಚಿವೆಯಾಗಿಯೂ ಕಾರ್ಯ ನಿರ್ವಹಿಸಿದ್ದರು.

2014ರಲ್ಲಿ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಮೊದಲ ಪ್ರಯತ್ನದಲ್ಲಿಯೇ ಕಾಂಗ್ರೆಸ್ ಅಭ್ಯರ್ಥಿ ಜಯಪ್ರಕಾಶ್ ಹೆಗ್ಡೆ ವಿರುದ್ಧ 1,81,643 ಮತಗಳ ಅಂತರದಿಂದ ಗೆದ್ದಿದ್ದರು. ಈ ಕ್ಷೇತ್ರದಲ್ಲಿ ಮಹಿಳೆಯೊಬ್ಬರು ದಾಖಲಿಸಿದ ಅತಿ ದೊಡ್ಡ ಅಂತರದ ಗೆಲುವು ಇದಾಗಿತ್ತು.

2019ರ ಲೋಕಸಭಾ ಚುನಾವಣೆಯಲ್ಲೂ ಅದೃಷ್ಟ ಶೋಭಾ ಅವರ ಕೈ ಹಿಡಿಯಿತು. ಕಾಂಗ್ರೆಸ್ ಜೆಡಿಎಸ್ ಮೈತ್ರಿ ಅಭ್ಯರ್ಥಿ ಪ್ರಮೋದ್ ಮಧ್ವರಾಜ್ ವಿರುದ್ಧ ಸ್ಪರ್ಧಿಸಿ, ಬರೋಬ್ಬರಿ 3,49,599 ಮತಗಳ ಅಂತರದ ಜಯಭೇರಿ ಬಾರಿಸಿದರು.

## ಸಚಿವ ಸ್ಥಾನ ಕಸಿದ 'ಮಾನಹಾನಿ' ಪ್ರಕರಣ

ಒಂದನೇ ಪುಟದಿಂದ...

2014ರ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ ಅವರಿಗೆ, ಕರ್ನಾಟಕದಲ್ಲಾದ 'ಅನ್ಯಾಯ'ಕ್ಕೆ ಪರಿಹಾರವೆಂಬಂತೆ ಆಯಕಟ್ಟಿನ ಸಚಿವ ಸ್ಥಾನಗಳೇ ಸಿಕ್ಕಿದ್ದವು. ಅಲ್ಲಿಯೂ ನಿರೀಕ್ಷಿತ ದಕ್ಷತೆ, ಶ್ರಮ, ಚುರುಕುತನ ತೋರದೇ ಕಳಪೆ ನಿರ್ವಹಣೆಯಿಂದಾಗಿ ಕರ್ನಾಟಕ ಪ್ರತಿನಿಧಿಸುವವರಿಗೆ ಸಿಕ್ಕಿದ್ದ ರೈಲ್ವೆ ಖಾತೆಯು ಅಲ್ಪಕಾಲದಲ್ಲೇ ಅವರಿಂದ ಕೈತಪ್ಪಿ ಹೋಗಿತ್ತು. ಅದಾದ ಬಳಿಕ ಕಾನೂನು ಸಚಿವರಾಗಿಯೂ ಕೆಲಸ ಮಾಡಿದ್ದರು. ಬಳಿಕ ಅದೂ ಅವರ ಕೈತಪ್ಪಿತು. ಅಂತಿಮವಾಗಿ ಅವರನ್ನು ಕಾರ್ಯಕ್ರಮಗಳ ಅನುಷ್ಠಾನ ಮತ್ತು ಅಂಕಿಅಂಶ ಖಾತೆ ಸಚಿವರನ್ನಾಗಿ ಮಾಡಲಾಯಿತು.

ಎಚ್‌.ಎನ್. ಅನಂತಕುಮಾರ್ ಅಕಾಲಿಕ ನಿಧನದ ತರುವಾಯ, ಅವರು ನಿರ್ವಹಿಸುತ್ತಿದ್ದ ರಸಗೊಬ್ಬರ ಖಾತೆ ಗೌಡರ ಹೆಗಲೇರಿತು. ಎನ್‌ಡಿಎ ಎರಡನೇ ಅವಧಿಯಲ್ಲಿ ಅದೇ ಖಾತೆಯೇ ಮುಂದುವರಿಯಿತು. ಅವರ ಕಾರ್ಯ ನಿರ್ವಹಣೆಯ ಬಗ್ಗೆ ಪ್ರಧಾನಿ ಮೋದಿ ಅವರಿಗೆ ತೃಪ್ತಿ ಇರಲಿಲ್ಲ ಎನ್ನಲಾಗಿತ್ತು. ಇದರ ಜತೆಗೆ, ಇತ್ತೀಚೆಗೆ ಸದ್ದು ಮಾಡತೊಡಗಿದ್ದ ವಿಡಿಯೊ ಪ್ರಕರಣ ಅವರನ್ನು ಸಂಪುಟದಿಂದ ಕೈ ಬಿಡಬೇಕಾದ ಸಂದಿಗ್ದತೆಗೆ ಕಾರಣವಾಗಿತ್ತು ಎಂದೂ ಹೇಳಲಾಗುತ್ತಿದೆ. ಈ ವಿಡಿಯೊ ಬಹಿರಂಗಗೊಂಡರೆ ಮುಜುಗರಕ್ಕೆ ಒಳಗಾಗಬೇಕಾಗುತ್ತದೆ ಎಂಬ ಕಾರಣಕ್ಕೆ, ತಮ್ಮ ವಿರುದ್ಧ ಯಾವುದೇ ರೀತಿಯ ಮಾನಹಾನಿಕಾರಕ ಸುದ್ದಿ ಪ್ರಕಟಿಸಬಾರದು ಎಂದು ಸದಾನಂದಗೌಡರು ಕಳೆದ ವಾರವಷ್ಟೇ ತಡೆಯಾಜ್ಞೆ ತಂದಿದ್ದರು. ಈ ಪ್ರಕರಣ, ಸಚಿವ ಸ್ಥಾನ ಕೈತಪ್ಪಲು ತತ್‌ಕ್ಷಣದ ಕಾರಣ ಎಂದು ಬಿಜೆಪಿ ನಾಯಕರ ಮಧ್ಯೆ ಚರ್ಚೆ ನಡೆಯುತ್ತಿದೆ.

## 'ಮೋದಿಯೇ ಕೆಳಗೆ ಇಳಿಯಬೇಕಿತ್ತು'

ನವದೆಹಲಿ: 'ಕೇಂದ್ರ ಸಚಿವ ಸಂಪುಟದಲ್ಲಿನ ಬದಲಾವಣೆಗೆ ಕಾರ್ಯಕ್ಷಮತೆಯೇ ಮಾನದಂಡವಾಗಿದ್ದರೆ ಮೊದಲು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸ್ಥಾನದಿಂದ ಕೆಳಗೆ ಇಳಿಯಬೇಕಿತ್ತು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅಭಿಪ್ರಾಯಪಟ್ಟಿದ್ದಾರೆ.

'ದೇಶವನ್ನು ಸ್ಥಗಿತಸ್ಥಿತಿಗೆ ತಂದ ಕಾರಣಕ್ಕೆ, ಶಾಂತಿ ಮತ್ತು ಸೌಹಾರ್ದವನ್ನು ಕಸದಬುಟ್ಟಿಗೆ ಎಸೆದ ಕೃತ್ಯಗಳಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರೇ ತಮ್ಮ ಸ್ಥಾನದಿಂದ ಕೆಳಗೆ ಇಳಿಯಬೇಕಿತ್ತು' ಎಂದು ರಣದೀಪ್ ಹೇಳಿದ್ದಾರೆ.

'ಕಾರ್ಯಕ್ಷಮತೆಯೇ ಮಾನದಂಡವಾಗಿದ್ದರೆ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಸಚಿವರ ಸ್ಥಾನದಿಂದ ವಜಾ ಮಾಡಬೇಕಿತ್ತು' ಎಂದು ಹೇಳಿದ್ದಾರೆ.

### ಪ್ರಮುಖ ಬದಲಾವಣೆ

| | |
|---|---|
| ಅಮಿತ್ ಶಾ | ಗೃಹ ಜತೆಗೆ ಸಹಕಾರ |
| ಧರ್ಮೇಂದ್ರ ಪ್ರಧಾನ್ | ಶಿಕ್ಷಣ |

### ಸಂಪುಟ ದರ್ಜೆಗೆ ಬಡ್ತಿ ಪಡೆದವರು

| | |
|---|---|
| ಕಿರಣ್ ರಿಜಿಜು | ಕಾನೂನು ಮತ್ತು ಸುವ್ಯವಸ್ಥೆ |
| ಅನುರಾಗ್ ಠಾಕೂರ್ | ವಾರ್ತಾ ಪ್ರಸಾರ, ಯುವಜನ ಮತ್ತು ಕ್ರೀಡೆ |
| ಮನ್‌ಸುಖ್ ಮಾಂಡವೀಯ | ಆರೋಗ್ಯ, ಕುಟುಂಬ ಕಲ್ಯಾಣ, ರಾಸಾಯನಿಕ-ರಸಗೊಬ್ಬರ |
| ಆರ್‌ಕೆ. ಸಿಂಗ್ | ವಿದ್ಯುತ್, ನವೀಕರಿಸಬಹುದಾದ ಇಂಧನ |
| ಪುರುಷೋತ್ತಮ್ ರೂಪಾಲ | ಮೀನುಗಾರಿಕೆ, ಹೈನುಗಾರಿಕೆ |
| ಜಿ. ಕಿಶನ್ ರೆಡ್ಡಿ | ಸಂಸ್ಕೃತಿ, ಪ್ರವಾಸೋದ್ಯಮ, ಈಶಾನ್ಯ ರಾಜ್ಯಗಳ ಅಭಿವೃದ್ಧಿ |
| ಹರ್‌ದೀಪ್‌ಸಿಂಗ್ ಪುರಿ | ಪೆಟ್ರೋಲಿಯಂ, ನೈಸರ್ಗಿಕ ಅನಿಲ, ವಸತಿ, ನಗರಾಭಿವೃದ್ಧಿ |

### ಸಂಪುಟ ದರ್ಜೆ ಸಚಿವರು

| | |
|---|---|
| ನಾರಾಯಣ ರಾಣೆ | ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ |
| ಸರ್ಬಾನಂದ ಸೋನೊವಾಲ್ | ಬಂದರು, ಆಯುಷ್ |
| ವೀರೇಂದ್ರ ಕುಮಾರ್ | ಸಾಮಾಜಿಕ ನ್ಯಾಯ, ಸಬಲೀಕರಣ |
| ಜ್ಯೋತಿರಾದಿತ್ಯ ಸಿಂಧಿಯಾ | ನಾಗರಿಕ ವಿಮಾನಯಾನ |
| ಆರ್‌ಸಿಪಿ ಸಿಂಗ್ | ಉಕ್ಕು |
| ಅಶ್ವಿನಿ ವೈಷ್ಣವ್ | ರೈಲ್ವೆ, ಐ.ಟಿ. |
| ಪಶುಪತಿ ಕುಮಾರ್ ಪಾರಸ್ | ಆಹಾರ ಸಂಸ್ಕರಣೆ |
| ಭೂಪೇಂದರ್ ಯಾದವ್ | ಪರಿಸರ, ಅರಣ್ಯ, ಕಾರ್ಮಿಕ, ಉದ್ಯೋಗ |

### ರಾಜ್ಯ ಸಚಿವರು

| | |
|---|---|
| ಪಂಕಜ್ ಚೌಧರಿ | ಹಣಕಾಸು ಖಾತೆ ರಾಜ್ಯ ಸಚಿವ |
| ಅನುಪ್ರಿಯಾ ಸಿಂಗ್ ಪಟೇಲ್ | ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ರಾಜ್ಯ ಸಚಿವೆ |
| ಪ್ರೊ.ಎಸ್.ಪಿ.ಸಿಂಗ್ ಬಘೇಲ್ | ಕಾನೂನು ಸಚಿವಾಲಯದ ರಾಜ್ಯ ಸಚಿವ |
| ರಾಜೀವ್ ಚಂದ್ರಶೇಖರ್ | ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಖಾತೆ ರಾಜ್ಯ ಸಚಿವ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವ |
| ಶೋಭಾ ಕರಂದ್ಲಾಜೆ | ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ |
| ಭಾನು ಪ್ರತಾಪ್ ಸಿಂಗ್ ವರ್ಮಾ | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ರಾಜ್ಯ ಸಚಿವ |
| ದರ್ಶನಾ ವಿಕ್ರಂ ಜಾರದೋಶ್ | ಜವಳಿ ಖಾತೆ ರಾಜ್ಯ ಸಚಿವ, ರೈಲ್ವೆ ರಾಜ್ಯ ಸಚಿವ |
| ಮೀನಾಕ್ಷಿ ಲೇಖಿ | ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವೆ, ಸಂಸ್ಕೃತಿ ಖಾತೆ ರಾಜ್ಯ ಸಚಿವೆ |
| ಅನ್ನಪೂರ್ಣಾ ದೇವಿ | ಶಿಕ್ಷಣ ಖಾತೆ ರಾಜ್ಯ ಸಚಿವೆ |
| ಎ.ನಾರಾಯಣ ಸ್ವಾಮಿ | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ |
| ಕೌಶಲ್ ಕಿಶೋರ್ | ವಸತಿ ಮತ್ತು ನಗರಾಭಿವೃದ್ಧಿ ಖಾತೆ ರಾಜ್ಯ ಸಚಿವ |
| ಅಜಯ್ ಭಟ್ | ರಕ್ಷಣಾ ಖಾತೆ ರಾಜ್ಯ ಸಚಿವ, ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವ |
| ಬಿ.ಎಲ್.ವರ್ಮಾ | ಈಶಾನ್ಯ ಪ್ರದೇಶಾಭಿವೃದ್ಧಿ ಖಾತೆ ರಾಜ್ಯ ಸಚಿವ. ಸಹಕಾರ ಖಾತೆ ರಾಜ್ಯ ಸಚಿವ |
| ಅಜಯ್ ಕುಮಾರ್ | ಗೃಹ ಖಾತೆ ರಾಜ್ಯ ಸಚಿವ |
| ದೇವುಸಿನ್ಹ ಚೌಹಾಣ್ | ಸಂವಹನ ಸಚಿವಾಲಯದ ರಾಜ್ಯ ಸಚಿವ |

### ರಾಜ್ಯ ಸಚಿವರು

| | |
|---|---|
| ಭಗವಂತ್ ಖೂಬಾ | ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ |
| ಕಪಿಲ್ ಮೋರೇಶ್ವರ್ ಪಾಟಿಲ್ | ಪಂಚಾಯತ್ ರಾಜ್ ಖಾತೆ ರಾಜ್ಯ ಸಚಿವ |
| ಪ್ರತಿಮಾ ಭೌಮಿಕ್ | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವೆ |
| ಡಾ. ಸುಭಾಷ್ ಸರ್ಕಾರ್ | ಶಿಕ್ಷಣ ಖಾತೆ ರಾಜ್ಯ ಸಚಿವ |
| ಭಾಗವತ್ ಕೃಷ್ಣರಾವ್ ಕರಾಡ್ | ಹಣಕಾಸು ಖಾತೆ ರಾಜ್ಯ ಸಚಿವ |
| ಡಾ. ರಾಜಕುಮಾರ್ ರಂಜನ್ | ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ, ಶಿಕ್ಷಣ ಖಾತೆ ರಾಜ್ಯ ಸಚಿವ |
| ಡಾ.ಭಾರತಿ ಪ್ರವೀಣ್ ಪವಾರ್ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಖಾತೆ |
| ಬಿಶ್ವೇಶ್ವರ್ ಟೂಡು | ಬುಡಕಟ್ಟು ಖಾತೆ ರಾಜ್ಯ ಸಚಿವ, ಜಲಶಕ್ತಿ ಖಾತೆ ರಾಜ್ಯ ಸಚಿವ |
| ಶಂತನು ಠಾಕೂರ್ | ಬಂದರು, ಹಡಗು ಮತ್ತು ಜಲಸಾರಿಗೆ ಖಾತೆ ರಾಜ್ಯ ಸಚಿವ |
| ಡಾ.ಎಂ.ಮಹೇಂದ್ರಭಾಯಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಖಾತೆ, ಆಯುಷ್ ಸಚಿವಾಲಯದ ರಾಜ್ಯ ಖಾತೆ |
| ಜಾನ್ ಬರ್ಲಾ | ಅಲ್ಪಸಂಖ್ಯಾತರ ಸಚಿವಾಲಯದ ರಾಜ್ಯ ಖಾತೆ |
| ಡಾ.ಎಲ್.ಮುರುಗನ್ | ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ರಾಜ್ಯ ಸಚಿವ, ವಾರ್ತಾ ಸಚಿವಾಲಯದ ರಾಜ್ಯ ಖಾತೆ |
| ನಿಶಿತ್ ಪ್ರಮಾಣಿಕ್ | ಗೃಹ ಖಾತೆ ರಾಜ್ಯ ಸಚಿವ, ಯುವ ಮತ್ತು ಕ್ರೀಡಾ ಸಚಿವಾಲಯದ ರಾಜ್ಯ ಖಾತೆ |



ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ತಲುಪಿದ ಇಟಲಿ ಆಟಗಾರರ ಸಂಭ್ರಮ– ಎಎಫ್‌ಪಿ ಚಿತ್ರ

# ಯೂರೊ ಕಪ್: ಫೈನಲ್‌ಗೆ ಇಟಲಿ

ಲಂಡನ್ (ಎಪಿ): ಎರಡು ಗೋಲುಗಳನ್ನು ತಡೆದ ಗಿಯಾನ್‌ಲ್ಯೂಗಿ ಡೊನ್ನಾರುಮ್ಮಾ ಇಟಲಿ ತಂಡವು ಯೂರೊ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಸುತ್ತು ತಲುಪುವಂತೆ ಮಾಡಿದರು. ಅವರ ಸೊಗಸಾದ ಆಟದ ಬಲದಿಂದ ತಂಡವು ಸೆಮಿಫೈನಲ್‌ನಲ್ಲಿ ಸ್ಪೇನ್ ತಂಡವನ್ನು ಪರಾಭವಗೊಳಿಸಿತು.

ವೆಂಬ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ತಡರಾತ್ರಿ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಇಟಲಿಗೆ ಪೆನಾಲ್ಟಿ ಶೂಟೌಟ್‌ನಲ್ಲಿ 4–2ರಿಂದ ಜಯ ಒಲಿಯಿತು. ಭಾನುವಾರ ಇದೇ ಕ್ರೀಡಾಂಗಣದಲ್ಲಿ ನಡೆಯುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಡೆನ್ಮಾರ್ಕ್ ಅಥವಾ ಇಂಗ್ಲೆಂಡ್ ತಂಡವನ್ನು ಎದುರಿಸಲು ಸಜ್ಜಾಗಿದೆ.

ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 1–1ರ ಸಮಬಲ ಸಾಧಿಸಿದ್ದವು. ಹೆಚ್ಚುವರಿ ಸಮಯದಲ್ಲಿ ಗೋಲು ದಾಖಲಾಗಲಿಲ್ಲ. ಹೀಗಾಗಿ ಫಲಿತಾಂಶ ನಿರ್ಧರಿಸಲು ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಗಿತ್ತು. ಇಲ್ಲಿ ಇಟಲಿ ಪಾರಮ್ಯ ಮೆರೆಯಿತು.

ಹೆಚ್ಚು ಅವಧಿಗೆ ಸ್ಪೇನ್ ತಂಡದ ನಿಯಂತ್ರಣದಲ್ಲೇ ಇದ್ದ ಹಣಾಹಣಿಯಲ್ಲಿ 60ನೇ ನಿಮಿಷ ಇಟಲಿಯ ಫೆಡರಿಕೊ ಚೀಸಾ ಮೋಡಿ ಮಾಡಿದರು. ಎದುರಾಳಿ ಗೋಲ್‌ಕೀಪರ್‌ರನ್ನು ವಂಚಿಸಿ ಮೊದಲ ಗೋಲು ದಾಖಲಿಸಿ ಮುನ್ನಡೆ ತಂದುಕೊಟ್ಟರು. ಆದರೆ ಬದಲಿ ಆಟಗಾರನಾಗಿ ಕಣಕ್ಕಿಳಿದಿದ್ದ ಅಲ್ವಾರಾ ಮೊರಾಟ 80ನೇ ನಿಮಿಷದಲ್ಲಿ ಸ್ಪೇನ್ ಪರ ಗೋಲು ದಾಖಲಿಸಿ ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು.

ಸತತ 33 ಪಂದ್ಯಗಳಲ್ಲಿ ಅಜೇಯವಾಗುಳಿದು ರಾಷ್ಟ್ರೀಯ ದಾಖಲೆ ನಿರ್ಮಿಸಿರುವ ಇಟಲಿ, ಟೂರ್ನಿಯಲ್ಲಿ ನಾಲ್ಕನೇ ಬಾರಿ ಫೈನಲ್ ಪ್ರವೇಶಿಸಿದೆ. ಎರಡನೇ ಬಾರಿ ಪ್ರಶಸ್ತಿಗಾಗಿ ಸೆಣಸಲು ಸಜ್ಜಾಗಿದೆ. 1968ರಲ್ಲಿ ತಂಡವು ಚಾಂಪಿಯನ್ ಆಗಿತ್ತು.

# ಕ್ರಿಕೆಟ್: ಇಂಗ್ಲೆಂಡ್–ಪಾಕ್ ಏಕದಿನ ಪಂದ್ಯ ಇಂದು

ಕಾರ್ಡಿಫ್ (ಪಿಟಿಐ): ಕೊರೊನಾ ಸೋಂಕಿನ ಹಾವಳಿಯ ನಡುವೆಯೂ ಛಲ ಬಿಡದ ಇಂಗ್ಲೆಂಡ್ ತಂಡವು ಗುರುವಾರ ಆರಂಭವಾಗಲಿರುವ ಪಾಕಿಸ್ತಾನ ಎದುರಿನ ಏಕದಿನ ಪಂದ್ಯದಲ್ಲಿ ಕಣಕ್ಕಿಳಿಯಲಿದೆ.

ಸೋಮವಾರ ರಾತ್ರಿ ಇಂಗ್ಲೆಂಡ್ ತಂಡದ ಏಳು ಜನರಿಗೆ ಕೋವಿಡ್ ಖಚಿತವಾಗಿದ್ದರಿಂದ ಇಡೀ ತಂಡವನ್ನೇ ಐಸೋಲೇಟ್ ಮಾಡಲಾಗಿತ್ತು. ಪಾಕ್ ಎದುರಿನ ಸರಣಿಗಾಗಿ ಬೆನ್ ಸ್ಟೋಕ್ಸ್ ನಾಯಕತ್ವದ ಹೊಸ ತಂಡವನ್ನು ರಚಿಸಲಾಗಿತ್ತು. ಅದೇ ತಂಡವು ಈಗ ಬಾಬರ್ ಆಜಂ ನಾಯಕತ್ವದ ಪಾಕ್ ಎದುರು ಆಡಲಿದೆ. ಸೋಫಿಯಾ ಗಾರ್ಡನ್ಸ್‌ನಲ್ಲಿ ಪಂದ್ಯ ನಡೆಯಲಿದೆ.

ಪಂದ್ಯ ಆರಂಭ: ಸಂಜೆ 5.30

## ಒಲಿಂಪಿಕ್ಸ್: ಹೆಚ್ಚುವರಿ ವಸತಿ ವ್ಯವಸ್ಥೆ

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಸಂದರ್ಭದಲ್ಲಿ ಟೋಕಿಯೊದಲ್ಲಿ ಕೋವಿಡ್ ಕಾರಣದಿಂದ ಪರಿಸ್ಥಿತಿ ಬಿಗಡಾಯಿಸಿದರೆ ಆಟಗಾರರ ಕ್ವಾರಂಟೈನ್‌ಗಾಗಿ ಹೆಚ್ಚುವರಿ ವಸತಿ ವ್ಯವಸ್ಥೆಯನ್ನು ಕಾಯ್ದಿರಿಸಲಾಗಿದೆ ಎಂದು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಬುಧವಾರ ತಿಳಿಸಿದೆ.

ಟೋಕಿಯೊ ಒಲಿಂಪಿಕ್ಸ್–2020 ಭಾರತದ ಕನಸಿನ ಪಯಣ

# ಹಾಕಿ ಅಂಗಳದಲ್ಲಿ ಪದಕ ಧ್ಯಾನ

ಭಾರತದ ಹಾಕಿ ಕ್ರೀಡೆಯ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ. ಟೋಕಿಯೊದ ಒಲಿಂಪಿಕ್ಸ್ ಅಂಗಳದಲ್ಲಿ ಚಿನ್ನದ ನೆನಪುಗಳಿವೆ. 1964ರಲ್ಲಿ ಜಪಾನಿನ ರಾಜಧಾನಿಯಲ್ಲಿ ನಡೆದಿದ್ದ ಕೂಟದ ಫೈನಲ್‌ನಲ್ಲಿ ಪಾಕಿಸ್ತಾನದ ಎದುರು ಗೆದ್ದು ಚಿನ್ನದ ಪದಕ ಕೊರಳಿಗೇರಿಸಿಕೊಂಡಿತ್ತು.



ಬಲ್ಬೀರ್ ಸಿಂಗ್



ಮೇಜರ್ ಧ್ಯಾನಚಂದ್

1960ರಲ್ಲಿ ಪಾಕಿಸ್ತಾನದ ಎದುರಿನ ಸೋಲಿಗೆ ಭಾರತ ಸೇಡು ಕೂಡ ತೀರಿಸಿಕೊಂಡಿತ್ತು. 1928 ರಿಂದ 1956ರವರೆಗೆ ಒಲಿಂಪಿಕ್ಸ್ ಹಾಕಿಯಲ್ಲಿ ದೊರೆಯಂತೆ ಮೆರೆದಿದ್ದ ಭಾರತ ಮತ್ತೆ ಚಿನ್ನದ ಹೊಳಪು ಕಂಡಿದ್ದು ಟೋಕಿಯೊ ನೆಲದಲ್ಲಿ. ಈಗ ಮತ್ತೆ ಅಂತಹ ದೊಡ್ಡ ಕನಸಿನೊಂದಿಗೆ ಮನಪ್ರೀತ್ ಸಿಂಗ್ ಬಳಗವು ಜಪಾನಿಗೆ ಹೊರಟಿದೆ. ನಾಲ್ಕು ದಶಕಗಳಿಂದ ಒಲಿಯದ ಪದಕವನ್ನು ಗೆದ್ದು ಬರುವ ಛಲದಲ್ಲಿದೆ.

TOKYO 2020 ಇನ್ನೂ 15 ದಿನ

1980ರ ಮಾಸ್ಕೊ ಒಲಿಂಪಿಕ್ಸ್‌ನಲ್ಲಿ ಗೆದ್ದ ಚಿನ್ನವೇ ಕೊನೆ. ಮತ್ತೆ ಭಾರತಕ್ಕೆ ಒಂದು ಕಂಚು ಕೂಡ ಒಲಿದಿಲ್ಲ. ಒಟ್ಟು ಎಂಟು ಚಿನ್ನ, ಒಂದು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಒಲಿಂಪಿಕ್ಸ್‌ನಲ್ಲಿ ಗಳಿಸಿದ ಮತ್ತೊಂದು ಹಾಕಿ ತಂಡ ವಿಶ್ವದಲ್ಲಿ ಇದುವರೆಗೂ ಇಲ್ಲ. ಆದರೆ. ಸಹಜ ಹುಲ್ಲಿನಂಕಣದಿಂದ ಆಸ್ಟ್ರೋಟರ್ಫ್ ಕ್ರೀಡಾಂಗಣ, ವೇಗ ತಂತ್ರಗಾರಿಕೆಗೆ ಭಾರತ ಹೊಂದಿಕೊಳ್ಳುವಷ್ಟರಲ್ಲಿ ಯುರೋಪ್ ದೇಶಗಳು ಹಾಕಿ ಅಂಗಳದಲ್ಲಿ ತಮ್ಮ ಪಾರುಪತ್ಯ ಸ್ಥಾಪಿಸಿಬಿಟ್ಟವು. 2008ರ ಬೀಜಿಂಗ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಲು ಕೂಡ ಸಾಧ್ಯವಾಗಿರಲಿಲ್ಲ. 2012ರಲ್ಲಿ ಲಂಡನ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಿತಾದರೂ, 12ನೇ ಸ್ಥಾನದಲ್ಲಿ ಆಟ ಮುಗಿಸಿತು. 2016ರಲ್ಲಿ ಸ್ವಲ್ಪ 8ನೇ ಸ್ಥಾನಕ್ಕೇರಿತ್ತು.

ಹಲವು ದಿಗ್ಗಜ ಆಟಗಾರರು ಮನ್‌ಪ್ರೀತ್ ಬಳಗದ ಕುರಿತು ವಿಶ್ವಾಸವನ್ನೂ ವ್ಯಕ್ತಪಡಿಸಿದ್ದಾರೆ. ಆದರೆ ಹಾದಿ ಸುಗಮವಲ್ಲ. ಈ ಬಳಗದಲ್ಲಿರುವ 10 ಮಂದಿಗೆ ಇದೇ ಮೊದಲ ಒಲಿಂಪಿಕ್ಸ್. ಅಲ್ಲದೇ ಭಾರತವು ಕಣಕ್ಕಿಳಿಯಲಿರುವ ಎ ಗುಂಪಿನಲ್ಲಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ಸೇರಿದಂತೆ ಬಲಿಷ್ಠ ತಂಡಗಳು ಇವೆ. ಜಪಾನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಸ್ಪೇನ್ ತಂಡಗಳ ಪೈಪೋಟಿಯನ್ನು ಎದುರಿಸಲಿದೆ.

ಗುರ್ಜಂತ್ ಸಿಂಗ್, ಹರಿಂದರ್ ಪಾಲ್ ಸಿಂಗ್, ಬಿರೇಂದ್ರ ಲಾಕ್ರಾ ಅವರಂತಹ ಪ್ರತಿಭಾವಂತ ಆಟಗಾರರು ತಂಡದಲ್ಲಿದ್ದಾರೆ. ಕೋವಿಡ್ ಸಂಕಷ್ಟದಲ್ಲಿ ಬೆಂದು ಸೋತಿರುವ ದೇಶವಾಸಿಗಳಿಗೆ ಗೆಲುವಿನ ಸಿಹಿಸುದ್ದಿ ಕೊಡುವ ಹೊಣೆ ಭಾರತ ತಂಡದ ಮೇಲೆ ಇದೆ. ಮೇಜರ್ ಧ್ಯಾನಚಂದ್, ಬಲ್ಬೀರ್ ಸಿಂಗ್ ಸೀನಿಯರ್, ಕೌಶಿಕ್, ಅಶೋಕ್ ಕುಮಾರ್, ಎಂ.ಪಿ. ಗಣೇಶ್, ಶಂಕರ್ ಲಕ್ಷ್ಮಣ್ ಅವರಂತಹ ದಿಗ್ಗಜರ ಸಾಲಿಗೆ ಸೇರುವ ಅವಕಾಶವೂ ಈಗಿನ ಯುವಪಡೆಗೆ ಇದೆ.

**ಮಹಿಳೆಯರ ಹೆಜ್ಜೆಗುರುತು**

ರಾಣಿ ರಾಂಪಾಲ್ ನಾಯಕತ್ವದ ಮಹಿಳಾ ಹಾಕಿ ತಂಡವು ಈ ಬಾರಿ ಒಲಿಂಪಿಕ್ಸ್‌ನಲ್ಲಿ ಆಡಲಿದೆ. ಭಾರತ ವನಿತೆಯರ ತಂಡವು ಒಲಿಂಪಿಕ್ಸ್‌ಗೆ ತೆರಳುತ್ತಿರುವುದು ಇದು ಮೂರನೇ ಸಲ. 1980ರಲ್ಲಿ ಒಂದು ಬಾರಿ ಭಾಗವಹಿಸಿತ್ತು. ಅದಾದ ನಂತರ 2016ರಲ್ಲಿ ಅರ್ಹತೆ ಗಿಟ್ಟಿಸಿತ್ತು. ಅಲ್ಲಿ 12ನೇ ಸ್ಥಾನ ಪಡೆದಿತ್ತು.

ಈ ತಂಡವು 2018ರ ಏಷ್ಯಾ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿತ್ತು. ಮಹಿಳೆಯರ ವಿಭಾಗದ ಎ ಗುಂಪಿನಲ್ಲಿ ಭಾರತ ತಂಡವು ಕಣಕ್ಕಿಳಿಯಲಿದೆ. ನೆದರ್ಲೆಂಡ್ಸ್, ಐರ್ಲೆಂಡ್, ದಕ್ಷಿಣ ಆಫ್ರಿಕಾ, ಬ್ರಿಟನ್, ಜರ್ಮನಿ ತಂಡಗಳೊಂದಿಗೆ ಪೈಪೋಟಿ ನಡೆಸಲಿದೆ.



ಮನ್‌ಪ್ರೀತ್ ಸಿಂಗ್

**ಚಿನ್ನದ ಸಾಧನೆ**

| ವರ್ಷ | 1928 | 1932 | 1936 | 1948 | 1952 | 1956 | 1964 | 1980 |
|---|---|---|---|---|---|---|---|---|
| ಸ್ಥಳ | ಆ್ಯಮಸ್ಟರ್‌ಡ್ಯಾಂ | ಲಾಸ್ ಏಂಜಲಿಸ್ | ಬರ್ಲಿನ್ | ಲಂಡನ್ | ಹೆಲ್ಸಿಂಕಿ | ಮೆಲ್ಬರ್ನ್ | ಟೋಕಿಯೊ | ಮಾಸ್ಕೊ |

**ಬೆಳ್ಳಿ ಪದಕ**

| ವರ್ಷ | 1960 |
|---|---|
| ಸ್ಥಳ | ರೋಮ್ |

**ಕಂಚಿನ ಪದಕ**

| 1968 | 1972 |
|---|---|
| ಮೆಕ್ಸಿಕೊ ಸಿಟಿ | ಮ್ಯೂನಿಕ್ |

2016ರ ವಿಜೇತರು: ಅರ್ಜೆಂಟೀನಾ (ಚಿನ್ನ), ಬೆಲ್ಜಿಯಂ (ಬೆಳ್ಳಿ), ಜರ್ಮನಿ (ಕಂಚು).

# ಕ್ರಿಕೆಟ್: ಮ್ಯಾಥ್ಯೂಸ್ ನಿವೃತ್ತಿ?

ಕೊಲಂಬೊ (ಪಿಟಿಐ): ಶ್ರೀಲಂಕಾ ಕ್ರಿಕೆಟ್ ಮಂಡಳಿಯು ತಮಗೆ ಕೇಂದ್ರ ಗುತ್ತಿಗೆಗೆ ಪರಿಗಣಿಸದಿರುವ ಕಾರಣಕ್ಕೆ ಕ್ರಿಕೆಟ್‌ನಿಂದ ನಿವೃತ್ತಿ ಪಡೆಯುವುದಾಗಿ ಆಟಗಾರ ಏಂಜೆಲೊ ಮ್ಯಾಥ್ಯೂಸ್ ಹೇಳಿದ್ದಾರೆ.

ಜುಲೈ 13ರಿಂದ ಶ್ರೀಲಂಕಾ ತಂಡವು ಭಾರತದೆದುರಿನ ಸರಣಿಯಲ್ಲಿ ಆಡಲಿದೆ. ಈ ಸಂದರ್ಭದಲ್ಲಿ ಮ್ಯಾಥ್ಯೂಸ್ ಅವರ ನಡೆಯು ಅಚ್ಚರಿ ಮೂಡಿಸಿದೆ. ಆದರೆ ಶ್ರೀಲಂಕಾ ಮಂಡಳಿಯ ಗುತ್ತಿಗೆ ಪದ್ಧತಿಯ ವಿರುದ್ಧ ಕೆಲವು ಆಟಗಾರರು ಈಚೆಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಇದೀಗ ಮ್ಯಾಥ್ಯೂಸ್ ತಮ್ಮನ್ನು ಆಯ್ಕೆ ಮಾಡದಿರುವ ಕಾರಣ ಈ ಕ್ರಮಕ್ಕೆ ಮುಂದಾಗಿದ್ದಾರೆನ್ನಲಾಗಿದೆ.

# ಒಲಿಂಪಿಯನ್ ಹಾಕಿ ಪಟು ಕೇಶವ ದತ್ತ ಇನ್ನಿಲ್ಲ

ನವದೆಹಲಿ (ಪಿಟಿಐ): 1948 ಮತ್ತು 1952ರ ಒಲಿಂಪಿಕ್ಸ್‌ಗಳಲ್ಲಿ ಚಿನ್ನ ಗೆದ್ದ ಭಾರತ ಹಾಕಿ ತಂಡದ ಆಟಗಾರ ಕೇಶವ ದತ್ತ(95) ವಯೋಸಹಜ ಕಾಯಿಲೆಗಳಿಂದಾಗಿ ಬುಧವಾರ ಕೋಲ್ಕತ್ತದ ನಿವಾಸದಲ್ಲಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ.

ಅವರ ಪತ್ನಿ ಮತ್ತು ಪುತ್ರರು ವಿದೇಶಗಳಲ್ಲಿ ನೆಲೆಸಿದ್ದು, ಕೇಶವ ಅವರು ಏಕಾಂತ ಜೀವನ ನಡೆಸುತ್ತಿದ್ದರು.

1925ರ ಡಿಸೆಂಬರ್ 29ರಂದು ಲಾಹೋರ್‌ನಲ್ಲಿ ಜನಿಸಿದ್ದ ಕೇಶವ ದತ್ತ, ದೇಶ ವಿಭಜನೆಯ ಬಳಿಕ ಕೋಲ್ಕತ್ತಾದಲ್ಲಿ ನೆಲೆಸಿದರು. ಭಾರತ ಹಾಕಿಯ ಸುವರ್ಣಯುಗದಲ್ಲಿ ಅವರು ತಂಡದ ಭಾಗವಾಗಿದ್ದರು.1948ರ ಲಂಡನ್ ಒಲಿಂಪಿಕ್ಸ್ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಆತಿಥೇಯ ಬ್ರಿಟನ್ ತಂಡವನ್ನು ಮಣಿಸಿ ಪ್ರಶಸ್ತಿಗೆ ಮುತ್ತಿಕ್ಕಿತ್ತು. ವೆಂಬ್ಲಿ ಕ್ರೀಡಾಂಗಣದಲ್ಲಿ ನಡೆದಿದ್ದ ಈ ಹಣಾಹಣಿಯಲ್ಲಿ ಭಾರತಕ್ಕೆ 4–0 ಜಯ ಒಲಿದಿತ್ತು. ಸ್ವಾತಂತ್ರ್ಯಾನಂತರ ತಂಡವು ಜಯಿಸಿದ ಮೊದಲ ಚಿನ್ನ ಇದಾಗಿತ್ತು.



ಕೇಶವ ದತ್ತ

ಇದಕ್ಕೂ ಮೊದಲು 1947ರಲ್ಲಿ ಹಾಕಿ ಮಾಂತ್ರಿಕ ಧ್ಯಾನ್ ಚಂದ್ ನಾಯಕತ್ವದಲ್ಲಿ ಭಾರತ ತಂಡವು ಪೂರ್ವ ಆಫ್ರಿಕಾ ಪ್ರವಾಸ ಕೈಗೊಂಡಾಗ ಕೇಶವ ತಂಡದಲ್ಲಿದ್ದರು.

1952ರ ಹೆಲ್ಸಿಂಕಿ ಒಲಿಂಪಿಕ್ಸ್‌ನ ಫೈನಲ್ ಪಂದ್ಯದಲ್ಲಿ ಭಾರತ 6–0ಯಿಂದ ನೆದರ್ಲೆಂಡ್ಸ್ ತಂಡವನ್ನು ಪರಾಭವಗೊಳಿಸಿ, ಸತತ ಐದನೇ ಬಾರಿ ಚಿನ್ನಕ್ಕೆ ಕೊರಳೊಡ್ಡಿತ್ತು.